ಸಂಪುಟ 6, ಸಂಚಿಕೆ 10

ನವೆಂಬರ್ 16-30, 2025

ಉಚಿತ ವಿತರಣೆಗಾಗಿ

# ನ್ಯೂ ಇಂಡಿಯಾ ಸಮಾಚಾರ




## ವಿಕಸಿತ ಭಾರತದ ಸಾರಥಿಗಳು

# ಇಂದಿನ ಮಕ್ಕಳೇ ನಾಳೆಯ ಭವಿಷ್ಯ

ವಿಶ್ವ ಮಕ್ಕಳ ದಿನಾಚರಣೆ (ನವೆಂಬರ್ 20) ವಿಶೇಷ: ವಿಕಸಿತ ಭಾರತದ ದೃಷ್ಟಿಕೋನವು ಮಕ್ಕಳ ಸಮೃದ್ಧ ಭವಿಷ್ಯದೊಂದಿಗೆ ಆಳವಾಗಿ ಬೆಸೆದುಕೊಂಡಿದೆ, ಇದಕ್ಕಾಗಿ ಕೇಂದ್ರ ಸರ್ಕಾರವು ಯುವ ಮನಸ್ಸುಗಳನ್ನು ಪೋಷಿಸುತ್ತಿದೆ, ಅದು ರಾಷ್ಟ್ರದ ನಾಳೆಗಳನ್ನು ಬಲಪಡಿಸುತ್ತದೆ ಮತ್ತು ರೂಪಿಸುತ್ತದೆ

ಇ-ಪ್ರತಿಗಾಗಿ

# ಸಾಕಾರವಾದ "ವಂದೇ ಮಾತರಂ" ಭಾರತದ ಅಮರ ಚೇತನ



*'ಮನ್ ಕಿ ಬಾತ್' ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ದೇಶದ ನಾಗರಿಕರ ನಡುವಿನ ನೇರ ಸಂವಾದದ ವೇದಿಕೆಯಾಗಿದೆ. ಇದು ರಾಷ್ಟ್ರದ ವೈವಿಧ್ಯತೆ, ಶಕ್ತಿ ಮತ್ತು ಸೇವಾ ಮನೋಭಾವವನ್ನು ಒಟ್ಟುಗೂಡಿಸುವುದಲ್ಲದೆ ಒಳಿತು ಮಾಡಲು ಜನರನ್ನು ಪ್ರೇರೇಪಿಸುತ್ತದೆ. ಈ ಕಾರ್ಯಕ್ರಮಕ್ಕಾಗಿ ಪ್ರಧಾನಮಂತ್ರಿ ಮೋದಿ ಹಲವಾರು ಸಂದೇಶಗಳನ್ನು ಸ್ವೀಕರಿಸುತ್ತಾರೆ, ಇದರಲ್ಲಿ ಅವರು ಸಮಾಜ ಮತ್ತು ಜಗತ್ತನ್ನು ಪರಿವರ್ತಿಸುವ ಅಸಾಧಾರಣ ಜನರ ಬಗ್ಗೆ ಚರ್ಚಿಸುತ್ತಾರೆ. 'ಮನ್ ಕಿ ಬಾತ್' ನ 127ನೇ ಸಂಚಿಕೆಯಲ್ಲಿ, ಪ್ರಧಾನಮಂತ್ರಿ ಮೋದಿ ಹಲವಾರು ವಿಷಯಗಳ ಬಗ್ಗೆ ತಮ್ಮ ಆಲೋಚನೆಗಳನ್ನು ಹಂಚಿಕೊಂಡರು. ಸಂಪಾದಿಸಿದ ಆಯ್ದ ಭಾಗಗಳನ್ನು ಓದಿ...*

- **ಮಾವೋವಾದ ಪೀಡಿತ ಪ್ರದೇಶಗಳಲ್ಲಿ ಈಗ ಸಂತಸದ ಜ್ಯೋತಿ:** ಒಂದು ಕಾಲದಲ್ಲಿ ಮಾವೋವಾದಿ ಭಯೋತ್ಪಾದನೆಯ ಕತ್ತಲೆ ಮೇಲುಗೈ ಸಾಧಿಸಿದ್ದ ಪ್ರದೇಶಗಳಲ್ಲಿಯೂ ಈ ಬಾರಿ ಸಂತಸದ ಜ್ಯೋತಿಗಳನ್ನು ಬೆಳಗಿಸಲಾಯಿತು. ಜನರು ತಮ್ಮ ಮಕ್ಕಳ ಭವಿಷ್ಯವನ್ನು ಅಪಾಯಕ್ಕೆ ಸಿಲುಕಿಸಿದ್ದ ಮಾವೋವಾದಿ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಬಯಸುತ್ತಾರೆ.
- **ಸಕಾರಾತ್ಮಕ ಧೋರಣೆ:** ಹಬ್ಬಗಳ ಸಂದರ್ಭದಲ್ಲಿ ನಾನು ನನ್ನ ಭಾವನೆಗಳನ್ನು ಎಲ್ಲರಿಗೂ ಪತ್ರ ಬರೆದು ಹಂಚಿಕೊಂಡಿದ್ದೇನೆ. ಖಾದ್ಯ ತೈಲ ಬಳಕೆಯನ್ನು ಶೇಕಡಾ 10 ರಷ್ಟು ಕಡಿಮೆ ಮಾಡುವಂತೆ ನಾನು ಒತ್ತಾಯಿಸಿದ್ದೆ ಮತ್ತು ಜನರು ಇದಕ್ಕೆ ಬಹಳ ಸಕಾರಾತ್ಮಕ ಸ್ಪಂದನೆ ತೋರಿದ್ದಾರೆ.
- **ಅರೆಸೈನಿಕ ಪಡೆಗಳಲ್ಲಿ ಭಾರತೀಯ ತಳಿಯ ನಾಯಿಗಳ ಸಂಖ್ಯೆ ಹೆಚ್ಚುತ್ತಿದೆ:** ಬಿಎಸ್ಎಫ್ ಮತ್ತು ಸಿ.ಆರ್.ಪಿ.ಎಫ್ ತಮ್ಮ ತುಕಡಿಗಳಲ್ಲಿ ಭಾರತೀಯ ತಳಿಯ ನಾಯಿಗಳ ಸಂಖ್ಯೆಯನ್ನು ಹೆಚ್ಚಿಸಿದೆ. ಶ್ವಾನ ತರಬೇತಿಗಾಗಿ ಬಿಎಸ್ಎಫ್ ನ ರಾಷ್ಟ್ರೀಯ ತರಬೇತಿ ಕೇಂದ್ರವು ಗ್ವಾಲಿಯರ್ ನ ತೇಕನ್ಪುರದಲ್ಲಿದೆ. ಬೆಂಗಳೂರಿನ ಸಿ.ಆರ್.ಪಿ.ಎಫ್ ನ ಶ್ವಾನ ಸಂತಾನೋತ್ಪತ್ತಿ ಮತ್ತು ತರಬೇತಿ ಶಾಲೆಯಲ್ಲಿ ಭಾರತೀಯ ನಾಯಿಗಳಾದ ಮಂಗ್ರೆಲ್ಸ್, ಮುಧೋಳ್, ಹೌಂಡ್ಸ್, ಕೊಂಬೈ ಮತ್ತು ಪಾಂಡಿಕೋನಾಗಳಿಗೆ ತರಬೇತಿ ನೀಡಲಾಗುತ್ತಿದೆ.
- **ರಾಷ್ಟ್ರವು ಸರ್ದಾರ್ ಪಟೇಲ್ ಅವರಿಗೆ ಋಣಿಯಾಗಿದೆ:** ಸರ್ದಾರ್ ಪಟೇಲ್ ಆಧುನಿಕ ಯುಗಮಾನದ ದೇಶದ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ. ಖೇಡಾ ಸತ್ಯಾಗ್ರಹದಿಂದ ಹಿಡಿದು ಬೋರ್ಸಾದ್ ಸತ್ಯಾಗ್ರಹದವರೆಗೆ ಹಲವಾರು ಚಳವಳಿಗಳಿಗೆ ಅವರು ನೀಡಿದ ಕೊಡುಗೆ ಇಂದಿಗೂ ಸ್ಮರಣೀಯವಾಗಿವೆ. ಅಹ್ಮದಾಬಾದ್ ಮುನ್ಸಿಪಲ್ ಕಾರ್ಪೊರೇಷನ್ ನ ಮುಖ್ಯಸ್ಥರಾಗಿ ಅವರ ಅಧಿಕಾರಾವಧಿ ಐತಿಹಾಸಿಕವಾಗಿತ್ತು. ಉಪ ಪ್ರಧಾನಮಂತ್ರಿಯಾಗಿ ಮತ್ತು ಗೃಹ ಸಚಿವರಾಗಿ ಅವರ ಕೊಡುಗೆಗಳಿಗಾಗಿ ನಾವು ಅವರಿಗೆ ಸದಾ ಋಣಿಯಾಗಿರುತ್ತೇವೆ.
- **ಕಾಫಿ ಕೃಷಿ:** ಒಡಿಶಾದ ಕೋರಾಪುಟ್ ಕಾಫಿ ಊಹಿಸಲೂ ಆಗದಷ್ಟು ರುಚಿಕರವಾಗಿದೆ. ಇದರ ಕೃಷಿಯಿಂದ ಜನರಿಗೂ ಪ್ರಯೋಜನವಾಗುತ್ತಿದೆ. ಕೊರಾಪುಟ್ ನಲ್ಲಿ ಕೆಲವರು ತಮ್ಮ ಉತ್ಸಾಹದಿಂದ ಕಾಫಿ ಬೆಳೆಯುತ್ತಿದ್ದಾರೆ. ಕಾಫಿ ಅವರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತಂದಿದೆ. ಅವರು ಗೌರವ ಮತ್ತು ಸಮೃದ್ಧಿ ಎರಡನ್ನೂ ಗಳಿಸಿದ್ದಾರೆ.
- **'ವಂದೇ ಮಾತರಂ' ಗಾಯನ:** 'ವಂದೇ ಮಾತರಂ' ಎಂಬ ಗೀತೆಯ ಮೊದಲ ಪದವೇ ನಮ್ಮ ಹೃದಯದಲ್ಲಿ ಭಾವನೆಗಳನ್ನು ಜಾಗೃತಗೊಳಿಸುತ್ತದೆ. ಇದು ಬಹು ಭಾವನೆಗಳನ್ನು ಒಳಗೊಂಡಿದ್ದು, ತುಂಬಾ ಚೈತನ್ಯಶಾಲಿಯಾಗಿದೆ. ಸರಳವಾಗಿ ಹೇಳುವುದಾದರೆ, ಇದು ಭಾರತ ಮಾತೆಯ ತಾಯಿಯ ವಾತ್ಸಲ್ಯವನ್ನು ಅನುಭವಿಸುವಂತೆ ಮಾಡುತ್ತದೆ. 'ವಂದೇ ಮಾತರಂ' ಘೋಷಣೆಯು 140 ಕೋಟಿ ಭಾರತೀಯರಲ್ಲಿ ಏಕತೆಯ ಶಕ್ತಿಯನ್ನು ತುಂಬುತ್ತದೆ.
- **ನವ ಜೀವ ತುಂಬುವುದು:** ದೇಶಭಕ್ತಿ... ಭಾರತ ಮಾತೆಯ ಮೇಲಿನ ಪ್ರೀತಿ... ಇದು ಪದಗಳನ್ನು ಮೀರಿದ ಭಾವನೆಯಾಗಿದ್ದರೆ, ಆ ಅಮೂರ್ತ ಭಾವನೆಗೆ ಸ್ಪಷ್ಟವಾದ ಧ್ವನಿ ರೂಪವನ್ನು ನೀಡುವ ಹಾಡು 'ವಂದೇ ಮಾತರಂ' ಆಗಿದೆ. ಶತಮಾನಗಳ ಗುಲಾಮಗಿರಿಯಿಂದ ದುರ್ಬಲಗೊಂಡ ಭಾರತಕ್ಕೆ ಹೊಸ ಚೈತನ್ಯವನ್ನು ತುಂಬಲು ಬಂಕಿಮ್ ಚಂದ್ರ ಚಟರ್ಜಿ ಅವರು ಇದನ್ನು ರಚಿಸಿದರು.
- **ಸಂಸ್ಕೃತಕ್ಕೆ ನವ ಜೀವನ:** ಸಂಸ್ಕೃತದ ಉಲ್ಲೇಖವು ನಮ್ಮ ಧರ್ಮಗ್ರಂಥಗಳು, ವೇದಗಳು, ಉಪನಿಷತ್ತುಗಳು, ಪುರಾಣಗಳು, ಶಾಸ್ತ್ರಗಳು, ಪ್ರಾಚೀನ ಜ್ಞಾನ, ವಿಜ್ಞಾನ, ಆಧ್ಯಾತ್ಮಿಕತೆ ಮತ್ತು ತತ್ವಶಾಸ್ತ್ರಗಳನ್ನು ನೆನಪಿಗೆ ತರುತ್ತದೆ. ಒಂದು ಕಾಲದಲ್ಲಿ, ಸಂಸ್ಕೃತವು ಈ ಎಲ್ಲದರ ಜೊತೆಗೆ ಸಂಭಾಷಣೆಯ ಭಾಷೆಯಾಗಿತ್ತು. ಸಂಸ್ಕೃತಿ ಮತ್ತು ಸಾಮಾಜಿಕ ಮಾಧ್ಯಮ ಜಗತ್ತು ಸಂಸ್ಕೃತಕ್ಕೆ ನವ ಜೀವ ನೀಡಿದೆ.
- **ಕೊಮರಂ ಭೀಮ್ ಬಗ್ಗೆ ತಿಳಿಯಿರಿ:** ಅಕ್ಟೋಬರ್ 22 ರಂದು ಕೊಮರಂ ಭೀಮ್ ಅವರ ಜನ್ಮದಿನವನ್ನು ಆಚರಿಸಲಾಯಿತು. ಕೊಮರಂ ಭೀಮ್ ದೀರ್ಘಕಾಲ ಬದುಕಲಿಲ್ಲ; ಅವರು ಕೇವಲ 40 ವರ್ಷಗಳ ಕಾಲ ಬದುಕಿದ್ದರು, ಆದರೆ ಅವರ ಜೀವಿತಾವಧಿಯಲ್ಲಿ, ಅವರು ಅಸಂಖ್ಯಾತ ಜನರ, ವಿಶೇಷವಾಗಿ ಬುಡಕಟ್ಟು ಸಮುದಾಯದ ಹೃದಯದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದಾರೆ. ಅವರ ಬಗ್ಗೆ ಹೆಚ್ಚು ತಿಳಿಯಲು ಪ್ರಯತ್ನಿಸಬೇಕೆಂದು ನಾನು ಯುವಜನರಲ್ಲಿ ಮನವಿ ಮಾಡುತ್ತೇನೆ.

*'ಮನ್ ಕಿ ಬಾತ್' ಕೇಳಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.*

11ನೇ ಸಂವಿಧಾನ ದಿನ | 26 ನವೆಂಬರ್ 2025

# ಪ್ರಜಾಪ್ರಭುತ್ವದ ಶಕ್ತಿ ಜನರ ಸಂಕಲ್ಪ

ಭಾರತೀಯ ಪ್ರಜಾಪ್ರಭುತ್ವ ಎದುರಿಸಿದ ತುರ್ತು ಪರಿಸ್ಥಿತಿಯ ಅತ್ಯಂತ ಅಪಾಯಕಾರಿ ಸಮಯವನ್ನೂ ನಮ್ಮ ಸಂವಿಧಾನವು ತಾಳಿಕೊಂಡಿದ್ದು, ರಾಷ್ಟ್ರದ ಪ್ರತಿಯೊಂದು ಅಗತ್ಯ ಮತ್ತು ಆಕಾಂಕ್ಷೆಗಳನ್ನು ಪೂರೈಸಿದೆ. ಡಾ. ಭೀಮರಾವ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವು ನೀಡಿದ ಶಕ್ತಿಯಿಂದಾಗಿಯೇ ಇಂದು ಸಂವಿಧಾನವು ಜಮ್ಮು ಮತ್ತು ಕಾಶ್ಮೀರಕ್ಕೂ ಅನ್ವಯವಾಗುತ್ತಿದೆ. ಭಾರತವು ಪರಿವರ್ತನೆಯ ಮಹತ್ವದ ಹಂತವನ್ನು ಎದುರಿಸುತ್ತಿದೆ ಮತ್ತು ಈ ಪಯಣದಲ್ಲಿ, ಸಂವಿಧಾನವು ಮಾರ್ಗದರ್ಶಿ ಬೆಳಕಾಗಿ ಕಾರ್ಯನಿರ್ವಹಿಸುತ್ತದೆ, ಸರಿಯಾದ ಮಾರ್ಗವನ್ನು ತೋರಿಸುತ್ತದೆ. ಇದೇ ಸಂವಿಧಾನದ ಬೆಳಕಿನಲ್ಲಿ, ಭಾರತವು ಈಗ ತನ್ನ ಭವಿಷ್ಯದ ಹಾದಿಯನ್ನು ರೂಪಿಸುವಲ್ಲಿ ತೊಡಗಿದೆ, ಮಹಾನ್ ಕನಸುಗಳು ಮತ್ತು ಉತ್ತಮ ಸಂಕಲ್ಪಗಳನ್ನು ಸಾಧಿಸಲು ಶ್ರಮಿಸುತ್ತಿದೆ - ಇಂದು, ಪ್ರತಿಯೊಬ್ಬ ನಾಗರಿಕನ ಗುರಿ ವಿಕಸಿತ ಭಾರತವನ್ನು ನಿರ್ಮಿಸುವುದಾಗಿದೆ.

> **“ನಮ್ಮ ಸಂವಿಧಾನದ ಮೂಲ ಹಸ್ತಪ್ರತಿಯಲ್ಲಿ, ಭಗವಾನ್ ಶ್ರೀ ರಾಮ, ಮಾತಾ ಸೀತೆ, ಭಗವಾನ್ ಹನುಮಾನ್, ಭಗವಾನ್ ಬುದ್ಧ, ಭಗವಾನ್ ಮಹಾವೀರ ಮತ್ತು ಗುರು ಗೋವಿಂದ್ ಸಿಂಗ್ ಜಿ ಅವರ ಚಿತ್ರಣಗಳಿವೆ - ಇವೆಲ್ಲವೂ ಭಾರತದ ಶ್ರೀಮಂತ ಸಂಸ್ಕೃತಿಯ ಸಂಕೇತಗಳಾಗಿವೆ. ಈ ದೃಷ್ಟಾಂತಗಳನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ, ಇದರಿಂದ ಅವು ನಮಗೆ ನಿರಂತರವಾಗಿ ಮಾನವೀಯ ಮೌಲ್ಯಗಳನ್ನು ಸ್ಮರಿಸುತ್ತವೆ. ಈ ಮಾನವೀಯ ಮೌಲ್ಯಗಳು ಇಂದಿನ ಭಾರತದ ನೀತಿಗಳು ಮತ್ತು ನಿರ್ಧಾರಗಳ ಅಡಿಪಾಯವನ್ನು ರೂಪಿಸುತ್ತವೆ.**
>
> ನರೇಂದ್ರ ಮೋದಿ, ಪ್ರಧಾನಮಂತ್ರಿ



# ನ್ಯೂ ಇಂಡಿಯಾ ಸಮಾಚಾರ

**ಸಂಪುಟ 6, ಸಂಚಿಕೆ 10 | ನವೆಂಬರ್ 16-30, 2025**



ಪ್ರಧಾನ ಸಂಪಾದಕರು
**ಧೀರೇಂದ್ರ ಓಝಾ**
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯುರೋ
ನವದೆಹಲಿ

ಹಿರಿಯ ಸಲಹಾ ಸಂಪಾದಕ
**ಸಂತೋಷ್ ಕುಮಾರ್**

ಸಲಹಾ ಸಂಪಾದಕ
**ವಿಭೋರ್ ಶರ್ಮಾ**

ಹಿರಿಯ ಸಹಾಯಕ ಸಲಹಾ ಸಂಪಾದಕ
**ಪವನ್ ಕುಮಾರ್**

ಸಹಾಯಕ ಸಲಹಾ ಸಂಪಾದಕ
**ಅಖಿಲೇಶ್ ಕುಮಾರ್**
**ಚಂದನ್ ಕುಮಾರ್ ಚೌಧರಿ**

ಭಾಷಾ ಸಂಪಾದಕರು
**ಸುಮಿತ್ ಕುಮಾರ್** (ಇಂಗ್ಲಿಷ್)
**ರಜನೀಶ್ ಮಿಶ್ರಾ** (ಇಂಗ್ಲಿಷ್)
**ನದೀಮ್ ಅಹ್ಮದ್** (ಉರ್ದು)

ಪ್ರಧಾನ ವಿನ್ಯಾಸಕರು
**ಶ್ಯಾಮ್ ತಿವಾರಿ**

ಹಿರಿಯ ವಿನ್ಯಾಸಕರು
**ಫೂಲ್ ಚಂದ್ ತಿವಾರಿ**

ವಿನ್ಯಾಸಕರು
**ಅಭಯ್ ಗುಪ್ತಾ**
**ಸತ್ಯಂ ಸಿಂಗ್**




**13 ಭಾಷೆಗಳಲ್ಲಿ ಲಭ್ಯವಿರುವ ನವಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ**
https://newindiasamachar.pib.gov.in/news.aspx

ನ್ಯೂ ಇಂಡಿಯಾ ಸಮಾಚಾರ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in.archive.aspx

**'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಅಪ್ಡೇಟ್‌ಗಳಿಗಾಗಿ @NISPIBIndia ಅನ್ನು ಟ್ವಿಟ್ಟರ್‌ನಲ್ಲಿ ಅನುಸರಿಸಿ**

# ಒಳ ಪುಟಗಳಲ್ಲಿ...



**ಮುಖಪುಟ ಲೇಖನ**

**ವಿಕಸಿತ ಭಾರತದ ಸಾರಥಿಗಳು**

## ಸಶಕ್ತ ಮಕ್ಕಳು ಸಮೃದ್ಧ ಭಾರತ

ಮಕ್ಕಳ ಕಲ್ಯಾಣಕ್ಕೆ ದಾರಿ ಮಾಡಿಕೊಡುವುದು

ನವೆಂಬರ್ 20 ರಂದು, ನಾವು ವಿಶ್ವ ಮಕ್ಕಳ ದಿನ ಮತ್ತು ವಿಶ್ವ ಮಕ್ಕಳ ಹಕ್ಕುಗಳ ದಿನವನ್ನು ಆಚರಿಸುತ್ತೇವೆ. ಈ ಸಂದರ್ಭದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರವು ಮಕ್ಕಳನ್ನು ಸಬಲೀಕರಣಗೊಳಿಸುವ ಮೂಲಕ ಭವಿಷ್ಯದ ಭಾರತದ ಅಡಿಪಾಯವನ್ನು ಹೇಗೆ ಭದ್ರಪಡಿಸುತ್ತಿದೆ ಎಂಬುದನ್ನು ತಿಳಿಯೋಣ... | 10-27

**ಭಾರತೀಯ ನೌಕಾಪಡೆಯೊಂದಿಗೆ ದೀಪಾವಳಿ ಆಚರಿಸಿದ ಪ್ರಧಾನ ಮಂತ್ರಿ**



ಗೋವಾ ಮತ್ತು ಕಾರವಾರದ ಪಶ್ಚಿಮ ಸಮುದ್ರ ತೀರದಲ್ಲಿ ದೇಶದ ಶೌರ್ಯಶಾಲಿ ನೌಕಾ ಸಿಬ್ಬಂದಿಯೊಂದಿಗೆ ಐಎನ್‌ಎಸ್ ವಿಕ್ರಾಂತ್ ನಲ್ಲಿ ದೀಪಾವಳಿ ಆಚರಿಸಿದ ಪ್ರಧಾನಮಂತ್ರಿ ಮೋದಿ. | 28-29

**ಪ್ರಧಾನಮಂತ್ರಿಯವರ ಉಡುಗೊರೆಗಳ ಇ-ಹರಾಜು**



ಹರಾಜಿನ 7ನೇ ಆವೃತ್ತಿಯಿಂದ ಸಂಗ್ರಹಿಸಿದ ಆದಾಯ ನಮಾಮಿ ಗಂಗೆ ಯೋಜನೆಗೆ ಸಮರ್ಪಣೆ. | 46-47


**ವ್ಯಕ್ತಿತ್ವ: ಝಲ್ಕರಿ ಬಾಯಿ**
1857ರ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ರಾಣಿ ಲಕ್ಷ್ಮೀಬಾಯಿ ಅವರ ನಿಕಟವರ್ತಿ | 5

**ಸುದ್ದಿ ತುಣುಕುಗಳು** | 6-7

**ಏರುತ್ತಿದೆ ಭಾರತದ ಆತ್ಮವಿಶ್ವಾಸ**
ರಫೇಲ್ ವಿಮಾನದಲ್ಲಿ ಹಾರಾಟ ನಡೆಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು | 8

**8ನೇ ವೇತನ ಆಯೋಗದ ಉಲ್ಲೇಖಿತ ನಿಯಮಕ್ಕೆ ಅನುಮೋದನೆ**
ಕೇಂದ್ರ ಸಚಿವ ಸಂಪುಟದಿಂದ ಹಲವಾರು ಪ್ರಮುಖ ಪ್ರಸ್ತಾಪಗಳಿಗೆ ಅನುಮೋದನೆ | 9

**ಸಮುದ್ರದ ಮೂಲಕ ಸಮೃದ್ಧಿಗೆ ದಾರಿ**
ಭಾರತ ಕಡಲ ಸಪ್ತಾಹದಲ್ಲಿ ಭಾರತದ ದೃಷ್ಟಿಕೋನವನ್ನು ಹಂಚಿಕೊಂಡ ಪ್ರಧಾನಮಂತ್ರಿ ಮೋದಿ | 30-31

**ಆಶ್ರಯ ಮತ್ತು ಜೀವನೋಪಾಯ ಎರಡನ್ನೂ ಒದಗಿಸುವುದು**
ಪ್ರಧಾನಮಂತ್ರಿ ವಸತಿ ಯೋಜನೆ(ಗ್ರಾ)ಯ 9 ನೇ ವಾರ್ಷಿಕೋತ್ಸವ | 32-33

**ಯುವ ಶಕ್ತಿಯೇ ಅತಿದೊಡ್ಡ ಶಕ್ತಿ**
ರೋಜ್ಗಾರ್ ಮೇಳದಲ್ಲಿ 51,000+ ನೇಮಕಾತಿ ಪತ್ರಗಳ ವಿತರಣೆ | 34-35

**ಏಕತಾ ದಿವಸ: ಒಂದು ರಾಷ್ಟ್ರ, ಅಚಲ ಸಂಕಲ್ಪ**
ಸರ್ದಾರ್ ಪಟೇಲ್ ಅವರ 150ನೇ ಜನ್ಮ ದಿನಾಚರಣೆಯಂದು ಪ್ರಧಾನಮಂತ್ರಿ ಮೋದಿಯವರ ಭಾಷಣ | 36-37

**ಭಾರತದ ಅಭಿವೃದ್ಧಿಗೆ ಚಾಲನೆ ನೀಡುತ್ತಿರುವ ಛತ್ತೀಸ್ ಗಢ**
ಛತ್ತೀಸ್ ಗಢದ ರಜತ ಮಹೋತ್ಸವದಲ್ಲಿ ಹಲವು ಅಭಿವೃದ್ಧಿ ಉಡುಗೊರೆಗಳನ್ನು ಅನಾವರಣಗೊಳಿಸಿದ ಪ್ರಧಾನಮಂತ್ರಿ ನರೇಂದ್ರಮೋದಿ | 38-39

**ಇತಿಹಾಸದ ಹಾದಿಯ ಮರು ವ್ಯಾಖ್ಯಾನ**
ಸಮಾಜ ಸುಧಾರಣೆ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಮುಂಚೂಣಿಯಲ್ಲಿರುವ ಆರ್ಯ ಸಮಾಜದ 150ನೇ ವಾರ್ಷಿಕೋತ್ಸವ | 40-41

**ಈಗ ಸಂಶೋಧನೆಯನ್ನು ಸುಗಮಗೊಳಿಸುವತ್ತ ಗಮನ ಹರಿಸಿದೆ ಭಾರತ**
ಉದಯೋನ್ಮುಖ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ ಸಮಾವೇಶ 2025 ರಲ್ಲಿ ಪ್ರಧಾನಮಂತ್ರಿಯವರ ಭಾಷಣ | 42-43

**ಜಾಗತಿಕ ಅವಕಾಶಗಳಿಗೆ ಚಾಲನೆ ನೀಡುತ್ತಿರುವ ಭಾರತದ ಬೆಳವಣಿಗೆ**
ಎನ್‌ಡಿಟಿವಿ ವಿಶ್ವ ಶೃಂಗಸಭೆ 2025ರಲ್ಲಿ ಪ್ರಧಾನಿ ಮೋದಿ ಭಾಷಣ | 44-45

**500 ಗಿಗಾವ್ಯಾಟ್ ಮೀರಿದ ಸ್ಥಾಪಿತ ಇಂಧನ ಸಾಮರ್ಥ್ಯ**
ಪರಮಾಣು ಶಕ್ತಿಯು ಶುದ್ಧ ಇಂಧನಕ್ಕೆ ಹೊಸ ದ್ವಾರ ತೆರೆಯುತ್ತದೆ | 48



**Published & Printed By:** Kanchan Prasad, Director General, on behalf of Central Bureau Of Communication.
**Printed At:** Kaveri Print Process Pvt. Ltd. A-104, Sec-65, Noida-201301 U.P.
**Communication Address:** Room No–1077, Soochna Bhwan, CGO Complex, New Delhi-110003.
**e-mail:** response-nis@pib.gov.in, **RNI No.:** DELKAN/2020/78828

# ಸಂಪಾದಕೀಯ

# ಸಶಕ್ತ ಮಕ್ಕಳು, ಸಮೃದ್ಧ ಭಾರತ: ರಾಷ್ಟ್ರದ ಭವಿಷ್ಯಕ್ಕೆ ಚೈತನ್ಯ

**ಶುಭಾಶಯಗಳು!**

ಸಂಸ್ಕೃತ ಶ್ಲೋಕವೊಂದರಲ್ಲಿ ಹೇಳುವಂತೆ,
"यथा बीजं तथा फलम्" – ಬೀಜಕ್ಕೆ ತಕ್ಕಂತೆ ಫಲ ಸಿಗುತ್ತದೆ. ಇಂದು ಮಕ್ಕಳಲ್ಲಿ ಬೆಳೆಸಲಾದ ಮೌಲ್ಯಗಳು ಮತ್ತು ಅವರ ಆರೋಗ್ಯ ಮತ್ತು ಶಿಕ್ಷಣಕ್ಕೆ ನೀಡಲಾದ ಆದ್ಯತೆಯು ರಾಷ್ಟ್ರದ ಭವಿಷ್ಯವನ್ನು ರೂಪಿಸುತ್ತದೆ. ಈ ವಿಧಾನವು ಭಾರತದ ಅಮೃತ್ ಪೀಳಿಗೆಯನ್ನು ಸಿದ್ಧಪಡಿಸುತ್ತಿದೆ.

ಭಾರತವು ಅಚ್ಚಳಿಯದ ಖ್ಯಾತಿಯಿಂದ ಅಸ್ಮಿತೆಯೊಂದಿಗೆ ಯಶಸ್ಸಿನ ಹೊಸ ಉತ್ತುಂಗವನ್ನು ತಲುಪುತ್ತಿದೆ. ಇದು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ತನ್ನ ಸಂಕಲ್ಪವನ್ನು ಸಾಧಿಸುವತ್ತ ಸಾಗುತ್ತಿದೆ. ಇಂದು ಭಾರತಕ್ಕೆ ಅಸಾಧ್ಯವಾದುದು ಯಾವುದೂ ಇಲ್ಲ. ಭಾರತದ ವೃದ್ಧಿಸುತ್ತಿರುವ ಶಕ್ತಿಯು ಪ್ರತಿಯೊಂದು ಕ್ಷೇತ್ರದಲ್ಲೂ ಹೊಸ ಸಾಧ್ಯತೆಗಳನ್ನು ಸೃಷ್ಟಿಸುತ್ತಿದೆ.

ಆದರೆ ವಿಕಸಿತ ಭಾರತದ 'ಸಿದ್ಧಿ'ಯ ವಾಹಕರು ಯಾರು? ನಿಸ್ಸಂದೇಹವಾಗಿ, ಇಂದಿನ ಮಕ್ಕಳು. ಅವರು ಗಳಿಸುವ ಜ್ಞಾನ ಮತ್ತು ಮೌಲ್ಯಗಳು ಭಾರತದ ಭವಿಷ್ಯವನ್ನು ರೂಪಿಸುತ್ತವೆ. ಮಕ್ಕಳು ಆರೋಗ್ಯವಂತರಾಗಿದ್ದರೆ, ವಿದ್ಯಾವಂತರಾಗಿದ್ದರೆ, ಸಂಸ್ಕೃತಿಯಲ್ಲಿ ಬೇರೂರಿದ್ದರೆ ಮತ್ತು ವಿಜ್ಞಾನದಲ್ಲಿ ಪ್ರವೀಣರಾಗಿದ್ದರೆ, ಅವರು ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಮುನ್ನಡೆಸಬಹುದು. ಬಲಿಷ್ಠ ಕಟ್ಟಡಕ್ಕೆ ಭದ್ರ ಬುನಾದಿ ಅತ್ಯಗತ್ಯ ಇರುವಂತೆಯೇ, ಶಕ್ತಿಶಾಲಿ ನವ ಭಾರತಕ್ಕೆ ಪೋಷಣೆಯುಕ್ತ ಮತ್ತು ಆರೋಗ್ಯಕರ ಬಾಲ್ಯ ಅತ್ಯಗತ್ಯ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಕ್ಕಳ ಬಗ್ಗೆ ಹೊಂದಿರುವ ಆಳವಾದ ಬಾಂಧವ್ಯ ಎಲ್ಲರಿಗೂ ತಿಳಿದಿದೆ. ಪೋಷಣ್ ಅಭಿಯಾನ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಹಿಡಿದು ಅಟಲ್ ಇನ್ನೋವೇಶನ್ ಮಿಷನ್ ಮತ್ತು ಪರೀಕ್ಷಾ ಪೇ ಚರ್ಚಾದವರೆಗೆ, ಯುವ ಮನಸ್ಸುಗಳನ್ನು ಸಬಲೀಕರಣಗೊಳಿಸಲು ಮತ್ತು ಉನ್ನತೀಕರಿಸಲು ಅವರ ಉಪಕ್ರಮಗಳು ಗಮನಾರ್ಹ ಫಲಿತಾಂಶಗಳನ್ನು ನೀಡುತ್ತಿವೆ. ಅವರು ಹೆಣ್ಣುಮಕ್ಕಳ ಸುರಕ್ಷತೆ, ಘನತೆ ಮತ್ತು ಸಬಲೀಕರಣದ ಬಗ್ಗೆ ವಿಶೇಷ ಗಮನ ಹರಿಸಿದ್ದಾರೆ. ರಾಷ್ಟ್ರದ ಹೆಣ್ಣುಮಕ್ಕಳು ತಮಗಾಗಿ ಒಂದು ಸ್ಥಾನವನ್ನು ಕೆತ್ತುವುದು ಮಾತ್ರವಲ್ಲದೆ ಪ್ರತಿಯೊಂದು ಕ್ಷೇತ್ರದಲ್ಲೂ ಉತ್ತಮ ಸಾಧನೆ ಮಾಡುತ್ತಿದ್ದಾರೆ ಎಂದು ಅವರು ಹೆಮ್ಮೆಯಿಂದ ಅನೇಕ ಬಾರಿ ಪುನರುಚ್ಚರಿಸಿದ್ದಾರೆ.

ಕಳೆದ ಹನ್ನೊಂದು ವರ್ಷಗಳಲ್ಲಿ, ಪರಿವರ್ತನಾತ್ಮಕ ನೀತಿಗಳು, ಯೋಜನೆಗಳು ಮತ್ತು ಅಭಿಯಾನಗಳ ಸರಣಿಯು ಮಕ್ಕಳನ್ನು ನವ ಭಾರತದ ಸಾರಥಿಗಳನ್ನಾಗಿ ಪೋಷಿಸಲು ಪ್ರಯತ್ನಿಸಿದೆ - ರಾಷ್ಟ್ರದ ಭವಿಷ್ಯವನ್ನು ಬೆಳಗಿಸುವ ಜ್ಞಾನ ಮತ್ತು ಸಾಮರ್ಥ್ಯವು ಅವರನ್ನು ಸಜ್ಜುಗೊಳಿಸಿದೆ. ಈ ಪ್ರಯತ್ನಗಳು ವಿಶ್ವ ಮಕ್ಕಳ ದಿನದಂದು (ನವೆಂಬರ್ 20) ನಮ್ಮ ಮುಖಪುಟ ಲೇಖನದ ಸಾರವಾಗಿದೆ. ವ್ಯಕ್ತಿತ್ವ ವಿಭಾಗದಲ್ಲಿ, ಭಾರತದ ಅತ್ಯಂತ ಗೌರವಾನ್ವಿತ ಹೋರಾಟಗಾರ್ತಿ ಝಲ್ಕರಿ ಬಾಯಿ ಬಗ್ಗೆ ಓದಿ. ನವೆಂಬರ್ 20 ರಂದು ಪ್ರಧಾನ ಮಂತ್ರಿ ವಸತಿ ಯೋಜನೆ-ಗ್ರಾಮೀಣ್ ನ ಒಂಬತ್ತನೇ ವಾರ್ಷಿಕೋತ್ಸವದ ವಿಷಯದ ಜೊತೆಗೆ ಕೇಂದ್ರ ಸಚಿವ ಸಂಪುಟದ ಪ್ರಮುಖ ನಿರ್ಣಯಗಳು, ಪ್ರಧಾನಮಂತ್ರಿಯವರ ಸ್ಮರಣಿಕೆಗಳ ಇ-ಹರಾಜಿನ 7ನೇ ಆವೃತ್ತಿ, ರೋಜ್ಗಾರ್ ಮೇಳ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಹದಿನೈದು ದಿನಗಳ ಕಾರ್ಯಕ್ರಮಗಳನ್ನು ಈ ಸಂಚಿಕೆಯು ಎತ್ತಿ ತೋರಿಸುತ್ತದೆ. ಹೆಚ್ಚುವರಿಯಾಗಿ, ನಿಯತಕಾಲಿಕವು ಒಳ ಪುಟದಲ್ಲಿ ಮನ್ ಕಿ ಬಾತ್ ಅನ್ನು ಒಳಗೊಂಡಿದೆ, ಆದರೆ ಹಿಂದಿನ ಮುಖಪುಟವು ನವೆಂಬರ್ 24, 2025 ರಂದು ಆಚರಿಸಲಾದ ವೀರ್ ಲಾಸಿತ್ ಬೋರ್ಫುಕನ್ ಅವರ 403 ನೇ ಜನ್ಮ ದಿನಾಚರಣೆಯಂದು ಅವರಿಗೆ ಕೃತಜ್ಞತಾಪೂರ್ವಕವಾಗಿ ರಾಷ್ಟ್ರದ ಗೌರವದ ವಿಷಯವನ್ನೂ ಸಂಚಿಕೆ ಒಳಗೊಂಡಿದೆ.

***ನಿಮ್ಮ ಸಲಹೆಗಳನ್ನು ನಮಗೆ ಕಳುಹಿಸುತ್ತಿರಿ.***

(ಧೀರೇಂದ್ರ ಓಝಾ)

ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/ಡೌನ್ಲೋಡ್ ಮಾಡಿ.
*https://newindiasamachar.pib.gov.in/*

# ಅಂಚೆ ಪೆಟ್ಟಿಗೆ






### ಅತ್ಯಂತ ಉಪಯುಕ್ತ ಮತ್ತು ಆಳವಾದ ಮಾಹಿತಿಯಿಂದ ತುಂಬಿದೆ

ನ್ಯೂ ಇಂಡಿಯಾ ಸಮಾಚಾರ ಬಹಳ ಉಪಯುಕ್ತ ಮತ್ತು ಮಾಹಿತಿಯುಕ್ತ ನಿಯತಕಾಲಿಕವಾಗಿದೆ. ಅದರಲ್ಲಿ ಪ್ರಕಟವಾಗುವ ಸರ್ಕಾರದ ಯೋಜನೆಗಳು ಉಪಯುಕ್ತವಾಗಿವೆ. ನಾನು ಈ ಪತ್ರಿಕೆಯ ಕುರಿತು ಜನರಿಗೆ ಹೇಳುತ್ತಿದ್ದೇನೆ ಮತ್ತು ಅದನ್ನು ಓದುವಂತೆ ಅವರನ್ನು ಪ್ರೋತ್ಸಾಹಿಸುತ್ತಿದ್ದೇನೆ. ನಾನು ಬೀಡ್ ಜಿಲ್ಲಾ ಪರಿಷತ್ತಿನಲ್ಲಿ ಕೃಷಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ಈ ನಿಯತಕಾಲಿಕದಲ್ಲಿ ನೀಡಲಾದ ಮಾಹಿತಿಯು ನನ್ನ ಉಲ್ಲೇಖಕ್ಕೂ ತುಂಬಾ ಉಪಯುಕ್ತವಾಗಿದೆ.

**nitinraut121@gmail.com**

### ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಈ ನಿಯತಕಾಲಿಕವು ಬಹಳ ಸಹಕಾರಿ

ನ್ಯೂ ಇಂಡಿಯಾ ಸಮಾಚಾರ ರಾಷ್ಟ್ರದ ಹಿತದೃಷ್ಟಿಯಿಂದ ಭಾರತ ಸರ್ಕಾರದ ಕಲ್ಯಾಣ ಯೋಜನೆಗಳ ಬಗ್ಗೆ ನಮಗೆ ಮಾಹಿತಿ ನೀಡುವ ದೇಶದ ಏಕೈಕ ನಿಯತಕಾಲಿಕವಾಗಿದೆ. ನಾವು ಈ ನಿಯತಕಾಲಿಕವನ್ನು ತುಂಬಾ ಇಷ್ಟಪಡುತ್ತೇವೆ. ಇದನ್ನು ಅರಿವು ಮತ್ತು ಶೈಕ್ಷಣಿಕ ವಿಷಯದೊಂದಿಗೆ ಪ್ರಕಟಿಸಲಾಗುತ್ತಿದೆ, ಇದು ಶ್ಲಾಘನೀಯ. ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕವು ಸ್ವತಃ ಒಂದು ಸಂಪೂರ್ಣ ನಿಯತಕಾಲಿಕವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಈ ನಿಯತಕಾಲಿಕವು ಬಹಳ ಸಹಕಾರಿ. ಪತ್ರಿಕೆಯ ಹೊಸ ಸಂಚಿಕೆಗಾಗಿ ನಾನು ಕುತೂಹಲದಿಂದ ಕಾಯುತ್ತಿದ್ದೇನೆ..

**ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟ**

### ನನ್ನ ಜ್ಞಾನ ಮತ್ತು ವಿಶ್ಲೇಷಣಾತ್ಮಕ ಕೌಶಲ್ಯ ಹೆಚ್ಚಿಸುತ್ತಿದೆ

ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕವು ಪ್ರಚಲಿತ ಮಾಹಿತಿಯನ್ನು ಪಡೆಯಲು ನನಗೆ ಸಹಾಯ ಮಾಡುವುದಲ್ಲದೆ ನನ್ನ ಜ್ಞಾನ ಮತ್ತು ವಿಶ್ಲೇಷಣಾತ್ಮಕ ಕೌಶಲ್ಯಗಳನ್ನು ಹೆಚ್ಚಿಸುತ್ತಿದೆ. ಇದು ನನ್ನ ಪರೀಕ್ಷಾ ತಯಾರಿಯಲ್ಲಿ ನನಗೆ ಸಹಾಯ ಮಾಡುತ್ತದೆ. ಭಾರತ ಸರ್ಕಾರವು ಪ್ರಾರಂಭಿಸಿದ ಯೋಜನೆಗಳು, ಸುಧಾರಣೆಗಳು ಮತ್ತು ಉಪಕ್ರಮಗಳನ್ನು ಅರ್ಥಮಾಡಿಕೊಳ್ಳಲು ಇದು ಅಮೂಲ್ಯವಾದ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ.

**mr.devkant@gmail.com**

### ನಾನು ನಿಯಮಿತವಾಗಿ ಪ್ರಚಲಿತ ವಿದ್ಯಮಾನಗಳ ವಿಭಾಗವನ್ನು ಓದುತ್ತೇನೆ

ನನ್ನ ಹೆಸರು ಶ್ರೀಲಕ್ಷ್ಮಿ, ನಾನು ಸರ್ಕಾರಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದೇನೆ. ಇದಕ್ಕಾಗಿ, ನಾನು ನಿಯಮಿತವಾಗಿ ಪ್ರಚಲಿತ ವಿದ್ಯಮಾನಗಳ ವಿಭಾಗವನ್ನು ಓದುತ್ತೇನೆ. ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕದ ಆವೃತ್ತಿಗಳು ಅತ್ಯುತ್ತಮವಾಗಿವೆ. ನಾನು ಮೊದಲು ಈ ನಿಯತಕಾಲಿಕವನ್ನು ನನ್ನ ಕಚೇರಿಯಲ್ಲಿ ಓದಿದೆ. ನಾನು ಅದರ ಇ-ಪ್ರತಿಗಳನ್ನು ಡೌನ್ಲೋಡ್ ಮಾಡಿದ್ದೇನೆ. ಈ ನಿಯತಕಾಲಿಕವು ನನ್ನ ಜ್ಞಾನವನ್ನು ಪೋಷಿಸುತ್ತಿದೆ ಮತ್ತು ನನ್ನ ಗುರಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ತಲುಪಲು ನನಗೆ ಸಹಾಯ ಮಾಡುತ್ತಿದೆ.

**anjuranip79@gmail.com**

### ಸಮಗ್ರ ವ್ಯಾಪ್ತಿಯೊಂದಿಗೆ ಸರಳ ಮತ್ತು ಸ್ಪಷ್ಟ ಭಾಷೆ

ನಾನು ಪ್ರಸ್ತುತ ವಿವಿಧ ಸರ್ಕಾರಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದೇನೆ. ಪ್ರಸ್ತುತ ಘಟನೆಗಳು, ಸರ್ಕಾರದ ನೀತಿಗಳು ಮತ್ತು ಸಾಮಾಜಿಕ-ಆರ್ಥಿಕ ಬೆಳವಣಿಗೆಗಳ ಸಮಗ್ರ ಜ್ಞಾನವು ತುಂಬಾ ಪ್ರಯೋಜನಕಾರಿಯಾಗಿದೆ. ನ್ಯೂ ಇಂಡಿಯಾ ಸಮಾಚಾರ ಅಂತಹ ವಿಷಯಗಳ ಅಧಿಕೃತ, ವಿಶ್ವಾಸಾರ್ಹ ಮತ್ತು ಸಮಗ್ರ ಮಾಹಿತಿಯನ್ನು ಸರಳ ಮತ್ತು ಸ್ಪಷ್ಟ ರೀತಿಯಲ್ಲಿ ಒದಗಿಸುತ್ತದೆ ಎಂದು ನನಗೆ ತಿಳಿದಿದೆ.

**msrilakshmi6699@gmail.com**


Communication Address : Room No–1077, Soochna Bhawan, CGO Complex, New Delhi -110003. E-Mail: response-nis@pib.gov.in


आकाशवाणी समाचार
Akashvani

Scan the QR code to listen to New India Samachar on All India Radio FM Gold every Saturday-Sunday from 3:10 PM to 3:25 PM.



# ಅಸಾಧಾರಣ ಶೌರ್ಯದ ಮಹಿಳಾ ಸೇನಾನಿ

*ಝಲ್ಕರಿ ಬಾಯಿ ಅವರನ್ನು 1857ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ಪಾತ್ರ ವಹಿಸಿದ ಭಾರತದ ಅತ್ಯಂತ ಗೌರವಾನ್ವಿತ ಯೋಧರಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ. ಅವರು ಝಾನ್ಸಿ ಸೈನ್ಯದ ಮಹಿಳಾ ವಿಭಾಗವಾದ ದುರ್ಗಾದಳದ ಕಮಾಂಡರ್ ಆಗಿದ್ದರು. ಝಲ್ಕರಿ ಬಾಯಿ ರಾಣಿಯ ವೇಷದಲ್ಲಿ ಶತ್ರುಗಳನ್ನು ದಾರಿ ತಪ್ಪಿಸುವ ಹೋರಾಟ ನಡೆಸಿದರು.*

**ಜನನ: ನವೆಂಬರ್ 22, 1830, ಮರಣ: ಏಪ್ರಿಲ್ 4, 1857**

ಲಕ್ಷ್ಮೀ ಬಾಯಿ ಅವರ ಹೆಸರು ಎಲ್ಲರಿಗೂ ತಿಳಿದಿದೆ, ಸಾಟಿಯಿಲ್ಲದ ಶೌರ್ಯಕ್ಕಾಗಿ ಅವರನ್ನು ಗೌರವಿಸಲಾಗುತ್ತದೆ. ಅವರು ಬ್ರಿಟಿಷ್ ಸಾಮ್ರಾಜ್ಯದ ಅಡಿಪಾಯವನ್ನು ಅಲುಗಾಡಿಸಿದ್ದಲ್ಲದೆ, ಪ್ರತಿಯೊಬ್ಬ ಭಾರತೀಯನಲ್ಲೂ ರಾಷ್ಟ್ರೀಯತೆಯ ಭಾವನೆಯನ್ನು ಹುಟ್ಟುಹಾಕಿದರು. ಅವರ ಸೈನ್ಯದಲ್ಲಿ ಝಲ್ಕರಿ ಬಾಯಿ ಎಂಬ ಶೌರ್ಯಶಾಲಿ ಯೋಧಳಿದ್ದಳು, ಆಕೆ ರಾಣಿ ಲಕ್ಷ್ಮೀಬಾಯಿಯ ಮಹಿಳಾ ವಿಭಾಗವಾದ ದುರ್ಗಾದಳದ ಕಮಾಂಡರ್ ಆಗಿದ್ದರು. ಅವರು ಝಾನ್ಸಿ ರಾಣಿಯೊಂದಿಗೆ ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ, ಬ್ರಿಟಿಷ್ ಸೈನ್ಯದ ವಿರುದ್ಧ ಅಸಾಧಾರಣ ಶೌರ್ಯವನ್ನು ಪ್ರದರ್ಶಿಸಿ, ಬ್ರಿಟಿಷರ ಹಲವಾರು ದಾಳಿಗಳನ್ನು ಹಿಮ್ಮೆಟ್ಟಿಸಿದ್ದರು. ಬಡ, ದೀನದಲಿತ ಕುಟುಂಬದಲ್ಲಿ ಜನಿಸಿದ ಅವರು ನಿಜವಾದ ಸಿಂಹಿಣಿಯಾಗಿದ್ದರು, ಅವರು ಮೇಲ್ನೋಟಕ್ಕೆ ಲಕ್ಷ್ಮೀಬಾಯಿಯಂತೆ ಕಾಣುತ್ತಿದ್ದರು, ಹೀಗಾಗಿ ಬ್ರಿಟಿಷರ ದಿಕ್ಕು ತಪ್ಪಿಸಲು, ಆಕೆ ಆಗಾಗ್ಗೆ ರಾಣಿಯ ವೇಷ ಧರಿಸಿ ಯುದ್ಧಭೂಮಿಯನ್ನು ಪ್ರವೇಶಿಸುತ್ತಿದ್ದರು. ಆಕೆಯ ಅಂತಿಮ ಹೋರಾಟದಲ್ಲಿಯೂ ಸಹ, ಆಕೆ ರಾಣಿಯ ವೇಷದಲ್ಲಿ ಹೋರಾಡುತ್ತಿದ್ದಾಗ ಆಕೆಯನ್ನು ಬ್ರಿಟಿಷರು ಸೆರೆಹಿಡಿದರು. ಆದರೆ, ಲಕ್ಷ್ಮೀ ಬಾಯಿ ಕೋಟೆಯಿಂದ ತಪ್ಪಿಸಿಕೊಳ್ಳಲು ಝಲ್ಕರಿ ಅವಕಾಶ ಮಾಡಿಕೊಟ್ಟರು. ಅವರು ಏಪ್ರಿಲ್ 4, 1857 ರಂದು ಹುತಾತ್ಮರಾದರು.

ಅವರು ನವೆಂಬರ್ 22, 1830 ರಂದು ಝಾನ್ಸಿ ಬಳಿಯ ಭೋಜ್ಲಾ ಗ್ರಾಮದಲ್ಲಿ ಜನಿಸಿದರು. ಸೈನ್ಯ ಸೇರಿದ ನಂತರ ರಾಣಿ ಲಕ್ಷ್ಮೀಬಾಯಿಯ ನಂಬಿಕೆಯ ಭಂಟರಾದರು. ಆಕೆಯ ಶೌರ್ಯವು ರಾಣಿ ಲಕ್ಷ್ಮೀಬಾಯಿ ಅವರೊಂದಿಗಿನ ನಿಕಟ ಸ್ನೇಹವನ್ನು ಗಾಢವಾಗಿಸಿತು, ಅವರು ಆಗಾಗ್ಗೆ ಅವರ ಪರವಾಗಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ಆಕೆ ಚಿಕ್ಕ ವಯಸ್ಸಿನಲ್ಲಿಯೇ ಕುದುರೆ ಸವಾರಿ, ಶಸ್ತ್ರಾಸ್ತ್ರಗಳ ಕಲೆ ಮತ್ತು ಯುದ್ಧ ಕೌಶಲ್ಯಗಳನ್ನು ಕಲಿತರು ಎಂದು ಹೇಳಲಾಗಿದೆ. ನಂತರ, ಅವರು ಬಿಲ್ಲುಗಾರಿಕೆ, ಕುಸ್ತಿ ಮತ್ತು ಬಿಲ್ಲುವಿದ್ಯೆಯನ್ನು ಸಹ ಕಲಿತರು.

ವಿನಮ್ರ ಹಿನ್ನೆಲೆಯಿಂದ ಬಂದ ಝಲ್ಕರಿ ಬಾಯಿ ತಮ್ಮ ಪರಿಶ್ರಮ ಮತ್ತು ಧೈರ್ಯಕ್ಕೆ ಹೆಸರುವಾಸಿಯಾಗಿದ್ದಾರೆ. ಜುಲೈ 22, 2001 ರಂದು ಭಾರತ ಸರ್ಕಾರವು ಅವರ ಗೌರವಾರ್ಥವಾಗಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿತು. ಬ್ರಿಟಿಷರಿಗೆ ಕಠಿಣ ಸಮಯವನ್ನು ನೀಡಿದ ಝಲ್ಕರಿ ಬಾಯಿ ಅವರ ಗಾಥೆ ಬುಂದೇಲ್ ಖಂಡದ ಜನರ ಮನಸ್ಸಿನಲ್ಲಿ ಜೀವಂತವಾಗಿದೆ ಮತ್ತು ಅವರು ಆಕೆಯನ್ನು ಬಹಳ ಪ್ರೀತಿಯಿಂದ ಸ್ಮರಿಸುತ್ತಾರೆ. ಬಸ್ತಾರ್ ನ ಜಾನಪದ ಕಥೆಗಳು ಮತ್ತು ಜಾನಪದ ಗೀತೆಗಳಲ್ಲಿ ಆಕೆಯ ಕಥೆಯನ್ನು ಇಂದಿಗೂ ಹಾಡಲಾಗುತ್ತದೆ ಮತ್ತು ವಿವರಿಸಲಾಗುತ್ತದೆ. ಅದಮ್ಯ ಧೈರ್ಯವನ್ನು ಪ್ರದರ್ಶಿಸಿ, ತಾಯ್ನಾಡಿನ ಸ್ವಾಭಿಮಾನವನ್ನು ರಕ್ಷಿಸಲು ಅವರ ತ್ಯಾಗ ಮತ್ತು ಬಲಿದಾನ ಎಂದೆಂದಿಗೂ ನೆನಪಿನಲ್ಲಿ ಉಳಿಯುತ್ತದೆ.

ನವೆಂಬರ್ 19, 2021 ರಂದು, ಉತ್ತರ ಪ್ರದೇಶದ ಝಾನ್ಸಿಯಲ್ಲಿ ನಡೆದ 'ರಾಷ್ಟ್ರ ರಕ್ಷಾ ಸಮರ್ಪಣ ಪರ್ವ'ದಲ್ಲಿ ಭಾಗವಹಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ, ಈ ಭೂಮಿ ರಾಣಿ ಲಕ್ಷ್ಮೀ ಬಾಯಿ ಅವರ ನಿಕಟವರ್ತಿ ಝಲ್ಕರಿ ಬಾಯಿ ಅವರ ಶೌರ್ಯ ಮತ್ತು ಸೇನಾ ಪರಾಕ್ರಮಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು. "1857 ರ ಸ್ವಾತಂತ್ರ್ಯ ಸಂಗ್ರಾಮದ ಆ ಅಮರ ವ್ಯಕ್ತಿತ್ವದ ಪಾದಗಳಿಗೆ ನಾನು ಗೌರವಪೂರ್ವಕವಾಗಿ ನಮಸ್ಕರಿಸುತ್ತೇನೆ ಮತ್ತು ಅವರಿಗೆ ನನ್ನ ಗೌರವವನ್ನು ಸಲ್ಲಿಸುತ್ತೇನೆ." ಎಂದಿದ್ದರು. ಇದಲ್ಲದೆ, ಆಗಸ್ಟ್ 15, 2022 ರಂದು, 76 ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ, ಅವರು ಕೆಂಪು ಕೋಟೆಯ ಮೇಲಿಂದ ಝಲ್ಕರಿ ಬಾಯಿ ಅವರನ್ನು ಸ್ಮರಿಸಿದರು ಮತ್ತು ಗೌರವ ಸಲ್ಲಿಸಿದರು.

# ರಾಷ್ಟ್ರೀಯ ವಿಜ್ಞಾನ ಪುರಸ್ಕಾರ 2025 ಪ್ರಕಟ
# ಪ್ರೊ. ನಾರ್ಲಿಕರ್ ಅವರಿಗೆ ಮರಣೋತ್ತರವಾಗಿ ವಿಜ್ಞಾನ ರತ್ನ ಪ್ರಶಸ್ತಿ

ಭಾರತದ ಖ್ಯಾತ ಖಗೋಳ ಭೌತಶಾಸ್ತ್ರಜ್ಞ ಪ್ರೊಫೆಸರ್ ಜಯಂತ್ ವಿಷ್ಣು ನಾರ್ಲಿಕರ್ ಅವರಿಗೆ 2025ರ ಸಾಲಿನ ವಿಜ್ಞಾನ ರತ್ನ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಗುವುದು. ಬಿಗ್ ಬ್ಯಾಂಗ್ ಸಿದ್ಧಾಂತವನ್ನು ಪ್ರಶ್ನಿಸಿದ್ದ ಪ್ರೊಫೆಸರ್ ನಾರ್ಲಿಕರ್ ಈ ವರ್ಷದ ಮೇ 20ರಂದು ಪುಣೆಯಲ್ಲಿ ನಿಧನಹೊಂದಿದರು. ಅಕ್ಟೋಬರ್ 25ರಂದು ಬಿಡುಗಡೆಯಾದ ರಾಷ್ಟ್ರೀಯ ವಿಜ್ಞಾನ ಪುರಸ್ಕಾರದ ಪಟ್ಟಿಯಲ್ಲಿ ಈ ಘೋಷಣೆ ಮಾಡಲಾಗಿದೆ. ವಿಜ್ಞಾನ ರತ್ನ, ವಿಜ್ಞಾನ ಶ್ರೀ, ವಿಜ್ಞಾನ ಯುವ-ಶಾಂತಿ ಸ್ವರೂಪ್ ಭಟ್ನಾಗರ್ ಮತ್ತು ವಿಜ್ಞಾನ ತಂಡ ಎಂಬ ನಾಲ್ಕು ವಿಭಾಗಗಳ ಅಡಿಯಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗೆ ನೀಡಿದ ಅತ್ಯುತ್ತಮ ಕೊಡುಗೆಗಳಿಗಾಗಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ವರ್ಷ ಒಟ್ಟು 23 ವಿಜ್ಞಾನಿಗಳು ಮತ್ತು ಒಂದು ತಂಡವನ್ನು ಗೌರವಿಸಲಾಗುವುದು.


ಪ್ರೊ ಜಯಂತ್ ವಿಷ್ಣು ನಾರ್ಲಿಕರ್

## ಪ್ರಶಸ್ತಿ ಪುರಸ್ಕೃತರ ಹೆಸರುಗಳು ಈ ಕೆಳಗಿನಂತಿವೆ

**ವಿಜ್ಞಾನ ರತ್ನ:** ಪ್ರೊ.ಜಯಂತ್ ವಿಷ್ಣು ನಾರ್ಲಿಕರ್ (ಭೌತಶಾಸ್ತ್ರ ಮರಣೋತ್ತರ)

**ವಿಜ್ಞಾನ ಶ್ರೀ:** ಡಾ.ಜ್ಞಾನೇಂದ್ರ ಪ್ರತಾಪ್ ಸಿಂಗ್ (ಕೃಷಿ ವಿಜ್ಞಾನ); ಯೂಸುಫ್ ಮೊಹಮ್ಮದ್ ಶೇಖ್ (ಪರಮಾಣು ಇಂಧನ); ಡಾ.ಕೆ. ತಂಗರಾಜ್ (ಜೈವಿಕ ವಿಜ್ಞಾನ); ಪ್ರೊ.ಪ್ರದೀಪ್ ತಲಪ್ಪಿಲ್ (ರಸಾಯನಶಾಸ್ತ್ರ); ಪ್ರೊ.ಅನಿರುದ್ಧ ಬಾಲಚಂದ್ರ ಪಂಡಿತ್ (ಎಂಜಿನಿಯರಿಂಗ್ ವಿಜ್ಞಾನ); ಎಸ್.ವೆಂಕಟ ಮೋಹನ್ (ಪರಿಸರ ವಿಜ್ಞಾನ); ಪ್ರೊಫೆಸರ್ ಮಹಾನ್ ಎಂಜೆ (ಗಣಿತ ಮತ್ತು ಕಂಪ್ಯೂಟರ್ ವಿಜ್ಞಾನ); ಶ್ರೀ ಜಯನ್ ಎನ್ (ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ)

**ವಿಜ್ಞಾನ ಯುವಕ - ಶಾಂತಿ ಸ್ವರೂಪ್ ಭಟ್ನಾಗರ್:** ಜಗದೀಸ್ ಗುಪ್ತಾ ಕಪುಗಂಟಿ (ಕೃಷಿ ವಿಜ್ಞಾನ); ಡಾ.ಸತೇಂದ್ರ ಕುಮಾರ್ ಮಂಗ್ರೌಥಿಯಾ (ಕೃಷಿ ವಿಜ್ಞಾನ); ಶ್ರೀ ದೇಬಾರ್ಕಾ ಸೇನ್ ಗುಪ್ತಾ (ಜೈವಿಕ ವಿಜ್ಞಾನ); ದೀಪಾ ಅಗಾಶೆ (ಜೈವಿಕ ವಿಜ್ಞಾನ); ದಿವ್ಯೇಂದು ದಾಸ್ (ರಸಾಯನಶಾಸ್ತ್ರ); ಡಾ ವಲಿಯುರ್ ರಹಮಾನ್ (ಭೂ ವಿಜ್ಞಾನ); ಅರ್ಕಪ್ರವ ಬಸು (ಎಂಜಿನಿಯರಿಂಗ್ ವಿಜ್ಞಾನ), ಪ್ರೊ.ಸವ್ಯಸಾಚಿ ಮುಖರ್ಜಿ (ಗಣಿತ ಮತ್ತು ಕಂಪ್ಯೂಟರ್ ವಿಜ್ಞಾನ), ಪ್ರೊ.ಶ್ವೇತಾ ಪ್ರೇಮ್ ಅಗರ್ವಾಲ್ (ಗಣಿತ ಮತ್ತು ಕಂಪ್ಯೂಟರ್ ವಿಜ್ಞಾನ), ಡಾ.ಸುರೇಶ್ ಕುಮಾರ್ (ವೈದ್ಯಕೀಯ), ಪ್ರೊ. ಅಮಿತ್ ಕುಮಾರ್ ಅಗರ್ವಾಲ್ (ಭೌತಶಾಸ್ತ್ರ), ಪ್ರೊ.ಸುರ್ಹುದ್ ಶ್ರೀಕಾಂತ್ ಮೋರೆ (ಭೌತಶಾಸ್ತ್ರ). ಶ್ರೀ ಅಂಕುರ್ ಗರ್ಗ್ (ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ); ಪ್ರೊ.ಮೋಹನಶಂಕರ್ ಶಿವಪ್ರಕಾಶಂ (ತಂತ್ರಜ್ಞಾನ ಮತ್ತು ನಾವೀನ್ಯತೆ)

**ವಿಜ್ಞಾನ ತಂಡ:** ತಂಡ- ಅರೋಮಾ ಮಿಷನ್ ಸಿಎಸ್ಐಆರ್ (ಕೃಷಿ ವಿಜ್ಞಾನ)

## 15,000 ಕೋಟಿ ರೂ.ಗೂ ಹೆಚ್ಚು ಮೌಲ್ಯದ ದ್ವಿದಳ ಧಾನ್ಯ ಮತ್ತು ಎಣ್ಣೆಕಾಳುಗಳನ್ನು ಖರೀದಿಸಲಿರುವ ಸರ್ಕಾರ

ದ್ವಿದಳ ಧಾನ್ಯಗಳು ಮತ್ತು ಎಣ್ಣೆಕಾಳುಗಳ ವಲಯದಲ್ಲಿ ರೈತರ ಆದಾಯವನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಮತ್ತೊಂದು ಪ್ರಮುಖ ನಿರ್ಧಾರವನ್ನು ತೆಗೆದುಕೊಂಡಿದೆ. ಈ ಉಪಕ್ರಮದ ಅಡಿಯಲ್ಲಿ, 2025-26 ರ ಮುಂಗಾರು ಹಂಗಾಮಿನಲ್ಲಿ ತೆಲಂಗಾಣ, ಒಡಿಶಾ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಿಂದ ದ್ವಿದಳ ಧಾನ್ಯಗಳು ಮತ್ತು ಎಣ್ಣೆಕಾಳುಗಳನ್ನು ಸಂಗ್ರಹಿಸಲಾಗುವುದು. ಕೇಂದ್ರ ಕೃಷಿ, ರೈತ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಅಕ್ಟೋಬರ್ 27 ರಂದು ನಡೆದ ಸಭೆಯಲ್ಲಿ ಪ್ರಧಾನ ಮಂತ್ರಿ ಅನ್ನದಾತಾ ಆಯ್ ಸಂರಕ್ಷಣ್ ಅಭಿಯಾನ (ಪಿಎಂ-ಆಶಾ) ಸೇರಿದಂತೆ ಕೃಷಿ ಮತ್ತು ರೈತ ಕಲ್ಯಾಣ ಯೋಜನೆಗಳ ಅಡಿಯಲ್ಲಿ ಇದನ್ನು ಅನುಮೋದಿಸಿದ್ದಾರೆ. ಈ ಉದ್ದೇಶಕ್ಕಾಗಿ 15,095.83 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ, ಇದು ಈ ನಾಲ್ಕು ರಾಜ್ಯಗಳ ಲಕ್ಷಾಂತರ ರೈತರಿಗೆ ಪ್ರಯೋಜನವನ್ನು ನೀಡುತ್ತದೆ. ರಾಜ್ಯದ ಉತ್ಪಾದನೆಯ ಶೇ.100 ರಷ್ಟು ತೊಗರಿ, ಉದ್ದು ಮತ್ತು ದ್ವಿದಳ ಧಾನ್ಯಗಳನ್ನು ಸಂಗ್ರಹಿಸಲು ಸರ್ಕಾರ ವ್ಯವಸ್ಥೆ ಮಾಡಿದೆ.



## ಮಹಿಳಾ ಕ್ರಿಕೆಟ್ ವಿಶ್ವಕಪ್

# ಇತಿಹಾಸ ಸೃಷ್ಟಿಸಿದ ಭಾರತ ತಂಡ

*ಭಾರತದ ಕ್ರಿಕೆಟ್ ಇತಿಹಾಸದಲ್ಲಿ ಮತ್ತೊಂದು ಅದ್ಭುತ ಅಧ್ಯಾಯದ ಸೇರ್ಪಡೆಯಾಗಿದೆ. ಭಾರತೀಯ ಮಹಿಳಾ ತಂಡವು ಮೊದಲ ಬಾರಿಗೆ ಐಸಿಸಿ ಮಹಿಳಾ ವಿಶ್ವಕಪ್ 2025 ಅನ್ನು ಗೆದ್ದು ಬೀಗಿದೆ. ಭಾರತದ ಹೆಮ್ಮೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ದಿದೆ. ಆಟಗಾರರ ಅತ್ಯುತ್ತಮ ಕ್ರಿಕೆಟ್ ಕೌಶಲ್ಯವು ಲಕ್ಷಾಂತರ ಹುಡುಗಿಯರಿಗೆ ಸ್ಫೂರ್ತಿಯ ಸೆಲೆಯಾಗಿದೆ.*

ದಕ್ಷಿಣ ಆಫ್ರಿಕಾ ವಿರುದ್ಧ 52 ರನ್ ಗಳ ಭರ್ಜರಿ ಗೆಲುವು ಸಾಧಿಸಿದ ಭಾರತ, ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯನ್ನು ಗೆದ್ದುಕೊಂಡಿದೆ. ನವಿ ಮುಂಬೈನ ಡಿ.ವೈ ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಟೀಮ್ ಇಂಡಿಯಾ ಮೊದಲ ಬಾರಿಗೆ ವಿಶ್ವ ಚಾಂಪಿಯನ್ ಆಗುವ ಮೂಲಕ ಇತಿಹಾಸ ನಿರ್ಮಿಸಿತು. ಭಾರತ ಮೊದಲ ಬಾರಿಗೆ ಐಸಿಸಿ ಮಹಿಳಾ ವಿಶ್ವಕಪ್ ಟೂರ್ನಿಯನ್ನು ಗೆದ್ದಿದ್ದರಿಂದ ಇದು ಮಹಿಳಾ ಕ್ರಿಕೆಟ್ ಗೆ ಮಹತ್ವದ ಕ್ಷಣವಾಗಿತ್ತು. ಈ ಗೆಲುವು ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ 2025 ಫೈನಲ್ಸ್ ನಲ್ಲಿ ಭಾರತೀಯ ತಂಡದ ಅದ್ಭುತ ಗೆಲುವಿನ ಗಾಥೆಯನ್ನು ಹೇಳುವುದರ ಜೊತೆಗೆ, ಪ್ರತಿಯೊಬ್ಬ ಆಟಗಾರರ ಕಠಿಣ ಪರಿಶ್ರಮ ಮತ್ತು ಉತ್ಸಾಹವನ್ನೂ ಪ್ರತಿಬಿಂಬಿಸುತ್ತದೆ. ಈ ಜಯ ಪ್ರತಿಯೊಬ್ಬ ಭಾರತೀಯನಲ್ಲೂ ಹರ್ಷವನ್ನು ತಂದಿದ್ದು, ಇದು ನಮ್ಮ ಹೆಣ್ಣುಮಕ್ಕಳ ಉತ್ತಮ ಪ್ರದರ್ಶನ, ಹೋರಾಟದ ಸ್ಫೂರ್ತಿ ಮತ್ತು ತಂಡ ಸಾಮರ್ಥ್ಯಕ್ಕೆ ಜ್ವಲಂತ ಉದಾಹರಣೆಯಾಗಿದೆ. ಇದು ದೇಶದ ಅಸಂಖ್ಯಾತ ಬಾಲಕಿರ ಕನಸು ನನಸಾಗಿಸಲು ಸ್ಫೂರ್ತಿ ನೀಡುವುದಲ್ಲದೆ, ದೇಶಕ್ಕೆ ಹೆಚ್ಚಿನ ಹೆಮ್ಮೆಯನ್ನೂ ತಂದಿದೆ.

> **ಭಾರತೀಯ ತಂಡ 2025ರ ಸಾಲಿನ ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್ ಫೈನಲ್ ನಲ್ಲಿ ಅದ್ಭುತ ವಿಜಯ ಸಾಧಿಸಿದೆ. ಫೈನಲ್ಸ್ ನಲ್ಲಿ ಅವರ ಪ್ರದರ್ಶನವು ಉತ್ತಮ ಕೌಶಲ್ಯ ಮತ್ತು ಆತ್ಮವಿಶ್ವಾಸದಿಂದ ಕೂಡಿತ್ತು. ಪಂದ್ಯಾವಳಿಯುದ್ದಕ್ಕೂ ತಂಡವು ಅಸಾಧಾರಣ ತಂಡ ಸಾಮರ್ಥ್ಯ ಮತ್ತು ದೃಢತೆಯನ್ನು ಪ್ರದರ್ಶಿಸಿತು. ನಮ್ಮ ಆಟಗಾರರಿಗೆ ಅಭಿನಂದನೆಗಳು. ಈ ಐತಿಹಾಸಿಕ ಗೆಲುವು ಭವಿಷ್ಯದ ಚಾಂಪಿಯನ್ ಗಳನ್ನು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುತ್ತದೆ.**
>
> ***ನರೇಂದ್ರ ಮೋದಿ,***
> ***ಪ್ರಧಾನಮಂತ್ರಿ***




# ಭಾರತದಲ್ಲಿ ಶೇ.99ರಷ್ಟು ಪಾವತಿಗಳು ಡಿಜಿಟಲ್, ಯುಪಿಐ ಮೂಲಕವೇ ಶೇ. 85ರಷ್ಟು



ಭಾರತವು ವೇಗವಾಗಿ ನಗದು ರಹಿತ ಆರ್ಥಿಕತೆಯತ್ತ ಸಾಗುತ್ತಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಹೊಸ ವರದಿಯ ಪ್ರಕಾರ, 2024 ರಲ್ಲಿ, ದೇಶದ ಎಲ್ಲಾ ಪಾವತಿಗಳಲ್ಲಿ ಶೇ.99.7ರಷ್ಟು ಡಿಜಿಟಲ್ ಆಗಿ ಮಾಡಲಾಗಿದೆ. ಮೊತ್ತದ ದೃಷ್ಟಿಯಿಂದ, ಈ ಅಂಕಿಅಂಶವು ಶೇ.97.5 ಆಗಿದೆ. ಇದರರ್ಥ ಜನರು ಈಗ ನಗದು ಮತ್ತು ಚೆಕ್ ಗಳನ್ನು ಕಡಿಮೆ ಬಳಸುತ್ತಿದ್ದಾರೆ. ವರದಿಯ ಪ್ರಕಾರ, 2025 ರ ಮೊದಲಾರ್ಧದಲ್ಲಿ ಒಟ್ಟು ಡಿಜಿಟಲ್ ವಹಿವಾಟುಗಳಲ್ಲಿ ಯುಪಿಐ ಶೇ. 84.8 ರಷ್ಟಿತ್ತು. ಆರ್ ಟಿಜಿಎಸ್ ಶೇ.0.1ರಷ್ಟು, ಕಾರ್ಡ್ ಶೇ.2.7 ಮತ್ತು ಚೆಕ್ ಪಾವತಿ ಶೇ.0.2 ರಷ್ಟಿತ್ತು. ಆದರೆ, ಮೊತ್ತಕ್ಕೆ ಸಂಬಂಧಿಸಿದಂತೆ, ಶೇ.68.7ರಷ್ಟು ಪಾವತಿಗಳನ್ನು ಆರ್.ಟಿಜಿಎಸ್ ಮೂಲಕ ಮಾಡಲಾಗಿದೆ. ವರದಿಯ ಪ್ರಕಾರ, 2019 ರ ಮೊದಲಾರ್ಧದಲ್ಲಿ ಡಿಜಿಟಲ್ ವಹಿವಾಟುಗಳು 1,424 ಕೋಟಿಗಳಾಗಿತ್ತು, ಇದು 2025 ರಲ್ಲಿ 12,520 ಕೋಟಿಗೆ ಹೆಚ್ಚಿದೆ. ಒಟ್ಟು ವಹಿವಾಟುಗಳಲ್ಲಿ ಅದರ ಪಾಲು 2019 ರಲ್ಲಿದ್ದ ಶೇ.96.7 ರಿಂದ 2025 ರಲ್ಲಿ ಶೇ.99.8 ಕ್ಕೆ ಏರಿದೆ. ಏತನ್ಮಧ್ಯೆ, ಯುಪಿಐ ವಹಿವಾಟುಗಳ ಸಂಖ್ಯೆ 2019 ರಲ್ಲಿ 441.6 ಕೋಟಿಯಿಂದ 2025 ರಲ್ಲಿ 10,637 ಕೋಟಿಗೆ ಏರಿದೆ. ಪರಿಮಾಣದ ವಿಷಯದಲ್ಲಿ, ಯುಪಿಐ ವಹಿವಾಟುಗಳು 2019 ರ ಮೊದಲಾರ್ಧದಲ್ಲಿ 8 ಲಕ್ಷ ಕೋಟಿ ರೂ.ಗಳಷ್ಟಿತ್ತು, ಇದು 2025 ರಲ್ಲಿ 143 ಲಕ್ಷ ಕೋಟಿ ರೂ.ಗೆ ಹೆಚ್ಚಾಗಿದೆ.





## ರಫೇಲ್ ನಲ್ಲಿ ರಾಷ್ಟ್ರಪತಿಗಳ ವಿಮಾನ ಹಾರಾಟ

# ಭಾರತದ ಆತ್ಮವಿಶ್ವಾಸ ಹೆಚ್ಚುತ್ತಿದೆ

*ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಕ್ಟೋಬರ್ 29 ರಂದು ಹರಿಯಾಣದ ಅಂಬಾಲಾ ವಾಯುಪಡೆ ನಿಲ್ದಾಣದಿಂದ ರಫೇಲ್ ಯುದ್ಧ ವಿಮಾನದಲ್ಲಿ ಐತಿಹಾಸಿಕ ಹಾರಾಟದೊಂದಿಗೆ ಇತಿಹಾಸ ಸೃಷ್ಟಿಸಿದರು. ಅವರು ಈ ಹಿಂದೆ 2023 ರಲ್ಲಿ ಸುಖೋಯ್ 30 ಎಂಕೆಐ ನಲ್ಲಿ ಹಾರಾಟ ನಡೆಸಿದ್ದರು. ಇದರೊಂದಿಗೆ, ಭಾರತೀಯ ವಾಯುಪಡೆಯ ಎರಡು ಯುದ್ಧ ವಿಮಾನಗಳಲ್ಲಿ ಹಾರಾಟ ನಡೆಸಿದ ದೇಶದ ಮೊದಲ ರಾಷ್ಟ್ರಪತಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.*

**“ ಶಕ್ತಿಶಾಲಿ ರಫೇಲ್ ವಿಮಾನದ ಈ ಮೊದಲ ಹಾರಾಟವು ನನ್ನಲ್ಲಿ ದೇಶದ ರಕ್ಷಣಾ ಸಾಮರ್ಥ್ಯದ ಬಗ್ಗೆ ಹೊಸ ಹೆಮ್ಮೆಯನ್ನು ಮೂಡಿಸಿದೆ.**

**ದ್ರೌಪದಿ ಮುರ್ಮು,**
**ರಾಷ್ಟ್ರಪತಿ**

ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಬಾಲಾ ವಾಯುನೆಲೆಯಿಂದ ಶಕ್ತಿಶಾಲಿ ರಫೇಲ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸುವ ಮೂಲಕ ರಾಷ್ಟ್ರದ ಹೆಮ್ಮೆಗೆ ಹೊಸ ಅಧ್ಯಾಯವನ್ನು ಸೇರ್ಪಡೆ ಮಾಡಿದರು. ಈ ಹಾರಾಟವು ಭಾರತೀಯ ವಾಯುಪಡೆಯ ಯುದ್ಧ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಲ್ಲದೆ, ಭಾರತದ ಸ್ವಾವಲಂಬಿ ರಕ್ಷಣಾ ಶಕ್ತಿ ಮತ್ತು ತಾಂತ್ರಿಕ ಶ್ರೇಷ್ಠತೆಯನ್ನು ಸಂಕೇತಿಸಿತು. ಭಾರತೀಯ ಸಶಸ್ತ್ರ ಪಡೆಗಳ ಸರ್ವೋಚ್ಚ ಕಮಾಂಡರ್ ಆಗಿರುವ ರಾಷ್ಟ್ರಪತಿಯವರು ವಾಯುಪಡೆ ನಿಲ್ದಾಣಕ್ಕೆ ಮರಳುವ ಮೊದಲು ಸುಮಾರು 30 ನಿಮಿಷಗಳ ಕಾಲ ಸುಮಾರು 200 ಕಿಲೋಮೀಟರ್ ದೂರವನ್ನು ಕ್ರಮಿಸಿದರು. ಈ ವಿಮಾನವನ್ನು 17ರ ಸ್ಕ್ವಾಡ್ರನ್ ನ ಕಮಾಂಡಿಂಗ್ ಅಧಿಕಾರಿ ಗ್ರೂಪ್ ಕ್ಯಾಪ್ಟನ್ ಅಮಿತ್ ಗೆಹಾನಿ ಹಾರಿಸಿದರು. ಈ ವಿಮಾನವು ಸಮುದ್ರ ಮಟ್ಟದಿಂದ ಸುಮಾರು 15000 ಅಡಿ ಎತ್ತರದಲ್ಲಿ ಮತ್ತು ಗಂಟೆಗೆ ಸುಮಾರು 700 ಕಿಲೋಮೀಟರ್ ವೇಗದಲ್ಲಿ ಹಾರಾಟ ನಡೆಸಿತು. ರಾಷ್ಟ್ರಪತಿಗಳ ಈ ಹಾರಾಟವು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಹೆಮ್ಮೆ, ಪ್ರೇರಣೆ ಮತ್ತು ವಿಶ್ವಾಸದ ಹೊಸ ಭಾವವನ್ನು ತುಂಬುತ್ತದೆ. ಇದು ರಕ್ಷಣಾ ಕ್ಷೇತ್ರದಲ್ಲಿ ಮಾತ್ರವಲ್ಲದೆ ಪ್ರತಿಯೊಂದು ರಂಗದಲ್ಲೂ ಹೊಸ ಎತ್ತರವನ್ನು ತಲುಪುತ್ತಿರುವ ಸ್ವಾವಲಂಬಿ ಭಾರತದ ಸಂಕೇತವಾಗಿದೆ.●

ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.



## ಕೇಂದ್ರ ಸಚಿವ ಸಂಪುಟದ ನಿರ್ಣಯಗಳು

# 8ನೇ ವೇತನ ಆಯೋಗದ ಉಲ್ಲೇಖಿತ ನಿಯಮಕ್ಕೆ ಕೇಂದ್ರ ಸರ್ಕಾರ ಅನುಮೋದನೆ

# ಹಿಂಗಾರು ಋತು ರಸಗೊಬ್ಬರ ಸಬ್ಸಿಡಿಗೂ ಅನುಮೋದನೆ

*ಮಹತ್ವದ ಕ್ರಮದಲ್ಲಿ ಕೇಂದ್ರ ಸರ್ಕಾರ, ಸುಮಾರು 50 ಲಕ್ಷ ನೌಕರರು ಮತ್ತು 69 ಲಕ್ಷ ಪಿಂಚಣಿದಾರರಿಗೆ, 8 ನೇ ವೇತನ ಆಯೋಗದ ಉಲ್ಲೇಖಿತ ನಿಯಮಗಳಿಗೆ ಸಂಪುಟ ಅನುಮೋದನೆ ನೀಡಿದೆ. ಇದಲ್ಲದೆ, ರೈತರ ಹಿತದೃಷ್ಟಿಯಿಂದ, ಹಿಂಗಾರು ಹಂಗಾಮಿನಲ್ಲಿ ರಸಗೊಬ್ಬರಗಳ ಮೇಲಿನ ಪೋಷಕಾಂಶ ಆಧಾರಿತ ಸಬ್ಸಿಡಿ ದರಗಳ ಪ್ರಸ್ತಾಪವನ್ನು ಅನುಮೋದಿಸಲಾಗಿದೆ.*

**ನಿರ್ಣಯ: 8ನೇ ಕೇಂದ್ರ ವೇತನ ಆಯೋಗದ ಉಲ್ಲೇಖಿತ ನಿಯಮಗಳ ಅನುಮೋದನೆ.**

**ಪರಿಣಾಮ:** ಕೇಂದ್ರ ನೌಕರರು ಮತ್ತು ಪಿಂಚಣಿದಾರರಿಗಾಗಿ ರಚಿಸಲಾದ 8 ನೇ ಕೇಂದ್ರ ವೇತನ ಆಯೋಗದ ಉಲ್ಲೇಖಿತ ನಿಯಮಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. 2025ರ ಜನವರಿಯಲ್ಲಿ ಅನುಮೋದಿಸಲಾದ ಆಯೋಗಕ್ಕೆ ಸುಪ್ರೀಂ ಕೋರ್ಟ್ ನ ಮಾಜಿ ನ್ಯಾಯಾಧೀಶ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ಅವರು ಅಧ್ಯಕ್ಷರಾಗಿದ್ದಾರೆ. ಐಐಎಂ ಬೆಂಗಳೂರಿನ ಪ್ರೊಫೆಸರ್ ಪುಲಕ್ ಘೋಷ್ ಅರೆಕಾಲಿಕ ಸದಸ್ಯರಾಗಿ ಮತ್ತು ಪೆಟ್ರೋಲಿಯಂ ಸಚಿವಾಲಯದ ಕಾರ್ಯದರ್ಶಿ ಪಂಕಜ್ ಜೈನ್ ಸದಸ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಆಯೋಗವು ತನ್ನ ಶಿಫಾರಸುಗಳನ್ನು 18 ತಿಂಗಳೊಳಗೆ ಸಲ್ಲಿಸುತ್ತದೆ, ಅಗತ್ಯವಿದ್ದರೆ ಮಧ್ಯಂತರ ವರದಿಯನ್ನು ಸಲ್ಲಿಸುವ ಆಯ್ಕೆಯನ್ನು ಹೊಂದಿರುತ್ತದೆ. ಮುಂದಿನ ವರ್ಷ ಜನವರಿ 1ರಿಂದ ಶಿಫಾರಸುಗಳನ್ನು ಜಾರಿಗೆ ತರುವ ನಿರೀಕ್ಷೆಯಿದೆ.

**ಶಿಫಾರಸುಗಳನ್ನು ಮಾಡುವಾಗ, ಆಯೋಗವು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುತ್ತದೆ:**

- ದೇಶದ ಆರ್ಥಿಕ ಪರಿಸ್ಥಿತಿಗಳು ಮತ್ತು ಹಣಕಾಸಿನ ವಿವೇಚನೆಯ ಅಗತ್ಯ
- ಅಭಿವೃದ್ಧಿ ವೆಚ್ಚ ಮತ್ತು ಕಲ್ಯಾಣ ಕ್ರಮಗಳಿಗೆ ಸಾಕಷ್ಟು ಸಂಪನ್ಮೂಲಗಳು ಲಭ್ಯವಿವೆ ಎಂದು ಖಚಿತಪಡಿಸಿಕೊಳ್ಳುವ ಅಗತ್ಯವಿದೆ.
- ವಂತಿಗೆಯೇತರ ಪಿಂಚಣಿ ಯೋಜನೆಗಳ ನಿಧಿಯಿಲ್ಲದ ವೆಚ್ಚ
- ಸಾಮಾನ್ಯವಾಗಿ ಕೆಲವು ಮಾರ್ಪಾಡುಗಳೊಂದಿಗೆ ಶಿಫಾರಸುಗಳನ್ನು ಅಳವಡಿಸಿಕೊಳ್ಳುವ ರಾಜ್ಯ ಸರ್ಕಾರಗಳ ಹಣಕಾಸಿನ ಸ್ಥಿತಿಯ ಮೇಲೆ ಈ ಶಿಫಾರಸುಗಳು ಬೀರುವ ಪರಿಣಾಮ.
- ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಖಾಸಗಿ ವಲಯದ ನೌಕರರಿಗೆ ಲಭ್ಯವಿರುವ ವೇತನ ರಚನೆ, ಪ್ರಯೋಜನಗಳು ಮತ್ತು ಕಾರ್ಯ ಪರಿಸ್ಥಿತಿಗಳು.

**ನಿರ್ಣಯ: 2025-26ರ ಹಿಂಗಾರು ಹಂಗಾಮಿಗೆ ಫಾಸ್ಫಾಟಿಕ್ ಮತ್ತು ಪೊಟ್ಯಾಸಿಕ್ ರಸಗೊಬ್ಬರಗಳ ಮೇಲಿನ ಪೋಷಕಾಂಶ ಆಧಾರಿತ ಸಬ್ಸಿಡಿ ದರಗಳನ್ನು ಅನುಮೋದಿಸಲಾಗಿದೆ.**

**ಪರಿಣಾಮ:** ಡಿ-ಅಮೋನಿಯಂ ಫಾಸ್ಫೇಟ್ (ಡಿಎಪಿ) ಮತ್ತು ಎನ್‌ಪಿಕೆಎಸ್ (ಸಾರಜನಕ, ರಂಜಕ, ಪೊಟ್ಯಾಶ್, ಸಲ್ಫರ್) ಶ್ರೇಣಿಗಳು ಸೇರಿದಂತೆ ಪಿ ಮತ್ತು ಕೆ ರಸಗೊಬ್ಬರಗಳ ಮೇಲಿನ ಸಬ್ಸಿಡಿಯನ್ನು 2025-26ರ ಹಿಂಗಾರು ಹಂಗಾಮಿಗೆ ಅನುಮೋದಿತ ದರಗಳ ಆಧಾರದ ಮೇಲೆ ಒದಗಿಸಲಾಗುವುದು. ಇದಕ್ಕಾಗಿ ಅಂದಾಜು ಆಯವ್ಯಯ ಅಗತ್ಯ ಸುಮಾರು 37,952.29 ಕೋಟಿ ರೂ. ಆಗಿರುತ್ತದೆ. ಇದು ಮುಂಗಾರು ಹಂಗಾಮಿಗಿಂತ ಸುಮಾರು 736 ಕೋಟಿ ರೂ. ಹೆಚ್ಚಾಗಿದೆ.

**ಪ್ರಯೋಜನಗಳು**

- ರೈತರಿಗೆ ಸಬ್ಸಿಡಿ, ಕೈಗೆಟುಕುವ ಮತ್ತು ಸಮಂಜಸವಾದ ಬೆಲೆಯಲ್ಲಿ ರಸಗೊಬ್ಬರಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲಾಗುವುದು.
- ರಸಗೊಬ್ಬರಗಳು ಮತ್ತು ಇನ್ ಪುಟ್ ಗಳ ಅಂತಾರಾಷ್ಟ್ರೀಯ ಬೆಲೆಗಳಲ್ಲಿನ ಇತ್ತೀಚಿನ ಪ್ರವೃತ್ತಿಗಳನ್ನು ಗಮನದಲ್ಲಿಟ್ಟುಕೊಂಡು ಪಿ ಮತ್ತು ಕೆ ರಸಗೊಬ್ಬರಗಳ ಮೇಲಿನ ಸಬ್ಸಿಡಿಯನ್ನು ತರ್ಕಬದ್ಧಗೊಳಿಸುವುದು.

*ಸಂಪುಟ ನಿರ್ಣಯಗಳ ಕುರಿತ ಮಾಧ್ಯಮಗೋಷ್ಠಿಯನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.*


ವಿಕಸಿತ ಭಾರತದ ದೀಪಧಾರಿಗಳು
ಸಶಕ್ತ ಮಕ್ಕಳು
ಸಮೃದ್ಧ ಭಾರತ
ಮಕ್ಕಳ ಕಲ್ಯಾಣಕ್ಕೆ ದಾರಿ ಮಾಡಿಕೊಡುವುದು

## || ಗಾಯಂತಿ ದೇವಾ: ಕಿಲ್ ಗೀತಕಾನಿ ಧನ್ಯಸ್ತು ತೇ ಭರತಭೂಮಿಭಾಗೇ ||

*ವಿಷ್ಣು ಪುರಾಣದ ಈ ಶ್ಲೋಕವು, ಈ ಭರತ ಭೂಮಿಯಲ್ಲಿ ಜನಿಸಿದ ವ್ಯಕ್ತಿಯು ದೇವರುಗಳಿಗಿಂತ ಹೆಚ್ಚು ಅದೃಷ್ಟಶಾಲಿ ಎಂದು ದೇವರುಗಳು ಸಹ ಹೇಳುತ್ತಾರೆ ಎಂಬುದನ್ನು ಸಂಕೇತಿಸುತ್ತದೆ. ಆದ್ದರಿಂದ, ಭಾರತದ ಪ್ರತಿಯೊಂದು ಮಗುವೂ ಉಜ್ವಲ ಭಾರತದ ಕನಸಿನ ಸಾಕಾರವಾಗಿದೆ. ಈ ಪುಟ್ಟ ಕಣ್ಣುಗಳಲ್ಲಿನ ಮಿನುಗು ನಾಳೆಯ ಬೆಳಕು. 2047ರ ವೇಳೆಗೆ ರಾಷ್ಟ್ರವು ಅಭಿವೃದ್ಧಿ ಹೊಂದಿದ ಭಾರತವಾಗುವ ದೃಷ್ಟಿಕೋನವನ್ನು ಸಾಧಿಸುವತ್ತ ಸಾಗುತ್ತಿರುವಾಗ, ಇಂದಿನ ಮಕ್ಕಳು ಆ ನವಭಾರತದ ಮುಂಚೂಣಿಯಲ್ಲಿರುತ್ತಾರೆ. ಆದ್ದರಿಂದ, ಈ ಬೇರುಗಳನ್ನು ಪೋಷಿಸಲು, ಕೇಂದ್ರ ಸರ್ಕಾರವು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಒತ್ತು ನೀಡುವ ಹೊಸ ಯೋಜನೆಗಳು ಮತ್ತು ನೀತಿಗಳನ್ನು ರೂಪಿಸುತ್ತಿದೆ - ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆ - ಇದರಿಂದ ಪ್ರತಿ ಮಗುವೂ ಉತ್ತಮ ಅವಕಾಶಗಳನ್ನು ಪಡೆಯುತ್ತದೆ ಮತ್ತು ಬಲಿಷ್ಠ ಮತ್ತು ಸ್ವಾವಲಂಬಿ ನಾಗರಿಕನಾಗುತ್ತಾನೆ...*

**ಈ ನವೆಂಬರ್ 20 ರಂದು, ವಿಶ್ವ ಮಕ್ಕಳ ದಿನ ಮತ್ತು ವಿಶ್ವ ಮಕ್ಕಳ ಹಕ್ಕುಗಳ ದಿನದ ಸಂದರ್ಭದಲ್ಲಿ, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೇಂದ್ರ ಸರ್ಕಾರವು ಮಕ್ಕಳ ಸಬಲೀಕರಣದ ಮೂಲಕ ಭವಿಷ್ಯದ ಭಾರತಕ್ಕೆ ಹೇಗೆ ಅಡಿಪಾಯ ಹಾಕುತ್ತಿದೆ ಎಂಬುದನ್ನು ತಿಳಿಯೋಣ...**

*ನೀವು ಮಾತನಾಡುತ್ತಿರುವುದು ಒಬ್ಬ ಸ್ನೇಹಿತನೊಂದಿಗೆ, ಪ್ರಧಾನಿಯೊಂದಿಗೆ ಅಲ್ಲ.*

*ಇಂದು ನಾನು ನಿಮ್ಮೊಂದಿಗೆ ಮಾತನಾಡುತ್ತಿರುವುದು ಪ್ರಧಾನ ಮಂತ್ರಿಯಾಗಿ ಅಲ್ಲ, ನಿಮ್ಮ ಕುಟುಂಬದ ಸದಸ್ಯನಾಗಿ. ಇವತ್ತು ಮಕ್ಕಳ ಜೊತೆ ಇರುವುದಕ್ಕೆ ನನಗೆ ತುಂಬಾ ಸಂತೋಷವಾಗುತ್ತಿದೆ.*

*2023 ರಲ್ಲಿ ಕ್ರಿಸ್ಮಸ್ ಆಚರಣೆಯ ಸಂದರ್ಭದಲ್ಲಿ, ಪ್ರಧಾನ ಮಂತ್ರಿಯವರ ನಿವಾಸದಲ್ಲಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವು ಮಕ್ಕಳಿಗೆ 7, ಲೋಕ ಕಲ್ಯಾಣ್ ಮಾರ್ಗವನ್ನು ವೀಕ್ಷಿಸಲು ಮತ್ತು ಅನ್ವೇಷಿಸಲು ಒಂದು ಅನನ್ಯ ಅವಕಾಶವನ್ನು ಒದಗಿಸಿತು. ಪ್ರಧಾನಿ ಮೋದಿ ಮಕ್ಕಳೊಂದಿಗೆ ಸಂವಾದ ನಡೆಸಿದರು ಮತ್ತು ಅವರಿಗೆ ಈ ಮೊದಲು ಪ್ರಧಾನ ಮಂತ್ರಿಯವರ ನಿವಾಸಕ್ಕೆ ಭೇಟಿ ನೀಡಲು ಅವಕಾಶ ಸಿಕ್ಕಿದೆಯೇ ಎಂದು ಕೇಳಿದರು. ಮಕ್ಕಳು "ಇಲ್ಲ" ಎಂದು ಉತ್ತರಿಸಿದಾಗ, ಪ್ರಧಾನ ಮಂತ್ರಿಯವರು ನಗುತ್ತಾ, ತಮ್ಮ ತಂಡವು ತಮ್ಮ ಅಧಿಕೃತ ನಿವಾಸದ ವಿಶೇಷ ಪ್ರವಾಸಕ್ಕೆ ವೈಯಕ್ತಿಕವಾಗಿ ಮಾರ್ಗದರ್ಶನ ನೀಡುವುದಾಗಿ ತಕ್ಷಣವೇ ಭರವಸೆ ನೀಡಿದರು. ಮಕ್ಕಳ ಭೇಟಿಯ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ ಪ್ರಧಾನಿ, "ಈ ಕುತೂಹಲಕಾರಿ ಪುಟ್ಟ ಮಕ್ಕಳು ಖಂಡಿತವಾಗಿಯೂ 7, ಲೋಕ ಕಲ್ಯಾಣ್ ಮಾರ್ಗಕ್ಕೆ ಭೇಟಿ ನೀಡಿದ ಅದ್ಭುತ ಅನುಭವವನ್ನು ಹೊಂದಿದ್ದಾರೆ. ಅವರ ಸಂತೋಷ ಮತ್ತು ಶ್ಲಾಘನೆಯನ್ನು ನೋಡಿದಾಗ, ನನ್ನ ಕಚೇರಿಯು ಅವರ ನಿರೀಕ್ಷೆಗಳ ಕಠಿಣ ಪರೀಕ್ಷೆಯಲ್ಲಿ ಉತ್ತೀರ್ಣವಾಗಿದೆ ಎಂದು ತೋರುತ್ತದೆ." ಎಂದು ಹೇಳಿದರು.*

*ಒಬ್ಬ ಪುಟ್ಟ ಹುಡುಗ ಒಂದು ಚಿತ್ರ ತಂದಿದ್ದಾನೆ. ಅವನು ಅಲ್ಲಿ ಬಹಳ ಹೊತ್ತು ನಿಂತಿರಬೇಕು; ಅವನ ಕೈಗಳು ನೋಯುತ್ತಿರಬೇಕು. ಯಾರಾದರೂ ದಯವಿಟ್ಟು ಅದನ್ನು ತೆಗೆದುಕೊಳ್ಳಿ. ಅವನು ಚಿಕ್ಕ ಹುಡುಗ. ಚೆನ್ನಾಗಿ ಮಾಡಿದ್ದೀಯಾ ಮಗನೇ. ಚೆನ್ನಾಗಿ ಮಾಡಿದ್ದೀಯಾ, ನಿನ್ನ ಚಿತ್ರ ನನಗೆ ಸಿಕ್ಕಿದೆ. ಅಳುವ ಅಗತ್ಯವಿಲ್ಲ. ಅದರ ಮೇಲೆ ನಿನ್ನ ವಿಳಾಸ ಬರೆದಿದ್ದರೆ, ನಾನು ಖಂಡಿತವಾಗಿಯೂ ನಿನಗೆ ಬರೆಯುತ್ತೇನೆ. ಸ್ನೇಹಿತರೇ, ಈ ಪುಟ್ಟ ಮಕ್ಕಳ ಪ್ರೀತಿಗಿಂತ ದೊಡ್ಡ ಆಸ್ತಿ ಜೀವನದಲ್ಲಿ ಇನ್ನೊಂದಿದೆಯೇ?*

ಮಕ್ಕಳೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ವಿಶೇಷ ಬಾಂಧವ್ಯವು ಹಲವಾರು ಸಂದರ್ಭಗಳಲ್ಲಿ ಗೋಚರಿಸಿದೆ. ಮಕ್ಕಳೊಂದಿಗೆ ಸಮಯ ಕಳೆಯಲು ಅವರಿಗೆ ಅವಕಾಶ ಸಿಕ್ಕಾಗಲೆಲ್ಲಾ ಒಬ್ಬ ಸ್ನೇಹಿತನಂತೆ ಸಂಭಾಷಣೆ ನಡೆಸುತ್ತಾರೆ. ಅವನು ಜೋಕ್ ಮಾಡುತ್ತಾ ಅವರನ್ನು ತಮಾಷೆಯಾಗಿ ತೊಡಗಿಸಿ ಕೊಳ್ಳುವುದನ್ನು ಕಾಣ ಬಹುದು, ಮಕ್ಕಳು ಬೇಗನೆ ಅವರ ಸ್ನೇಹಿತರಾಗುತ್ತಾರೆ.



ಎರಡು ವರ್ಷಗಳ ಹಿಂದೆ, ಅವರು ಇಬ್ಬರು ಮಕ್ಕಳೊಂದಿಗೆ ಮಾತನಾಡುತ್ತಾ ನಾಣ್ಯವನ್ನು ಬಳಸುವ ತಂತ್ರವನ್ನು ಪ್ರದರ್ಶಿಸುವ ವೀಡಿಯೊವನ್ನು ಹಂಚಿಕೊಂಡರು. ಅವರು ನಾಣ್ಯವನ್ನು ಹಣೆಯ ಮೇಲೆ ಇಟ್ಟು, ನಂತರ ತಲೆಯ ಹಿಂಭಾಗವನ್ನು ಲಘುವಾಗಿ ತಟ್ಟಿ ಅದು ಅವರ ಕೈಗೆ ಬೀಳುವಂತೆ ಮಾಡಿದರು. ನಂತರ ಅವರು ಮಕ್ಕಳಿಗೂ ಅದೇ ರೀತಿ ಮಾಡಲು ಹೇಳಿದರು. "ಮಕ್ಕಳೊಂದಿಗೆ ಕಳೆದ ಕೆಲವು ಸ್ಮರಣೀಯ ಕ್ಷಣಗಳು" ಎಂದು ಪ್ರಧಾನಿ ಮೋದಿ ವೀಡಿಯೊಗೆ ಶೀರ್ಷಿಕೆ ನೀಡಿದರು. ಕಳೆದ 11 ವರ್ಷಗಳಲ್ಲಿ, ಪ್ರಧಾನಿ ಮೋದಿಯವರ ಮಕ್ಕಳ ಮೇಲಿನ ವಿಶೇಷ ಪ್ರೀತಿಯನ್ನು ಹಲವು ಸಂದರ್ಭಗಳಲ್ಲಿ, ಕೆಲವೊಮ್ಮೆ ರಾಖಿ ಕಟ್ಟಿಸಿಕೊಳ್ಳುವಾಗ, ಕೆಲವೊಮ್ಮೆ ಬಾಲ ವಾಟಿಕಾದಲ್ಲಿ ಮಕ್ಕಳೊಂದಿಗೆ ಸಂಭಾಷಣೆಯ ಸಮಯದಲ್ಲಿ ಮತ್ತು ಕೆಲವೊಮ್ಮೆ ಪರೀಕ್ಷೆಗಳ ಬಗ್ಗೆ ಚರ್ಚಿಸುವಾಗ ಕಾಣಬಹುದಾಗಿದೆ. ಇದೆಲ್ಲವೂ ದೇಶದ ನಾಯಕತ್ವವು ದೇಶದ ಬೇರುಗಳನ್ನು ಪೋಷಿಸಲು ಹೇಗೆ ಕೆಲಸ ಮಾಡುತ್ತಿದೆ ಎಂಬುದರ ಸಂಕೇತವಾಗಿದೆ. ಮಕ್ಕಳ ಪ್ರತಿಭೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳುವುದು, ಪತ್ರಗಳನ್ನು ಬರೆಯುವುದು, ಅವರೊಂದಿಗೆ ಅವರ ಬಾಲ್ಯವನ್ನು ಮೆಲುಕು ಹಾಕುವುದು ಮತ್ತು ಅವರೊಂದಿಗಿನ ಅವರ ವಿಶೇಷ ಒಡನಾಟವು ಭಾರತದ ಭವಿಷ್ಯದ ಬಗ್ಗೆ ಅವರಿಗೆ ಎಷ್ಟು ಕಾಳಜಿ ಇದೆ ಎಂಬುದಕ್ಕೆ ಜೀವಂತ ಪುರಾವೆಯಾಗಿದೆ.

ಬಾಲ್ಯದಲ್ಲಿ ಅನುಭವಿಸಿದ ಮುಗ್ಧತೆ ಮತ್ತು ಶಕ್ತಿಯು ಅನನ್ಯ ಮತ್ತು ಅಪ್ರತಿಮ. ದೇವರು ಮಕ್ಕಳಿಗೆ ವಿಶೇಷ ಶಕ್ತಿಯನ್ನು ನೀಡಿದ್ದಾನೆ. ಮಕ್ಕಳಿಗೆ ಅಹಂಕಾರವಿರುವುದಿಲ್ಲ, ಆದ್ದರಿಂದ ಅವರಿಗೆ ತಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಯಾವುದೇ ಕಷ್ಟವಾಗುವುದಿಲ್ಲ. ಮಗುವಿನ ಮನಸ್ಸು ಕಚ್ಚಾ ಮಡಕೆಯಂತೆ, ಅದು ನೀಡುವ ಆಕಾರವನ್ನು ಪಡೆಯುತ್ತದೆ. ಬಾಲ್ಯವನ್ನು ಪೋಷಿಸುವ ದೃಷ್ಟಿಕೋನವು ಮಕ್ಕಳಿಗೆ ಶಿಕ್ಷಣ,

## ಅಂಗನವಾಡಿ ಕೇಂದ್ರಗಳು ಭವಿಷ್ಯಕ್ಕೆ ಬುನಾದಿ ಹಾಕುತ್ತವೆ

- ಆರು ತಿಂಗಳಿನಿಂದ ಆರು ವರ್ಷದೊಳಗಿನ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡಲಾಗುತ್ತದೆ. ಹೆಚ್ಚುವರಿಯಾಗಿ, ಈ ಕಾರ್ಯಕ್ರಮದ ಮೂಲಕ ಮೂರರಿಂದ ಆರು ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ.
- ಸುಮಾರು 14 ಲಕ್ಷ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸುಮಾರು 12 ಲಕ್ಷ ಅಂಗನವಾಡಿ ಸಹಾಯಕಿಯರ ಸಹಾಯದಿಂದ ಒಟ್ಟು 7,075 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ಎಲ್ ಇ ಡಿ ಪರದೆಗಳು, ಆರ್ ಒ ನೀರಿನ ಶುದ್ಧೀಕರಣ ಯಂತ್ರಗಳು, ಸ್ಮಾರ್ಟ್ ಕಲಿಕಾ ಸಾಮಗ್ರಿಗಳು, ಶಿಶುಪಾಲನಾ ಸಾಮಗ್ರಿಗಳು, ಆಡಿಯೋ-ವಿಶುವಲ್ ಪರಿಕರಗಳು, ಮಕ್ಕಳ ಸ್ನೇಹಿ ಕಲಿಕಾ ಸಲಕರಣೆಗಳು ಮತ್ತು ಪೌಷ್ಟಿಕಾಂಶ ಉದ್ಯಾನಗಳಂತಹ ಸೌಲಭ್ಯಗಳನ್ನು ಒದಗಿಸಲಾಗಿದೆ.

ಸೆಪ್ಟೆಂಬರ್ 18, 2025 ರ ಹೊತ್ತಿಗೆ, 75,642 ಅಂಗನವಾಡಿ ಕೇಂದ್ರಗಳನ್ನು ಸಕ್ಷಮ ಅಂಗನವಾಡಿಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.

2025-26ನೇ ಆರ್ಥಿಕ ವರ್ಷದಲ್ಲಿ ಎರಡು ಲಕ್ಷ ಅಂಗನವಾಡಿ ಕೇಂದ್ರಗಳನ್ನು ಸಕ್ಷಮ ಅಂಗನವಾಡಿಗಳಾಗಿ ಮೇಲ್ದರ್ಜೆಗೇರಿಸುವ ಗುರಿಯನ್ನು ಹೊಂದಲಾಗಿದೆ.

**ಅಂಗನವಾಡಿ ಕೇಂದ್ರಗಳಲ್ಲಿ ಲಭ್ಯವಿರುವ ಸೌಲಭ್ಯಗಳು:** 10,75,063 ಕೇಂದ್ರಗಳಲ್ಲಿ ಶೌಚಾಲಯಗಳನ್ನು ಒದಗಿಸಲಾಗಿದೆ.

**ನವೆಂಬರ್ 2025 ರಿಂದ ಪೌಷ್ಟಿಕಾಂಶ ಮತ್ತು ಪಿಎಂಎಂವೈಗಾಗಿ ಹೊಸ ಸಹಾಯವಾಣಿ:** 1515 ಅನ್ನು ಬಿಡುಗಡೆ ಮಾಡಲಾಗಿದೆ, ಇದು ಅಸ್ತಿತ್ವದಲ್ಲಿರುವ 14408 ಸಂಖ್ಯೆಯನ್ನು ಬದಲಾಯಿಸುತ್ತದೆ.

**9,48,561**
ಕೇಂದ್ರಗಳಲ್ಲಿ ಅಡುಗೆಮನೆಗಳನ್ನು ನಿರ್ಮಿಸಲಾಗಿದೆ.

**9,16,505**
ಕೇಂದ್ರಗಳಿಗೆ ಶಾಶ್ವತ ವಿದ್ಯುತ್ ಒದಗಿಸಲಾಗಿದ್ದು, 76,844 ಕೇಂದ್ರಗಳಿಗೆ ಸೌರಶಕ್ತಿಯಿಂದ ವಿದ್ಯುತ್ ಒದಗಿಸಲಾಗಿದೆ.

**12,80,217**
ಕೇಂದ್ರಗಳಲ್ಲಿ ಕುಡಿಯುವ ನೀರಿನ ಸೌಲಭ್ಯಗಳನ್ನು ಮತ್ತು 9.67 ಲಕ್ಷ ಕೇಂದ್ರಗಳಲ್ಲಿ ನಲ್ಲಿ ನೀರಿನ ಸೌಲಭ್ಯವನ್ನು ಒದಗಿಸಲಾಗಿದೆ.







ಕೌಶಲ್ಯ, ಭದ್ರತೆ, ಆರೋಗ್ಯ ಮತ್ತು ಪೋಷಣೆಗೆ ಹೊಸ ಅವಕಾಶಗಳನ್ನು ಒದಗಿಸುವ ಮೂಲಕ ಉತ್ತೇಜನ ನೀಡುತ್ತದೆ.

ಪ್ರಧಾನಿ ಮೋದಿಯವರು ಸ್ವತಃ ಮಕ್ಕಳಿಗೆ ಮಾರ್ಗದರ್ಶನ ನೀಡಲು ಮತ್ತು ಮಾನಸಿಕವಾಗಿ ಬಲಪಡಿಸಲು ಯಾವಾಗಲೂ ಸಿದ್ಧರಿದ್ದಾರೆ, ಅದೇ ಸಮಯದಲ್ಲಿ ಜೀವನದಲ್ಲಿ ದೊಡ್ಡ ಗುರಿಗಳನ್ನು ಸಾಧಿಸಲು ಅವರನ್ನು ಪ್ರೇರೇಪಿಸುತ್ತಾರೆ ಮತ್ತು ಪ್ರೋತ್ಸಾಹಿಸುತ್ತಾರೆ. "ಪರೀಕ್ಷಾ ಪೇ ಚರ್ಚಾ" ಸಮಯದಲ್ಲಿ ಅವರ ಒಂದು ಗಂಟೆಗಟ್ಟಲೆ ಚರ್ಚೆಗಳು ಮಕ್ಕಳಲ್ಲಿ ಹೊಸ ಶಕ್ತಿಯನ್ನು ತುಂಬುತ್ತವೆ. ಇಂದು, ಕೇಂದ್ರ ಸರ್ಕಾರವು ಶಿಕ್ಷಣ ಮತ್ತು ಕ್ರೀಡೆಯಿಂದ ಆರೋಗ್ಯದವರೆಗೆ ಪ್ರತಿಯೊಂದು ಕ್ಷೇತ್ರದಲ್ಲೂ ಮಕ್ಕಳಿಗೆ ಬೆಂಬಲವಾಗಿ ನಿಂತಿದೆ. ಭಾರತದ ಮಕ್ಕಳ ಪ್ರತಿಭೆ ಜಗತ್ತನ್ನು ಬೆರಗುಗೊಳಿಸುತ್ತಿದೆ ಮತ್ತು ಅವರ ಶಕ್ತಿಯು ದೇಶಕ್ಕೆ ಹೊಸ ದಿಕ್ಕನ್ನು ನೀಡುತ್ತಿದೆ. ಮಕ್ಕಳ ಕಲ್ಯಾಣಕ್ಕಾಗಿ ಪ್ರಧಾನ ಮಂತ್ರಿಯವರ ಬದ್ಧತೆಯು ನೀತಿಗಳು ಮತ್ತು ಯೋಜನೆಗಳ ಮೂಲಕ ಮತ್ತಷ್ಟು ಬಲಗೊಂಡಿದೆ. ಪೋಷಣ ಅಭಿಯಾನದಿಂದ ಹಿಡಿದು ಆಸ್ಪತ್ರೆ ಹೆರಿಗೆಯ ಉತ್ತೇಜನದವರೆಗೆ, ತಾಯಂದಿರು ಮತ್ತು ಮಕ್ಕಳನ್ನು ರಕ್ಷಿಸಲು ಪ್ರಯತ್ನಗಳನ್ನು ಮಾಡಲಾಗಿದೆ. ಮಿಷನ್ ಇಂದ್ರಧನುಷ್ ಮಕ್ಕಳು ಮತ್ತು ಗರ್ಭಿಣಿಯರಿಗೆ ಸಂಪೂರ್ಣ ಲಸಿಕಾ ವ್ಯಾಪ್ತಿಯನ್ನು ಹೆಚ್ಚಿಸುವ ಪ್ರಯತ್ನಗಳನ್ನು ಬಲಪಡಿಸುತ್ತಿದೆ. ಕೇಂದ್ರ ಸರ್ಕಾರದ ಉಪಕ್ರಮಗಳು ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಸುಧಾರಣೆಗಳಿಗೆ ಕಾರಣವಾಗಿವೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ. ಆಟದ ಮೈದಾನಗಳಿಂದ ಸಂಶೋಧನೆಯವರೆಗೆ, ವ್ಯವಹಾರಗಳು ಮತ್ತು ನವೋದ್ಯಮಗಳಿಂದ ಉದ್ಯೋಗಗಳು ಮತ್ತು ಸ್ವ-ಉದ್ಯೋಗದವರೆಗೆ, ಕೇಂದ್ರ ಸರ್ಕಾರದ ಕಲ್ಯಾಣ ಯೋಜನೆಗಳು ಮಕ್ಕಳಿಗೆ ಪ್ರತಿ ಹಂತದಲ್ಲೂ ಸಹಾಯ ಮಾಡುತ್ತಿವೆ.

### ಮಕ್ಕಳೇ ವಿಕಸಿತ ಭಾರತ ದೃಷ್ಟಿಕೋನದ ಚಾಲಕರು

ಈಗ, ದೇಶವು ತನ್ನ ಮಕ್ಕಳಿಗೆ ತಾಯಿಯ ಪ್ರೀತಿಯನ್ನು ಸುರಿಸುತ್ತಿದೆ, ಅವರ ಆಕಾಂಕ್ಷೆಗಳನ್ನು ಪೋಷಿಸುತ್ತಿದೆ ಮತ್ತು ಅವರ ಸಂತೋಷ ಮತ್ತು ಸೌಕರ್ಯವನ್ನು ಖಚಿತಪಡಿಸುತ್ತಿದೆ. ಭಾರತದ ಪ್ರತಿಯೊಂದು ಮಗುವೂ ಕನಸು, ಕುತೂಹಲ ಮತ್ತು ಭವಿಷ್ಯದ ಕಥೆಯ ಭಾಗವಾಗಿದೆ. ಆ ಪುಟ್ಟ ಕಣ್ಣುಗಳಲ್ಲಿ ಹೊಳೆಯುವ ಭರವಸೆಯೇ ನಾಳಿನ ಭಾರತದ ಗುರುತು. ಭಾರತವು ಐತಿಹಾಸಿಕ, ಪರಿವರ್ತನಾತ್ಮಕ ಸುಧಾರಣೆಗೆ ಒಳಗಾಗುತ್ತಿದೆ. ಸ್ವಾತಂತ್ರ್ಯದ 100 ವರ್ಷಗಳ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 2047 ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಸಂಕಲ್ಪವನ್ನು ದೇಶದ ಮುಂದೆ ಇಟ್ಟಿದ್ದಾರೆ, ಇದು ಕೇವಲ ಒಂದು ಗುರಿಯಲ್ಲ, ಬದಲಾಗಿ

## ಜೀವನದ ಸುರಕ್ಷತಾ ಚಕ್ರ

## ಹೆರಿಗೆಗೂ ಮುನ್ನ ಮತ್ತು ನಂತರ

- ಗರ್ಭಧಾರಣೆಯಿಂದ ಸುಮಾರು ಎರಡು ವರ್ಷಗಳ ವಯಸ್ಸಿನವರೆಗಿನ (ಮೊದಲ 1,000 ದಿನಗಳು) ಅವಧಿಗೆ ಆದ್ಯತೆ ನೀಡುವ ಪೋಷಣಾ ಅಭಿಯಾನವು, ಬಡತನ, ಬಾಲ್ಯವಿವಾಹ ಮತ್ತು ಲಿಂಗ ತಾರತಮ್ಯದಂತಹ ಸಮಸ್ಯೆಗಳಿಂದ ಉಲ್ಬಣಗೊಂಡಿರುವ ಅಪೌಷ್ಟಿಕತೆಯ ಅಂತರ-ಪೀಳಿಗೆಯ ಚಕ್ರವನ್ನು ಮುರಿಯುವ ಗುರಿಯನ್ನು ಹೊಂದಿದೆ.
- ಪ್ರತಿ ವರ್ಷ ಸೆಪ್ಟೆಂಬರ್ ನಲ್ಲಿ ಪೋಷಣ ಮಾಸವನ್ನು ಆಚರಿಸಲಾಗುತ್ತಿದೆ ಮತ್ತು #Local4Poshan ನಂತಹ ಅಭಿಯಾನಗಳ ಮೂಲಕ, ಮಕ್ಕಳಲ್ಲಿ ಬೆಳವಣಿಗೆ ಕುಂಠಿತ, ಅಪೌಷ್ಟಿಕತೆ, ರಕ್ತಹೀನತೆ ಮತ್ತು ಕಡಿಮೆ ಜನನ ತೂಕದಂತಹ ಸವಾಲುಗಳನ್ನು ಪರಿಹರಿಸಲು ಪ್ರಯತ್ನಿಸಲಾಗುತ್ತಿದೆ.
- ಪೋಷಣ್ 2.0 ಕೇವಲ ಕಡಿಮೆ ತೂಕದ ಮಕ್ಕಳಿಗೆ ಸೀಮಿತವಾಗಿಲ್ಲ; ಇದು ಅಧಿಕ ತೂಕ ಹೊಂದಿರುವ ಮಕ್ಕಳಿಗೂ ಅನ್ವಯಿಸುತ್ತದೆ. ಭಾರತವು ಅಪೌಷ್ಟಿಕತೆಯ ವಿರುದ್ಧ ಹೋರಾಡುತ್ತಿದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್ ಎಫ್ ಎಚ್ ಎಸ್)-5 (2019-21) ರ ಪ್ರಕಾರ

ರಾಷ್ಟ್ರೀಯ ಮಟ್ಟದಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಧಿಕ ತೂಕದ ಮಕ್ಕಳ ಶೇಕಡಾವಾರು ಪ್ರಮಾಣ:




**72.22+** ಲಕ್ಷ ಗರ್ಭಿಣಿಯರು ಜುಲೈ 2025 ರವರೆಗೆ ಮಿಷನ್ ಪೋಷಣ್ 2.0 ಅಡಿಯಲ್ಲಿ ಫಲಾನುಭವಿಗಳಾಗಿ ನೋಂದಾಯಿಸಿಕೊಂಡಿದ್ದಾರೆ.

**ಪ್ರಧಾನ ಮಂತ್ರಿ ಮಾತೃ ವಂದನ ಯೋಜನೆ**

**4.05** ಕೋಟಿಗೂ ಹೆಚ್ಚು ಫಲಾನುಭವಿಗಳಿಗೆ ಜುಲೈ 2025 ರವರೆಗೆ ಹೆರಿಗೆ ಸೌಲಭ್ಯಗಳನ್ನು ನೀಡಲಾಗಿದೆ.



ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (ಪಿ ಎಂ ಎಸ್ ಎಂ ಎ) ಪ್ರತಿ ತಿಂಗಳ 9 ನೇ ತಾರೀಖಿನಂದು ಗರ್ಭಿಣಿಯರಿಗೆ ಉಚಿತ, ಖಾತರಿಯ ಮತ್ತು ಗುಣಮಟ್ಟದ ಪ್ರಸವಪೂರ್ವ ತಪಾಸಣೆಗಳನ್ನು ಒದಗಿಸುತ್ತದೆ.

- ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1-8 ನೇ ತರಗತಿಯ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ಒದಗಿಸುವ ಪ್ರಧಾನ ಮಂತ್ರಿ ಪೋಷಣ್ ಯೋಜನೆಯನ್ನು (2021-22 ರಿಂದ 2025-26) ಮುಂದುವರಿಸಲು ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಅನುಮೋದನೆ ನೀಡಿದೆ.
- ಈ ಯೋಜನೆಯು 11.2 ಲಕ್ಷ ಶಾಲೆಗಳ 11.8 ಕೋಟಿ ಮಕ್ಕಳಿಗೆ ಪ್ರಯೋಜನವನ್ನು ನೀಡುತ್ತದೆ; 14 ಲಕ್ಷಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳು ಮತ್ತು 9.14 ಕೋಟಿ ಫಲಾನುಭವಿಗಳು ಪೋಷಣ್ ಟ್ರ್ಯಾಕರ್ ನಲ್ಲಿ ನೋಂದಾಯಿಸಲ್ಪಟ್ಟಿದ್ದಾರೆ ಮತ್ತು ಈ ಸಂಖ್ಯೆ ಪ್ರತಿದಿನ ಹೆಚ್ಚುತ್ತಿದೆ.
- ಅಪೌಷ್ಟಿಕತೆಯನ್ನು ನಿಭಾಯಿಸಲು, ಸುಪೋಷಿತ ಪಂಚಾಯತ್ ಯೋಜನೆಯನ್ನು ಡಿಸೆಂಬರ್ 26, 2024 ರಂದು ಪ್ರಾರಂಭಿಸಲಾಯಿತು.

# ಪೋಷಕರಂತೆ

## ಪ್ರಧಾನಮಂತ್ರಿ ನರೇಂದ್ರ ಮೋದಿ ಮಾರ್ಗದರ್ಶನ ನೀಡುತ್ತಾರೆ



ದೂರದೃಷ್ಟಿಯು ದೀರ್ಘಾವಧಿಯದ್ದಾಗಿದ್ದರೆ ಮತ್ತು ಆಲೋಚನೆಯು 'ದೇಶ ಮೊದಲು' ಎಂಬುದಾಗಿದ್ದಾಗ, ಪ್ರಧಾನಿ ನರೇಂದ್ರ ಮೋದಿ ಅವರು ಭವಿಷ್ಯದ ಪೀಳಿಗೆಯನ್ನು ಸಿದ್ಧಪಡಿಸಲು ಮಕ್ಕಳಿಗೆ ಪಾಲಕರಂತೆ ಮಾರ್ಗದರ್ಶನ ನೀಡುತ್ತಾರೆ. ಕಳೆದ 11 ವರ್ಷಗಳಲ್ಲಿ, ಅವರು ಭವಿಷ್ಯದ ಪೀಳಿಗೆಯನ್ನು ಸಬಲೀಕರಣಗೊಳಿಸಲು ಮತ್ತು ಅವರ ಬೇರುಗಳನ್ನು ಪೋಷಿಸಲು ಹಲವಾರು ಸಂದರ್ಭಗಳಲ್ಲಿ ಪಾಲಕರಾಗಿ ಕಾಣಿಸಿಕೊಂಡಿದ್ದಾರೆ.

### ಪೌಷ್ಟಿಕತೆಯಿಂದ ಸಮೃದ್ಧಿಯವರೆಗೆ

ಮಕ್ಕಳು ಋತುಮಾನದ ಹಣ್ಣುಗಳನ್ನು ತಿನ್ನಬೇಕು ಮತ್ತು ಜಂಕ್ ಫುಡ್, ಎಣ್ಣೆಯುಕ್ತ ಆಹಾರಗಳು ಮತ್ತು ಸಂಸ್ಕರಿಸಿದ ಹಿಟ್ಟಿನಿಂದ ಮಾಡಿದ ಆಹಾರಗಳನ್ನು ತಪ್ಪಿಸಬೇಕು. ತಿನ್ನುವ ಮೊದಲು ಆಹಾರವನ್ನು ಕನಿಷ್ಠ 32 ಬಾರಿ ಅಗಿದು ಸರಿಯಾಗಿ ನುಂಗಬೇಕು. ಮಕ್ಕಳು ಸಣ್ಣ ಗುಟುಕುಗಳಲ್ಲಿ ನೀರನ್ನು ಕುಡಿದು ಅದನ್ನು ಸವಿಯಬೇಕು.

### ಯಾವಾಗ, ಏನು ಮತ್ತು ಹೇಗೆ ತಿನ್ನಬೇಕು

ಮಾನವ ದೇಹಕ್ಕೆ ಸೂರ್ಯನ ಬೆಳಕಿನ ಮಹತ್ವವನ್ನು ಪ್ರಧಾನಿ ಮೋದಿ ಒತ್ತಿ ಹೇಳಿದ್ದಾರೆ ಮತ್ತು ಮಕ್ಕಳು ಪ್ರತಿದಿನ ಬೆಳಗ್ಗೆ ಬಿಸಿಲಿನಲ್ಲಿ ಕೆಲವು ನಿಮಿಷಗಳನ್ನು ಕಳೆಯುವ ಅಭ್ಯಾಸವನ್ನು ಬೆಳೆಸಿಕೊಳ್ಳುವಂತೆ ಪ್ರೋತ್ಸಾಹಿಸಿದ್ದಾರೆ. ಸೂರ್ಯೋದಯದ ನಂತರ ಮಕ್ಕಳು ಮರದ ಕೆಳಗೆ ನಿಂತು ಆಳವಾದ ಉಸಿರನ್ನು ತೆಗೆದುಕೊಳ್ಳುವಂತೆಯೂ ಅವರು ಹೇಳಿದ್ದಾರೆ. ಒಬ್ಬ ವ್ಯಕ್ತಿಯು ಜೀವನದಲ್ಲಿ ಪ್ರಗತಿ ಸಾಧಿಸಲು, ಪೌಷ್ಟಿಕಾಂಶದ ಪ್ರಾಮುಖ್ಯತೆಯು ಏನು, ಯಾವಾಗ, ಹೇಗೆ ಮತ್ತು ಏಕೆ ತಿನ್ನುತ್ತಾನೆ ಎಂಬುದರ ಮೇಲೆ ಇರುತ್ತದೆ ಎಂದು ಪ್ರಧಾನಿಯವರು ಇದನ್ನು ಸಂಕ್ಷಿಪ್ತವಾಗಿ ಹೇಳಿದರು.

### ಒತ್ತಡದಿಂದ ಹೊರಬರುವುದು

ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಲು ವಿಫಲರಾಗುವುದು ಜೀವನವನ್ನು ವ್ಯರ್ಥ ಮಾಡಿಕೊಂಡಂತೆ ಎಂಬ ನಂಬಿಕೆ ಸಮಾಜದಲ್ಲಿ ಆಳವಾಗಿ ಬೇರೂರಿದೆ. ಕ್ರಿಕೆಟ್ ಪಂದ್ಯದಲ್ಲಿ ಚೆಂಡಿನ ಮೇಲೆ ಕೇಂದ್ರೀಕರಿಸುವ ಬ್ಯಾಟ್ಸ್ ಮನ್ ನ ಉದಾಹರಣೆಯನ್ನು ಉಲ್ಲೇಖಿಸಿದ ಪ್ರಧಾನಿ ಮೋದಿ, ಬ್ಯಾಟ್ಸ್ ಮನ್ ಗಳಂತೆ ಮಕ್ಕಳು ಬಾಹ್ಯ ಒತ್ತಡಗಳನ್ನು ತಪ್ಪಿಸಿ ತಮ್ಮ ಅಧ್ಯಯನದ ಮೇಲೆ ಸಂಪೂರ್ಣವಾಗಿ ಗಮನಹರಿಸಬೇಕು ಎಂದು ಹೇಳುತ್ತಾರೆ. ಪರೀಕ್ಷೆಗಳು ಜೀವನದಲ್ಲಿ ಎಲ್ಲವೂ ಅಲ್ಲ. ಪುಸ್ತಕಗಳನ್ನು ಓದಬೇಕು, ಆದರೆ ಸಾಧ್ಯವಾದಷ್ಟು ಜ್ಞಾನವನ್ನು ಗಳಿಸುವತ್ತ ಗಮನಹರಿಸಬೇಕು.

## ನಿಮಗೇ ಸವಾಲು ಹಾಕಿಕೊಳ್ಳಿ

ನೀವು ಏನಾಗಬಹುದು, ಏನನ್ನು ಸಾಧಿಸಬಹುದು, ಮತ್ತು ಯಾವ ಕೆಲಸಗಳು ತೃಪ್ತಿಯನ್ನು ನೀಡುತ್ತವೆ ಎಂದು ಯೋಚಿಸಿ ಮತ್ತು ನಿಮಗೆ ನೀವೇ ಕೇಳಿಕೊಳ್ಳಿ. ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ಮತ್ತು ಸಾಧನೆಯ ಭಾವನೆಯನ್ನು ಆನಂದಿಸಲು 10 ಕಿಲೋಮೀಟರ್ ಸೈಕ್ಲಿಂಗ್ ನಂತಹ ಸಣ್ಣ ಗುರಿಗಳೊಂದಿಗೆ ನಿಮಗೆ ಸವಾಲು ಹಾಕಿಕೊಳ್ಳಿ. ಸ್ವಯಂ ಸ್ಪರ್ಧೆಯು ಅಚಲವಾದ ಆತ್ಮವಿಶ್ವಾಸವನ್ನು ಬೆಳೆಸುತ್ತದೆ, ಆದರೆ ನಿಮ್ಮನ್ನು ಇತರರೊಂದಿಗೆ ಹೋಲಿಸುವುದು ನಿರಾಶೆಗೆ ಕಾರಣವಾಗಬಹುದು.



## ನಾಯಕತ್ವದ ಕಲೆ

ಒಬ್ಬ ನಾಯಕ ಎಂದರೆ ಇತರರಿಗೆ ಮಾದರಿಯಾಗಿ ಮುನ್ನಡೆಸುವ ವ್ಯಕ್ತಿ. ಇದನ್ನು ಮಾಡಲು, ವ್ಯಕ್ತಿಗಳು ತಮ್ಮನ್ನು ತಾವು ಬದಲಾಯಿಸಿಕೊಳ್ಳಬೇಕು ಮತ್ತು ಅವರ ನಡವಳಿಕೆಯು ಈ ಬದಲಾವಣೆಯನ್ನು ಪ್ರತಿಬಿಂಬಿಸಬೇಕು ಎಂದು ಪ್ರಧಾನಿ ಹೇಳಿದರು. ನಾಯಕತ್ವವನ್ನು ಹೇರಲಾಗುವುದಿಲ್ಲ, ಅದು ನಿಮ್ಮ ಸುತ್ತಮುತ್ತಲಿನವರಿಂದ ಸ್ವೀಕರಿಸಲ್ಪಡುತ್ತದೆ.

## ಪುಸ್ತಕಗಳನ್ನು ಮೀರಿ - 360° ಬೆಳವಣಿಗೆ

ವಿದ್ಯಾರ್ಥಿಗಳು ರೋಬೋಟ್ ಗಳಲ್ಲ ಮತ್ತು ಶಿಕ್ಷಣವು ಕೇವಲ ಮುಂದಿನ ತರಗತಿಗೆ ಮುನ್ನಡೆಯಲು ಮಾತ್ರವಲ್ಲ, ಸಮಗ್ರ ವೈಯಕ್ತಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ತೋಟಗಾರಿಕೆಯಂತಹ ಆರಂಭಿಕ ಶಾಲಾ ಶಿಕ್ಷಣದ ಪಾಠಗಳು ಅಪ್ರಸ್ತುತವೆಂದು ತೋರುತ್ತದೆಯಾದರೂ, ಅವು ಒಟ್ಟಾರೆ ಅಭಿವೃದ್ಧಿಗೆ ಕೊಡುಗೆ ನೀಡುತ್ತವೆ.

## ಇಂಧನವಾಗಿ ವೈಫಲ್ಯ

ಶೇ.30-40 ರಷ್ಟು ವಿದ್ಯಾರ್ಥಿಗಳು ತಮ್ಮ 10 ಅಥವಾ 12 ನೇ ತರಗತಿಯಲ್ಲಿ ಅನುತ್ತೀರ್ಣರಾದರೂ, ಜೀವನವು ಅಲ್ಲಿಗೆ ಕೊನೆಗೊಳ್ಳುವುದಿಲ್ಲ. ಆಟಗಾರರು ತಮ್ಮ ತಪ್ಪುಗಳನ್ನು ಪರಿಶೀಲಿಸಲು ಮತ್ತು ಸುಧಾರಿಸಲು ಶ್ರಮಿಸುವ ಕ್ರಿಕೆಟ್ ನ ಉದಾಹರಣೆಯನ್ನು ಉಲ್ಲೇಖಿಸಿದ ಅವರು ವೈಫಲ್ಯಗಳನ್ನು ನಿಮ್ಮ ಶಿಕ್ಷಕರಾಗಿ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

## ಸಕಾರಾತ್ಮಕತೆಯನ್ನು ಕಂಡುಕೊಳ್ಳುವುದು

ಚೆನ್ನಾಗಿ ಹಾಡುವುದು ಅಥವಾ ಅಚ್ಚುಕಟ್ಟಾಗಿ ಉಡುಗೆ ತೊಡುವಂತಹ ಇತರರ ಉತ್ತಮ ಗುಣಗಳನ್ನು ಗುರುತಿಸಿ ಮತ್ತು ಈ ಸಕಾರಾತ್ಮಕ ಗುಣಗಳನ್ನು ಚರ್ಚಿಸಿ. ಈ ವಿಧಾನವು ನಿಜವಾದ ಆಸಕ್ತಿಯನ್ನು ತೋರಿಸುತ್ತದೆ ಮತ್ತು ಬಾಂಧವ್ಯವನ್ನು ಬೆಳೆಸುತ್ತದೆ. ಬರೆಯುವ ಅಭ್ಯಾಸವನ್ನು ಬೆಳೆಸಿಕೊಳ್ಳುವ ಮಹತ್ವವನ್ನು ಅವರು ಎತ್ತಿ ತೋರಿಸಿದರು. ಬರೆಯುವ ಅಭ್ಯಾಸವನ್ನು ಬೆಳೆಸಿಕೊಳ್ಳುವವರು ತಮ್ಮ ಆಲೋಚನೆಗಳನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

## ನಿಮ್ಮ ವಿಶಿಷ್ಟತೆಯನ್ನು ಕಂಡುಕೊಳ್ಳಿ

ಗಮನ ಹರಿಸದ ಕಾರಣ ಶಾಲೆಯಿಂದ ಹೊರಹಾಕಲ್ಪಡುವ ಹಂತದಲ್ಲಿದ್ದ ಮಗುವೊಂದು ಟಿಂಕರಿಂಗ್ ಲ್ಯಾಬ್ ನಲ್ಲಿ ಉತ್ತಮ ಸಾಧನೆ ಮಾಡಿ ರೊಬೊಟಿಕ್ಸ್ ಸ್ಪರ್ಧೆಯಲ್ಲಿ ಗೆದ್ದು ತನ್ನ ವಿಶಿಷ್ಟ ಸಾಮರ್ಥ್ಯಗಳನ್ನು ಪ್ರದರ್ಶಿಸಿತು. ಮಕ್ಕಳ ವಿಶಿಷ್ಟ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಗುರುತಿಸುವುದು ಮತ್ತು ಪೋಷಿಸುವುದು ಶಿಕ್ಷಕರ ಪಾತ್ರವಾಗಿದೆ.

## ನಿಮ್ಮ ಸಮಯವನ್ನು ಹಿಡಿತದಲ್ಲಿಡಿ; ನಿಮ್ಮ ಜೀವನವನ್ನು ಸದುಪಯೋಗಪಡಿಸಿಕೊಳ್ಳಿ

ನಿಮ್ಮ ಸಮಯವನ್ನು ನಿರ್ವಹಿಸಿ, ನಿರ್ದಿಷ್ಟ ಕಾರ್ಯಗಳನ್ನು ನಿಗದಿಪಡಿಸಿ ಮತ್ತು ನಿಮ್ಮ ಪ್ರಗತಿಯನ್ನು ಪ್ರತಿದಿನ ಪರಿಶೀಲಿಸಿ. ಸವಾಲಿನ ವಿಷಯಗಳನ್ನು ತಪ್ಪಿಸುವ ಬದಲು, ಅವುಗಳ ಮೇಲೆ ಕೇಂದ್ರೀಕರಿಸಿ. ನಿಮಗೆ ಕಷ್ಟಕರವೆಂದು ತೋರುವ ವಿಷಯವನ್ನು ಮೊದಲು ಆರಿಸಿ ಮತ್ತು ಅದನ್ನು ನೇರವಾಗಿ ನಿಭಾಯಿಸಿ.

## ಈ ಕ್ಷಣವನ್ನು ಜೀವಿಸಿ

ಅತ್ಯಂತ ಅಮೂಲ್ಯವಾದದ್ದು ವರ್ತಮಾನದ ಕ್ಷಣ. ಒಮ್ಮೆ ಅದು ಕಳೆದುಹೋದರೆ, ಮತ್ತೆ ಬರುವುದಿಲ್ಲ, ಆದರೆ ಸಂಪೂರ್ಣವಾಗಿ ಬದುಕಿದರೆ, ಅದು ಜೀವನದ ಒಂದು ಭಾಗವಾಗುತ್ತದೆ.

## ಹಂಚಿಕೆಯ ಶಕ್ತಿ

ಖಿನ್ನತೆಯ ಸಮಸ್ಯೆಯು ಸಾಮಾನ್ಯವಾಗಿ ಕುಟುಂಬದಿಂದ ಸಂಪರ್ಕ ಕಡಿತಗೊಂಡ ಭಾವನೆಯೊಂದಿಗೆ ಮತ್ತು ಕ್ರಮೇಣ ಸಾಮಾಜಿಕ ಸಂವಹನಗಳಿಂದ ಹಿಂದೆ ಸರಿಯುವುದರೊಂದಿಗೆ ಪ್ರಾರಂಭವಾಗುತ್ತದೆ. ಆಂತರಿಕ ಸಂದಿಗ್ಧತೆಗಳು ಉಲ್ಬಣಗೊಳ್ಳದಂತೆ ಅವುಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಿ. ಕುಟುಂಬ ಸದಸ್ಯರೊಂದಿಗೆ ಮುಕ್ತ ಮಾತುಕತೆಯು ಒತ್ತಡ ನಿವಾರಣೆಯ ಕವಾಟವಾಗಿ ಕಾರ್ಯನಿರ್ವಹಿಸುತ್ತದೆ.

## ನಿಮ್ಮ ಆಸಕ್ತಿಗಳನ್ನು ಅನುಸರಿಸಿ

ನಿಮ್ಮ ಮಕ್ಕಳನ್ನು ಎಲ್ಲೆಡೆ ಮಾದರಿಗಳಾಗಿ ಪ್ರದರ್ಶಿಸಬೇಡಿ, ಆದರೆ ಅವರ ಸಾಮರ್ಥ್ಯಗಳನ್ನು ಪ್ರೀತಿಸಿ ಮತ್ತು ಸ್ವೀಕರಿಸಿ. ಪ್ರತಿಯೊಂದು ಮಗುವಿಗೂ ವಿಶಿಷ್ಟ ಪ್ರತಿಭೆ ಇರುತ್ತದೆ. ಪೋಷಕರು ತಮ್ಮ ಮಕ್ಕಳ ಸಾಮರ್ಥ್ಯಗಳನ್ನು ಗುರುತಿಸಿ ಪೋಷಿಸಬೇಕು.

## ವಿರಮಿಸಿ, ಆಲೋಚಿಸಿ, ಮರು ಆರಂಭಿಸಿ

ಪ್ರಾಣಾಯಾಮದಂತಹ ಉಸಿರಾಟದ ವ್ಯಾಯಾಮಗಳನ್ನು ಅಭ್ಯಾಸ ಮಾಡುವುದರಿಂದ ಆತಂಕವನ್ನು ನಿಯಂತ್ರಿಸಲು ಸಹಾಯ ಮಾಡುವ ವಿಭಿನ್ನ ರೀತಿಯ ಶಕ್ತಿ ಹೇಗೆ ಉತ್ಪತ್ತಿಯಾಗುತ್ತದೆ ಎಂಬುದನ್ನು ಪ್ರಧಾನಿ ವಿವರಿಸಿದರು. ಕೆಲವೇ ಸೆಕೆಂಡುಗಳಲ್ಲಿ ದೇಹವನ್ನು ನಿಯಂತ್ರಣಕ್ಕೆ ತರುವ ಎರಡೂ ಮೂಗಿನ ಹೊಳ್ಳೆಗಳ ಮೂಲಕ ಉಸಿರಾಟವನ್ನು ಸಮತೋಲನಗೊಳಿಸುವ ತಂತ್ರವನ್ನು ಪ್ರಧಾನಿ ವಿವರಿಸಿದರು.

## ದೇಶದಲ್ಲಿ 35 ಕೋಟಿ ಮಕ್ಕಳು

ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (ಯು ಎನ್ ಎಫ್ ಪಿ ಎ) ಪ್ರಕಾರ, ಭಾರತದ 0 ರಿಂದ 14 ವರ್ಷ ವಯಸ್ಸಿನ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಸರಿಸುಮಾರು ಶೇ.24 ರಷ್ಟಿದೆ. ಇದರರ್ಥ ದೇಶದಲ್ಲಿ 14 ವರ್ಷದೊಳಗಿನ ಸುಮಾರು 350 ಮಿಲಿಯನ್ ಮಕ್ಕಳಿದ್ದಾರೆ.

ರಾಷ್ಟ್ರೀಯ ಪ್ರಜ್ಞೆಯ ಸಂಕೇತವಾಗಿದೆ. ಇದು ಭಾರತವು ಸ್ವಾವಲಂಬಿ, ಸಮೃದ್ಧ, ಬಲಿಷ್ಠ ಮತ್ತು ಸಮಗ್ರ ಅಭಿವೃದ್ಧಿಯ ಸಂಕೇತವಾಗಿ ಹೊರಹೊಮ್ಮುವ ಕನಸಾಗಿದೆ.

ಈ ಕನಸಿನ ನಿಜವಾದ ಶಕ್ತಿ ಮತ್ತು ವಾಹಕರು ಇಂದಿನ ಮಕ್ಕಳು, ಅವರು ನಾಳಿನ ಭಾರತದ ನಿರ್ಮಾತೃಗಳು ಮತ್ತು ಚಾಲಕರಾಗುತ್ತಾರೆ. ಪ್ರಧಾನಿ ಮೋದಿಯವರ ದೃಷ್ಟಿಕೋನವು ವರ್ತಮಾನಕ್ಕೆ ಸೀಮಿತವಾಗಿಲ್ಲ; ಅವರು ದೀರ್ಘಕಾಲೀನ ದೃಷ್ಟಿಕೋನದೊಂದಿಗೆ ಭಾರತದ ಬೇರುಗಳನ್ನು ಪೋಷಿಸುತ್ತಿದ್ದಾರೆ. ದೇಶದ ಮಕ್ಕಳಿಗೆ ಸರಿಯಾದ ನಿರ್ದೇಶನ, ಶಿಕ್ಷಣ ಮತ್ತು ಅವಕಾಶಗಳನ್ನು ನೀಡಿದರೆ, ಅವರು ತಮ್ಮ ಜೀವನವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವುದು ಮಾತ್ರವಲ್ಲದೆ ಇಡೀ ರಾಷ್ಟ್ರವನ್ನು ರೂಪಿಸಬಹುದು ಎಂಬುದು ಅವರ ನಂಬಿಕೆ. ಪ್ರತಿಯೊಂದು ಮಗುವೂ ಅಪರಿಮಿತ ಶಕ್ತಿ, ಕಲ್ಪನೆ ಮತ್ತು ನಾವೀನ್ಯತೆಯ ಸಾಮರ್ಥ್ಯವನ್ನು ಹೊಂದಿದೆ. ಈ ಸಾಮರ್ಥ್ಯವು 21 ನೇ ಶತಮಾನದಲ್ಲಿ ಭಾರತವನ್ನು ಜ್ಞಾನ ಮತ್ತು ತಂತ್ರಜ್ಞಾನದ ಸೂಪರ್ ಪವರ್ ಆಗಿ ಮಾಡಬಹುದು.

ಭಾರತವು 100 ವರ್ಷಗಳ ಸ್ವಾತಂತ್ರ್ಯವನ್ನು ಆಚರಿಸುವಾಗ, ಇಂದು 10 ವರ್ಷ ವಯಸ್ಸಿನ ಮಗುವಿಗೆ 32 ವರ್ಷ ವಯಸ್ಸಾಗುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಇದರರ್ಥ ದೇಶದ ನಾಯಕತ್ವ, ನಾವೀನ್ಯತೆ ಮತ್ತು ಉದ್ಯಮದ ಜವಾಬ್ದಾರಿ ಅವರ ಹೆಗಲ ಮೇಲೆ ಇರುತ್ತದೆ. ಆದ್ದರಿಂದ, ಪ್ರಧಾನಿ ಮೋದಿಯವರ

## ಪೋಷಣ್ ಭೀ ಪಢಾಯೀ ಭೀ

- ಅಂಗನವಾಡಿ ಕೇಂದ್ರಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಜೊತೆಗೆ ಪೌಷ್ಟಿಕಾಂಶದ ಮೇಲೆ ಕೇಂದ್ರೀಕರಿಸುವ ಉದ್ದೇಶದಿಂದ ಪೋಷಣ್ ಭೀ ಪಢಾಯೀ ಭೀ (ಪಿಬಿಪಿಬಿ) ಕಾರ್ಯಕ್ರಮವನ್ನು ಮೇ 10, 2023 ರಂದು ಪ್ರಾರಂಭಿಸಲಾಯಿತು.
- ನವಚೇತನ ಮತ್ತು ಆಧಾರಶಿಲಾ ಎಂಬ ಎರಡು ಪಠ್ಯಕ್ರಮಗಳನ್ನು ಈ ಕಾರ್ಯಕ್ರಮ ದಡಿಯಲ್ಲಿ ಪ್ರಾರಂಭಿಸ ಲಾಯಿತು.



**ನವಚೇತನ** ಜನನದಿಂದ ಮೂರು ವರ್ಷದವರೆಗಿನ ಮಕ್ಕಳಿಗಾಗಿ ರಾಷ್ಟ್ರೀಯ ಆರಂಭಿಕ ಬಾಲ್ಯ ಸಂವರ್ಧನಾ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮವು ಜೀವನದ ಮೊದಲ ಮೂರು ವರ್ಷಗಳಲ್ಲಿ ಮೆದುಳಿನ ಬೆಳವಣಿಗೆ ಮತ್ತು ಅದರ ಮಹತ್ವದ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸುತ್ತದೆ.

**ಆಧಾರಶಿಲಾ** 3 ರಿಂದ 6 ವರ್ಷ ವಯಸ್ಸಿನ ಮಕ್ಕಳಿಗಾಗಿ ರಾಷ್ಟ್ರೀಯ ಬಾಲ್ಯದ ಆರೈಕೆ ಮತ್ತು ಶಿಕ್ಷಣ ಪಠ್ಯಕ್ರಮ (ಎಸಿಸಿಇ)ವನ್ನು ಅಭಿವೃದ್ಧಿಪಡಿಸಲಾಗಿದೆ. ಇದು 3-6 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಆರಂಭಿಕ ಬಾಲ್ಯ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಮತ್ತು ಎಲ್ಲರಿಗೂ ಕಲಿಕೆಯ ಕ್ಷೇತ್ರಗಳು ಮತ್ತು ಇತರ ಚಟುವಟಿಕೆಗಳಿಗೆ ಆದ್ಯತೆ ನೀಡುವ ಗುರಿಯನ್ನು ಹೊಂದಿದೆ.




### ಹದಿಹರೆಯದ ಹೆಣ್ಣುಮಕ್ಕಳನ್ನು ಕೌಶಲ್ಯ ತರಬೇತಿಯ ಮೂಲಕ ಸಬಲೀಕರಣಗೊಳಿಸಲಾಗುತ್ತಿದೆ



- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು 14 ರಿಂದ 18 ವರ್ಷ ವಯಸ್ಸಿನ ಹದಿಹರೆಯದ ಬಾಲಕಿಯರಿಗಾಗಿ 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 218 ಜಿಲ್ಲೆಗಳಲ್ಲಿ ಮಿಷನ್ ಸಕ್ಷಮ್ ಅಂಗನವಾಡಿ ಅಡಿಯಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ (ಪಿಎಂಕೆವಿವೈ) ಮೂಲಕ ಪೌಷ್ಟಿಕ ಆಹಾರವನ್ನು ಒದಗಿಸುವುದರ ಜೊತೆಗೆ, ಅವರ ಕೌಶಲ್ಯಗಳನ್ನು ಸಹ ಹೆಚ್ಚಿಸಲಾಗುತ್ತಿದೆ. ಅವರನ್ನು ಉದ್ಯೋಗ ಮತ್ತು ಸ್ವಯಂ ಉದ್ಯೋಗಕ್ಕೆ ಸಿದ್ಧಪಡಿಸುವುದು ಇದರ ಉದ್ದೇಶವಾಗಿದೆ.
- 19 ರಾಜ್ಯಗಳ 27 ಜಿಲ್ಲೆಗಳಲ್ಲಿ 14 ರಿಂದ 18 ವರ್ಷ ವಯಸ್ಸಿನ ಹದಿಹರೆಯದ ಹೆಣ್ಣು ಮಕ್ಕಳಿಗಾಗಿ ವಿಶೇಷ ಪ್ರಾಯೋಗಿಕ ಕೌಶಲ್ಯ ಕಾರ್ಯಕ್ರಮ.





ಸೆಪ್ಟೆಂಬರ್ 19, 2025 ರವರೆಗೆ **6,263** ಹದಿಹರೆಯದ ಹೆಣ್ಣುಮಕ್ಕಳಿಗೆ ತರಬೇತಿ ನೀಡಲಾಗಿದೆ

**'ಅಂಗನವಾಡಿಯಿಂದ ಶಾಲೆಯವರೆಗೆ – ಒಂದು ಕ್ಯಾಂಪಸ್, ಒಂದು ಕನಸು'**
ಒಂದೇ ಕ್ಯಾಂಪಸ್ ನಲ್ಲಿರುವ ಅಂಗನವಾಡಿ ಕೇಂದ್ರಗಳು ಮತ್ತು ಶಾಲೆಗಳ ಮಾದರಿಯು ಬಾಲ್ಯದ ಆರೈಕೆ ಮತ್ತು ಶಿಕ್ಷಣ (ಇಸಿಸಿಇ) ದ ಮೇಲೆ ಕೇಂದ್ರೀಕರಿಸುತ್ತದೆ. 2.9 ಲಕ್ಷಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳು ಶಾಲಾ ಕ್ಯಾಂಪಸ್ ಗಳಲ್ಲಿವೆ.



ಯೋಜನೆಗಳು ಇವತ್ತಿಗೆ ಮಾತ್ರವಲ್ಲ, ಮುಂದಿನ 25 ವರ್ಷಗಳ ದೃಷ್ಟಿಕೋನವನ್ನು ಆಧರಿಸಿವೆ. ಅದಕ್ಕಾಗಿಯೇ, ಪ್ರತಿ ವೇದಿಕೆಯಿಂದಲೂ, ಅವರು ಭಾರತದ ಮಕ್ಕಳು ಸ್ವಾವಲಂಬಿಗಳಾಗಬೇಕು, ಅವರ ಸಾಮರ್ಥ್ಯಗಳಲ್ಲಿ ನಂಬಿಕೆ ಇಡಬೇಕು ಮತ್ತು ಜಾಗತಿಕ ಪ್ರಜೆಗಳಾಗುವತ್ತ ಸಾಗಬೇಕು ಎಂಬ ಸಂದೇಶವನ್ನು ನೀಡುತ್ತಾರೆ.

ಪ್ರಧಾನಿ ಮೋದಿಯವರಿಗೆ ಮಕ್ಕಳ ಮೇಲಿರುವ ವಿಶೇಷ ಪ್ರೀತಿಯನ್ನು ಎಲ್ಲರೂ ನೋಡಿದ್ದಾರೆ. ಮಕ್ಕಳ ಮುಖದಲ್ಲಿನ ನಗುವೇ ದೇಶದ ನಿಜವಾದ ಶಕ್ತಿ ಎಂದು ಅವರು ಪ್ರತಿ ಸಂದರ್ಭದಲ್ಲೂ ಒತ್ತಿ ಹೇಳುತ್ತಾರೆ. ಮಕ್ಕಳನ್ನು ದೇಶದ ಸಂಪತ್ತು ಮತ್ತು ಭವಿಷ್ಯದ ಶಿಲ್ಪಿಗಳು ಎಂದು ಅವರು ಕರೆಯುತ್ತಾರೆ. ಮಕ್ಕಳೊಂದಿಗಿನ ಪ್ರಧಾನಿ ಮೋದಿಯವರ ಒಡನಾಟವು ಭಾವನಾತ್ಮಕವಾಗಿ ಮಾತ್ರವಲ್ಲದೆ ನೀತಿ ಮಟ್ಟದಲ್ಲಿಯೂ ಆಳವಾಗಿ ಬೇರೂರಿದೆ. ಈ ಪ್ರಯತ್ನದಲ್ಲಿ, ಆಟಿಕೆ ವಲಯದಲ್ಲಿ ಸ್ವಾವಲಂಬನೆ ಅಭಿಯಾನವು ಒಂದು ಪ್ರಮುಖ ಅವಕಾಶವನ್ನು ಒದಗಿಸುತ್ತದೆ. ಇಂದು, ಆಟಿಕೆಗಳು ಸ್ವಾವಲಂಬನೆಯ ಪ್ರಮುಖ ಆಧಾರಸ್ತಂಭವಾಗಿ ಮಾರ್ಪಟ್ಟಿವೆ. ಭಾರತವು ಸಾಂಪ್ರದಾಯಿಕ ಆಟಿಕೆಗಳನ್ನು ತಯಾರಿಸುವ ಮೂಲಕ ಮಕ್ಕಳನ್ನು ಸಂಪ್ರದಾಯದೊಂದಿಗೆ ಬೆಸೆಯುತ್ತಿದೆ. ಇಂದು, ಭಾರತವು ಆಟಿಕೆಗಳ ದಾಖಲೆಯ ರಫ್ತು ಪ್ರಾರಂಭಿಸಿದೆ.

### ಯುವ ಮನಸ್ಸುಗಳ ಕನಸುಗಳು ನನಸಾಗುತ್ತಿವೆ

ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ಭಾರತವು ಹೊಸ ಯುಗಕ್ಕೆ ನಾಂದಿ ಹಾಡಿದೆ. ಈ ಯುಗವನ್ನು ಇಂದು ಪೆನ್ಸಿಲ್ ಹಿಡಿದು ಬರೆಯುವ ಲಕ್ಷಾಂತರ ಪುಟ್ಟ ಕೈಗಳು ನಾಳೆಯ ಭಾರತದ ಭವಿಷ್ಯವನ್ನು ರೂಪಿಸುತ್ತವೆ. ಮಕ್ಕಳ ಮೇಲಿನ ಪ್ರಧಾನಿ ಮೋದಿಯವರ ಆಳವಾದ ವಾತ್ಸಲ್ಯವು ರಹಸ್ಯವೇನಲ್ಲ. ಅವರು ಮಕ್ಕಳನ್ನು ದೇಶದ ಭವಿಷ್ಯ ಮಾತ್ರವಲ್ಲದೆ ಅದರ ವರ್ತಮಾನದ ಅಡಿಪಾಯವೆಂದೂ ಪರಿಗಣಿಸುತ್ತಾರೆ. ಇದಕ್ಕಾಗಿಯೇ ಮಕ್ಕಳ ಕಲ್ಯಾಣ, ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಪ್ರತಿಯೊಂದು ಪ್ರಮುಖ ಸರ್ಕಾರಿ ಉಪಕ್ರಮದಲ್ಲಿ ಕೇಂದ್ರೀಯವಾಗಿ ಸಂಯೋಜಿಸಲಾಗಿದೆ. ಅದು ಪೋಷಣ್ ಅಭಿಯಾನವಾಗಿರಬಹುದು, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಾಗಿರಬಹುದು, ಬೇಟಿ ಬಚಾವೋ ಬೇಟಿ ಪಢಾವೋ ಯೋಜನೆ ಆಗಿರಬಹುದು ಅಥವಾ ಪ್ರತಿ ಮಗುವನ್ನು ತಂತ್ರಜ್ಞಾನಕ್ಕೆ ಸಂಪರ್ಕಿಸುವ ಡಿಜಿಟಲ್ ಅಭಿಯಾನದ ಕನಸಾಗಿರಬಹುದು.

ಭಾರತದ ಉಜ್ವಲ ಭವಿಷ್ಯಕ್ಕಾಗಿ, ಮಕ್ಕಳ ಜೀವನವನ್ನು ಸುಧಾರಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಇದನ್ನು ಸಾಧಿಸಲು, ವಿವಿಧ ಯೋಜನೆಗಳನ್ನು ಸಂಯೋಜಿಸಿ

## ವಿಶ್ವಸಂಸ್ಥೆಯ ವಿಶ್ವ ಮಕ್ಕಳ ದಿನ

- ವಿಶ್ವ ಮಕ್ಕಳ ದಿನವನ್ನು ಮೊದಲು 1954 ರಲ್ಲಿ ಸಾರ್ವತ್ರಿಕ ಮಕ್ಕಳ ದಿನವಾಗಿ ಸ್ಥಾಪಿಸಲಾಯಿತು ಮತ್ತು ಅಂತಾರಾಷ್ಟ್ರೀಯ ಒಗ್ಗಟ್ಟನ್ನು ಉತ್ತೇಜಿಸಲು, ಪ್ರಪಂಚದಾದ್ಯಂತ ಮಕ್ಕಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಮಕ್ಕಳ ಕಲ್ಯಾಣವನ್ನು ಸುಧಾರಿಸಲು ಪ್ರತಿ ವರ್ಷ ನವೆಂಬರ್ 20 ರಂದು ಆಚರಿಸಲಾಗುತ್ತದೆ.
- ನವೆಂಬರ್ 20 ಒಂದು ಮಹತ್ವದ ದಿನಾಂಕ, ಏಕೆಂದರೆ 1959ರ ಈ ದಿನದಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಕ್ಕಳ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿತು. 1989ರ ಈ ದಿನದಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಕ್ಕಳ ಹಕ್ಕುಗಳ ಸಮಾವೇಶವನ್ನು ಸಹ ಅಂಗೀಕರಿಸಿತು. 1990 ರಿಂದ, ಅವುಗಳ ವಾರ್ಷಿಕೋತ್ಸವವನ್ನು ವಿಶ್ವ ಮಕ್ಕಳ ದಿನದಂದು ಆಚರಿಸಲಾಗುತ್ತದೆ.

## 'ಕೀರ್ತಿ'ಮೂಲಕ ಪ್ರತಿಭೆಯನ್ನು ಗುರುತಿಸುವುದು

**ಖೇಲೋ ಇಂಡಿಯಾ ರೈಸಿಂಗ್ ಟ್ಯಾಲೆಂಟ್ ಐಡೆಂಟಿಫಿಕೇಶನ್ (KIRTI) 9 ರಿಂದ 18 ವರ್ಷ ವಯಸ್ಸಿನ ಮಕ್ಕಳಲ್ಲಿ ಕ್ರೀಡಾ ಪ್ರತಿಭೆಯನ್ನು ಗುರುತಿಸಲು ಮತ್ತು ಉತ್ತೇಜಿಸಲು ಪ್ರಾರಂಭಿಸಲಾದ ಒಂದು ಉಪಕ್ರಮವಾಗಿದೆ.**

- ಖೇಲೋ ಇಂಡಿಯಾ ನೀತಿ 2025, ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಯುವ ಕ್ರೀಡಾ ಪ್ರತಿಭೆಯನ್ನು ಗುರುತಿಸುವ ಮತ್ತು ಪೋಷಿಸುವ ಸಮಗ್ರ ಚೌಕಟ್ಟನ್ನು ಒಳಗೊಂಡಿದೆ. ಕ್ರೀಡೆಗಳನ್ನು ಶಿಕ್ಷಣ ವ್ಯವಸ್ಥೆಯಲ್ಲಿ ಸಂಯೋಜಿಸುವ ಮೂಲಕ ಇದು ದೈಹಿಕ ಸಾಕ್ಷರತೆಯನ್ನು ಬಾಲ್ಯದಿಂದಲೇ ಒಂದು ಪ್ರಮುಖ ಅಂಶವೆಂದು ಗುರುತಿಸುತ್ತದೆ. ಇದು ರಾಷ್ಟ್ರೀಯ ಶಿಕ್ಷಣ ನೀತಿ (ಎನ್ ಇ ಪಿ) 2020 ರ ಜೀವನಪರ್ಯಂತ ದೇಹದಾರ್ಢ್ಯತೆಯನ್ನು ಉತ್ತೇಜಿಸುವ ಗಮನಕ್ಕೆ ಅನುಗುಣವಾಗಿದೆ.

**174** **ದೇಶದಲ್ಲಿರುವ ಪ್ರತಿಭಾ ಮೌಲ್ಯಮಾಪನ ಕೇಂದ್ರಗಳು**





# ಮಕ್ಕಳ ಲಸಿಕಾ ಅಭಿಯಾನ... ರೋಗಗಳನ್ನು ತಡೆಗಟ್ಟಲು

- ದೇಶದಲ್ಲಿ ಲಸಿಕೆ ಅಭಿಯಾನದ ಭಾಗವಾಗಿ, ರಾಷ್ಟ್ರೀಯ ಲಸಿಕಾ ಕಾರ್ಯಕ್ರಮದಡಿಯಲ್ಲಿ ಮಕ್ಕಳಿಗೆ 12 ರೋಗಗಳ ವಿರುದ್ಧ ಉಚಿತ ಲಸಿಕೆಗಳನ್ನು ನೀಡಲಾಗುತ್ತಿದೆ.
- ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮಕ್ಕಳು ಮತ್ತು ಗರ್ಭಿಣಿಯರಿಗೆ ಲಸಿಕೆ ಹಾಕಲು ವಾರಕ್ಕೊಮ್ಮೆ ನಿಯಮಿತ ಲಸಿಕೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.
- ಕಡಿಮೆ ಲಸಿಕೆ ವ್ಯಾಪ್ತಿ ಹೊಂದಿರುವ ಪ್ರದೇಶಗಳಲ್ಲಿ, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ, ತಪ್ಪಿದ ಮತ್ತು ಲಸಿಕೆ ಪಡೆಯದ ಮಕ್ಕಳಿಗೆ ಲಸಿಕೆ ಹಾಕಲು ವಿಶೇಷ ಲಸಿಕಾ ಅಭಿಯಾನ, ತೀವ್ರಗೊಳಿಸಿದ ಮಿಷನ್ ಇಂದ್ರಧನುಷ್ ಅನ್ನು ಪ್ರಾರಂಭಿಸಲಾಯಿತು.
- ಪಲ್ಸ್ ಪೋಲಿಯೊ ಕಾರ್ಯಕ್ರಮದಡಿಯಲ್ಲಿ ಪ್ರತಿ ವರ್ಷ ರಾಷ್ಟ್ರೀಯ ಲಸಿಕಾ ದಿನದಂತಹ ವಿಶೇಷ ಲಸಿಕಾ ಅಭಿಯಾನಗಳನ್ನು ಆಯೋಜಿಸಲಾಗುತ್ತದೆ.
- 2013 ರವರೆಗೆ, ರಾಷ್ಟ್ರೀಯ ಲಸಿಕಾ ಕಾರ್ಯಕ್ರಮವು ಕೇವಲ ಆರು ಲಸಿಕೆಗಳನ್ನು ಹೊಂದಿತ್ತು, 2014 ರಲ್ಲಿ ಆರು ಹೊಸ ಲಸಿಕೆಗಳನ್ನು ಸೇರಿಸಲಾಯಿತು.



### ಮಕ್ಕಳಿಗೆ ಈ ರೋಗಗಳ ವಿರುದ್ಧ ಲಸಿಕೆ ಹಾಕಲಾಗುತ್ತಿದೆ

▪ ಹೆಪಟೈಟಿಸ್ ಬಿ ಲಸಿಕೆ, ▪ ಓರಲ್ ಪೋಲಿಯೊ ಲಸಿಕೆ (ಒಪಿವಿ), ▪ ಬ್ಯಾಸಿಲಸ್ ಕ್ಯಾಲ್ಮೆಟ್ ಗುಯೆರಿನ್ ಲಸಿಕೆ (ಬಿಸಿಜಿ), ಇಂಜೆಕ್ಷನ್ ಪೋಲಿಯೊ ಲಸಿಕೆ (ಐಪಿವಿ), ▪ ಪೆಂಟಾವಲೆಂಟ್ ಲಸಿಕೆ, ▪ ರೋಟವೈರಸ್ ಲಸಿಕೆ (ಆರ್ ವಿ ವಿ), ▪ ನ್ಯುಮೋಕೊಕಲ್ ಕಾಂಜುಗೇಟ್ ಲಸಿಕೆ (ಪಿಸಿವಿ), ▪ ದಡಾರ ಮತ್ತು ರುಬೆಲ್ಲಾ ಲಸಿಕೆ (ಎಂಆರ್), ▪ ಡಿಫ್ತೀರಿಯಾ ಪೆರ್ಟುಸಿಸ್ ಟೆಟನಸ್ ಲಸಿಕೆ (ಡಿಪಿಟಿ), ▪ ಧನುರ್ವಾಯು ಮತ್ತು ವಯಸ್ಕ ಡಿಫ್ತೀರಿಯಾ ಲಸಿಕೆ (ಟಿಡಿ), ▪ ಜಪಾನೀಸ್ ಎನ್ಸೆಫಾಲಿಟಿಸ್ ಲಸಿಕೆ (ಜೆಇ)

ಮಿಷನ್ ಮೋಡ್ ನಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ನೀರು, ಔಷಧ ಅಥವಾ ಎತ್ತರದ ಸಮಸ್ಯೆಯಾಗಿರಲಿ, ಪೋಷಣ್ ಅಭಿಯಾನವನ್ನು ಸಮಗ್ರ ವಿಧಾನದೊಂದಿಗೆ ಕಾರ್ಯಗತಗೊಳಿಸಲಾಗುತ್ತಿದೆ. ಮಿಷನ್ ಇಂದ್ರಧನುಷ್ ಲಸಿಕೆ ಅಭಿಯಾನವನ್ನು ವೇಗಗೊಳಿಸಿದೆ. ಮಿಷನ್ ಇಂದ್ರಧನುಷ್ ಲಸಿಕೆ ಅಭಿಯಾನವನ್ನು ಚುರುಕುಗೊಳಿಸಿದೆ. ಮಾತೃ ವಂದನ ಯೋಜನೆಯಡಿಯಲ್ಲಿ ತಾಯಂದಿರಿಗೆ ಆರ್ಥಿಕ ನೆರವು, ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ಶೌಚಾಲಯ ನಿರ್ಮಾಣ, ಉಜ್ವಲ ಯೋಜನೆಯಡಿಯಲ್ಲಿ ಅಡುಗೆ ಅನಿಲ ಮತ್ತು ಶುದ್ಧ ನಲ್ಲಿ ನೀರಿನ ಲಭ್ಯತೆ ಆರೋಗ್ಯಕರ ರಾಷ್ಟ್ರದತ್ತ ಪ್ರಮುಖ ಸಾಮಾಜಿಕ ಹೆಜ್ಜೆಗಳಾಗಿವೆ.

ವಿಕಸಿತ ಭಾರತದತ್ತ ಪ್ರಯಾಣವು ಕಟ್ಟಡಗಳ ನಿರ್ಮಾಣ ಅಥವಾ ಹೊಸ ಯೋಜನೆಗಳ ಆರಂಭದಿಂದ ಮಾತ್ರವಲ್ಲ, ಕನಸು ಕಾಣುವ ಮತ್ತು ಅವುಗಳನ್ನು ನನಸಾಗಿಸುವ ಸಾಮರ್ಥ್ಯ ಹೊಂದಿರುವ ಯುವ ಮನಸ್ಸುಗಳಿಂದಲೂ ನಿರ್ಧರಿಸಲ್ಪಡುತ್ತದೆ ಎಂಬುದಕ್ಕೆ ಪ್ರಧಾನಿ ಮೋದಿಯವರ ದೂರದೃಷ್ಟಿ ಸಾಕ್ಷಿಯಾಗಿದೆ. ಇಂದಿನ ಮಕ್ಕಳು ನಾಳಿನ ವಿಕಸಿತ ಭಾರತದ ಚಾಲಕರು, ಏಕೆಂದರೆ ಅವರು ಹೊಸ ಶಕ್ತಿ, ಹೊಸ ಚಿಂತನೆ ಮತ್ತು ಹೊಸ ಭಾರತದ ನಿಯಂತ್ರಣವನ್ನು ಹೊಂದಿರುತ್ತಾರೆ. ಪ್ರಧಾನಿ ಮೋದಿಯವರ ಸ್ಫೂರ್ತಿಯೆಂದರೆ, ಪ್ರತಿಯೊಂದು ಮಗುವೂ ತಮ್ಮ ಸಾಮರ್ಥ್ಯಗಳಲ್ಲಿ ನಂಬಿಕೆ ಇಡಬೇಕು, ದೊಡ್ಡ ಕನಸು ಕಾಣಬೇಕು ಮತ್ತು ಅವುಗಳನ್ನು ನನಸಾಗಿಸುವ ಧೈರ್ಯ



## ಮಕ್ಕಳ ಮರಣ ಪ್ರಮಾಣದಲ್ಲಿ ಇಳಿಕೆ

**ವಿಶ್ವಸಂಸ್ಥೆಯ ಲಸಿಕಾ ವ್ಯವಸ್ಥೆ ಕುರಿತ ಅಂತರ-ಸಂಸ್ಥೆ ಗುಂಪು (UNIGME 2024 ವರದಿ) ಪ್ರಕಾರ**

1990 ಮತ್ತು 2023 ರ ನಡುವೆ, ಭಾರತವು ಐದು ವರ್ಷದೊಳಗಿನ ಮಕ್ಕಳ ಮರಣ ದರದಲ್ಲಿ **ಶೇ.78** ಇಳಿಕೆ ದಾಖಲಿಸಿದೆ, ಆದರೆ ಜಾಗತಿಕವಾಗಿ ಈ ಇಳಿಕೆ ಶೇ.61 ರಷ್ಟಿದೆ.

ಇದೇ ಅವಧಿಯಲ್ಲಿ, ಭಾರತದಲ್ಲಿ ನವಜಾತ ಶಿಶುಗಳ ಮರಣ ಪ್ರಮಾಣವು **ಶೇ.70** ರಷ್ಟು ಕಡಿಮೆಯಾಗಿದೆ, ಜಾಗತಿಕವಾಗಿ ಇದು ಶೇ.54 ರಷ್ಟು ಮಾತ್ರ ಕಡಿಮೆಯಾಗಿತ್ತು.



### ಶಿಶು ಮತ್ತು ಮಕ್ಕಳ ಮರಣ ದರಗಳು

ಪ್ರತಿ 1,000 ಜೀವಂತ ಜನನಗಳಿಗೆ

| | 2014 | 2020 |
|---|---|---|
| ನವಜಾತ ಶಿಶು ಮರಣ ದರ (ಎನ್ ಎಂ ಆರ್) | 26 | 20 |
| ಶಿಶು ಮರಣ ದರ (ಐ ಎಂ ಆರ್) | 39 | 28 |
| U5MR (5 ವರ್ಷದೊಳಗಿನವರ ಮರಣ ದರ) | 45 | 32 |

ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ಪ್ರತಿ ವರ್ಷ **2.6** ಕೋಟಿ ಮಕ್ಕಳಿಗೆ ಸಂಪೂರ್ಣವಾಗಿ ಲಸಿಕೆ ಹಾಕಲಾಗುತ್ತದೆ.

**ಶೇ.94** ರಷ್ಟು ಮಕ್ಕಳು ಸಂಪೂರ್ಣವಾಗಿ ಲಸಿಕೆ ಪಡೆದಿದ್ದಾರೆ.

**ಪಾಲನಾ**

**28,783** ಫಲಾನುಭವಿಗಳು ಫೆಬ್ರವರಿ 2025ರ ಹೊತ್ತಿಗೆ ಪ್ರಯೋಜನ ಪಡೆದಿದ್ದಾರೆ.

ಇದು 6 ತಿಂಗಳಿನಿಂದ 6 ವರ್ಷ ವಯಸ್ಸಿನ ಮಕ್ಕಳಿಗೆ ಸುರಕ್ಷಿತ ಮತ್ತು ಸುಭದ್ರ ವಾತಾವರಣದಲ್ಲಿ ಗುಣಮಟ್ಟದ ಶಿಶುವಿಹಾರ ಸೌಲಭ್ಯಗಳು, ಪೌಷ್ಟಿಕಾಂಶ ಬೆಂಬಲ, ಮಕ್ಕಳ ಆರೋಗ್ಯ ಮತ್ತು ಅಭಿವೃದ್ಧಿ ಮತ್ತು ಲಸಿಕಾ ಬೆಂಬಲವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಪಾಲನಾ ಅಡಿಯಲ್ಲಿ, ಎಲ್ಲಾ ತಾಯಂದಿರಿಗೆ ಅವರ ಉದ್ಯೋಗದ ಸ್ಥಿತಿಯನ್ನು ಲೆಕ್ಕಿಸದೆ ಶಿಶುವಿಹಾರ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

**ಮಕ್ಕಳ ಸಹಾಯವಾಣಿ ಸಂಖ್ಯೆ**

ಮಿಷನ್ ವಾತ್ಸಲ್ಯ ಮಾರ್ಗಸೂಚಿಗಳ ಪ್ರಕಾರ, ದೇಶಾದ್ಯಂತ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ತುರ್ತು ಪ್ರತಿಕ್ರಿಯೆ ಬೆಂಬಲ ವ್ಯವಸ್ಥೆಗಳು ಜಾರಿಯಲ್ಲಿವೆ.

**112** ಸಂಖ್ಯೆಗೆ ಸಹಾಯಕ್ಕಾಗಿ ಕರೆ ಮಾಡಬಹುದು

**689** ಜಿಲ್ಲೆಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ.

ಹೊಂದಿರಬೇಕು. ಈ ನಂಬಿಕೆಯೊಂದಿಗೆ, ಭಾರತವು ಪ್ರತಿಯೊಂದು ಮಗುವೂ ತಮ್ಮ ಕನಸಿನ ಭಾರತವನ್ನು ನಿರ್ಮಿಸುವ ಹಾದಿಯತ್ತ ಸಾಗುತ್ತಿದೆ ಮತ್ತು ಪ್ರತಿಯೊಂದು ಕನಸು ವಿಕಸಿತ ಭಾರತದ ವಿಶಿಷ್ಟ ಲಕ್ಷಣವಾಗುತ್ತದೆ.

**ಶಿಕ್ಷಣ – ಭವಿಷ್ಯಕ್ಕೆ ಭದ್ರ ಬುನಾದಿ**

ಶಿಕ್ಷಣವು ಯಾವುದೇ ರಾಷ್ಟ್ರದ ಬೆನ್ನೆಲುಬು. ಈ ಚಿಂತನೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು 2020 ರಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಷ್ಟ್ರಕ್ಕೆ ಸಮರ್ಪಿಸಿದರು.

> **“ ಮಕ್ಕಳು ಆರೋಗ್ಯವಾಗಿರಬೇಕು ಮತ್ತು ಸರಿಯಾದ ತೂಕ ಮತ್ತು ಎತ್ತರವನ್ನು ಹೊಂದಿರಬೇಕು, ಸಮಗ್ರ ವಿಧಾನದಲ್ಲಿ ಈ ಎಲ್ಲ ಅಂಶಗಳಿಗೂ ಗಮನ ನೀಡಬೇಕು... ಪೌಷ್ಟಿಕಾಂಶ ಕ್ಷೇತ್ರದಲ್ಲಿ, ನಾವು ಇದನ್ನು ಸಾಧಿಸಿದ್ದೇವೆ ಎಂದು ಹೆಮ್ಮೆಯಿಂದ ಜಗತ್ತಿಗೆ ಹೇಳಲು ಸಾಧ್ಯವಾಗಬೇಕು. ನಗುಮೊಗದ ಮತ್ತು ಚುರುಕಾಗಿರುವ ಮಕ್ಕಳನ್ನು ಪ್ರತಿ ಕ್ಷಣವೂ ಕಾಣುವ ಪರಿಸ್ಥಿತಿಯನ್ನು ನಾವು ಸೃಷ್ಟಿಸಬೇಕು.**
>
> **ನರೇಂದ್ರ ಮೋದಿ, ಪ್ರಧಾನಮಂತ್ರಿ**

ಈ ನೀತಿಯು ಕೇವಲ ಪುಸ್ತಕಗಳು ಮತ್ತು ಪರೀಕ್ಷೆಗಳನ್ನು ಆಧರಿಸಿರುವುದಿಲ್ಲ, ಬದಲಾಗಿ ಮಕ್ಕಳ ಸಮಗ್ರ ಬೆಳವಣಿಗೆಗೆ ಒಂದು ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಇದು ಕಂಠಪಾಠ ಮಾಡುವ ಬದಲು ತಿಳುವಳಿಕೆ, ಚಿಂತನೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸುತ್ತದೆ.

ಈಗ ಮಕ್ಕಳು ತಮ್ಮ ಆಸಕ್ತಿಯ ವಿಷಯಗಳನ್ನು ಆಯ್ಕೆ ಮಾಡಬಹುದು, ಪ್ರಯೋಗಗಳ ಮೂಲಕ ಕಲಿಯಬಹುದು ಮತ್ತು ಡಿಜಿಟಲ್ ಪ್ಲಾಟ್ಫಾರ್ಮ್‌ಗಳನ್ನು ಬಳಸಿಕೊಂಡು ಪ್ರಪಂಚದಾದ್ಯಂತದ ಜ್ಞಾನದೊಂದಿಗೆ ಸಂಪರ್ಕ ಸಾಧಿಸಬಹುದು. ಈ ಶಿಕ್ಷಣ ನೀತಿಯು ಭಾರತೀಯ ಮಕ್ಕಳನ್ನು ಉದ್ಯೋಗಾಕಾಂಕ್ಷಿಗಳು ಮಾತ್ರವಲ್ಲದೆ, ನಾವೀನ್ಯಕಾರರು ಮತ್ತು ಉದ್ಯೋಗ ಸೃಷ್ಟಿಕರ್ತರೂ ಆಗಿರುವ ನಾಗರಿಕರನ್ನಾಗಿ ಪರಿವರ್ತಿಸುತ್ತಿದೆ. ಪ್ರಧಾನಿ ಮೋದಿಯವರ ದೃಷ್ಟಿಕೋನವು ಸ್ಪಷ್ಟವಾಗಿದೆ: "ಪ್ರತಿಯೊಬ್ಬ ಭಾರತೀಯ ಮಗುವೂ ಆತ್ಮವಿಶ್ವಾಸ ಹೊಂದಿರಬೇಕು, ತಮ್ಮ ಬೇರುಗಳೊಂದಿಗೆ ಸಂಪರ್ಕ ಹೊಂದಿರಬೇಕು ಮತ್ತು ಜಾಗತಿಕ ವೇದಿಕೆಯಲ್ಲಿ ಭಾರತಕ್ಕೆ ಕೀರ್ತಿ ತರಬೇಕು."

ಶಿಕ್ಷಣ ಮಾತ್ರ ಸಾಕಾಗುವುದಿಲ್ಲ; ಅದು ಕೌಶಲ್ಯಗಳಿಂದ ಪೂರಕವಾಗಿರಬೇಕು. ಈಗ, ಇವುಗಳನ್ನು ಪಠ್ಯಕ್ರಮದಲ್ಲಿ ಸಂಯೋಜಿಸಲಾಗಿದ್ದು, ಸಮಗ್ರ ಅಭಿವೃದ್ಧಿಗೆ ಅವಕಾಶಗಳನ್ನು ಒದಗಿಸಲಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಯ ಪ್ರೋತ್ಸಾಹವೂ ಪ್ರಾರಂಭವಾಗಿದೆ. 'ವಿದ್ಯಾಪ್ರವೇಶ'ಕಾರ್ಯಕ್ರಮವು ಇದರಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಹಿಂದೆ ದೊಡ್ಡ ನಗರಗಳಿಗೆ ಸೀಮಿತವಾಗಿದ್ದ ಪ್ಲೇಸ್ಕೂಲ್ ಪರಿಕಲ್ಪನೆಯು ಈಗ 'ವಿದ್ಯಾ ಪ್ರವೇಶ'ದ ಮೂಲಕ ದೂರದ ಶಾಲೆಗಳನ್ನು ತಲುಪುತ್ತಿದೆ. ಇದರರ್ಥ ದೇಶದ ಯಾವುದೇ ಭಾಗದಲ್ಲಿ, ಮಗು ಶ್ರೀಮಂತನಾಗಿರಲಿ ಅಥವಾ ಬಡವನಾಗಿರಲಿ, ಅವರ ಶಿಕ್ಷಣವು ನಲಿವಿನ ವಾತಾವರಣದಲ್ಲಿ ನಡೆಯುತ್ತದೆ. ಅದು ನಗುವಿನೊಂದಿಗೆ ಪ್ರಾರಂಭವಾದಾಗ, ಯಶಸ್ಸಿನ ಹಾದಿ ಸುಗಮವಾಗಿರುತ್ತದೆ. ಇಂದು, ದೇಶದಲ್ಲಿ 300,000ಕ್ಕೂ ಹೆಚ್ಚು ಮಕ್ಕಳು ತಮ್ಮ ಶಿಕ್ಷಣಕ್ಕಾಗಿ ಸಂಕೇತ ಭಾಷೆಯನ್ನು ಅವಲಂಬಿಸಿದ್ದಾರೆ. ಇದನ್ನು ಗುರುತಿಸಿ, ಭಾರತೀಯ ಸಂಕೇತ ಭಾಷೆಗೆ ಮೊದಲ ಬಾರಿಗೆ ಭಾಷಾ ವಿಷಯದ ಸ್ಥಾನಮಾನವನ್ನು ನೀಡಲಾಯಿತು. ಈಗ, ವಿದ್ಯಾರ್ಥಿಗಳು ಅದನ್ನು ಒಂದು ಭಾಷೆಯಾಗಿಯೂ ಅಧ್ಯಯನ ಮಾಡುತ್ತಿದ್ದಾರೆ. ಇದು ಮಕ್ಕಳಿಗೆ, ವಿಶೇಷವಾಗಿ ವಿಕಲಚೇತನರಿಗೆ ಬಹಳ ಸಹಾಯ ಮಾಡುತ್ತಿದೆ.

**ಆರೋಗ್ಯ ಮತ್ತು ಪೋಷಣೆ: ಬಲಿಷ್ಠ ರಾಷ್ಟ್ರದ ಅಡಿಪಾಯ**

ಭಗವದ್ಗೀತೆಯು

"युक्ताहारविहारस्य युक्तचेष्टस्य कर्मसु।
युक्तस्वप्नावबोधस्य योगो भवति दुःखहा॥."

## ಸುರಕ್ಷಿತ ಬಾಲ್ಯ

## ಬಾಲ್ಯ ವಿವಾಹ ಮುಕ್ತ ಭಾರತ

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ನವೆಂಬರ್ 27, 2024 ರಂದು ರಾಷ್ಟ್ರೀಯ ಮಟ್ಟದಲ್ಲಿ ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನವನ್ನು ಪ್ರಾರಂಭಿಸಿತು. ಈ ಸಂದರ್ಭದಲ್ಲಿ http://stopchildmarriage.wcd.gov.in ಪೋರ್ಟಲ್ ಅನ್ನು ಪ್ರಾರಂಭಿಸಲಾಯಿತು.**




## ಲೈಂಗಿಕ ದೌರ್ಜನ್ಯದಿಂದ ರಕ್ಷಣೆ

ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಗಟ್ಟಲು 2012 ರಲ್ಲಿ ಜಾರಿಗೆ ತರಲಾದ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ (ಪೋಕ್ಸೋ) ಅನ್ನು ಮತ್ತಷ್ಟು ಬಲಪಡಿಸಲು 2019 ರಲ್ಲಿ ಗಮನಾರ್ಹ ತಿದ್ದುಪಡಿಗಳನ್ನು ಮಾಡಲಾಯಿತು.

- ಗಂಭೀರ ಲೈಂಗಿಕ ಅಪರಾಧಗಳಿಗೆ ಮರಣದಂಡನೆಯವರೆಗೆ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಲಾಯಿತು.
- ಕಾನೂನನ್ನು ಲಿಂಗ-ತಟಸ್ಥವನ್ನಾಗಿ ಮಾಡಲಾಯಿತು, ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳಿಬ್ಬರಿಗೂ ಸಮಾನ ರಕ್ಷಣೆಯನ್ನು ಖಾತ್ರಿಪಡಿಸಲಾಯಿತು.
- ಮಕ್ಕಳ ಅಶ್ಲೀಲ ಚಿತ್ರಗಳು ಮತ್ತು ಆನ್ಲೈನ್ ನಲ್ಲಿ ಅಶ್ಲೀಲ ವಿಷಯವನ್ನು ಹಂಚಿಕೊಳ್ಳುವುದಕ್ಕೆ ಕಠಿಣ ಶಿಕ್ಷೆಗಳು ಅಸ್ತಿತ್ವದಲ್ಲಿವೆ.
- ಲೈಂಗಿಕ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ನ್ಯಾಯವನ್ನು ತ್ವರಿತಗೊಳಿಸಲು ವಿಶೇಷ ಮತ್ತು ತ್ವರಿತ ನ್ಯಾಯಾಲಯಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು.

30 ರಾಜ್ಯಗಳಲ್ಲಿ ಪೋಕ್ಸೋ ನ್ಯಾಯಾಲಯಗಳು ಸೇರಿದಂತೆ

**404**

ತ್ವರಿತ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಜನವರಿ 2025ರ ವೇಳೆಗೆ

**3.06**

ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ಪರಿಹರಿಸಲಾಗಿದೆ.

> **"ದೇಶದಲ್ಲಿ 3 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಸಂಕೇತ ಭಾಷೆಯ ಅಗತ್ಯವಿದೆ. ಆದ್ದರಿಂದ, ಮೊದಲ ಬಾರಿಗೆ, ಭಾರತೀಯ ಸಂಕೇತ ಭಾಷೆಗೆ "ವಿಷಯ" ಸ್ಥಾನಮಾನ ನೀಡಲಾಗಿದೆ. ಇದು ಭಾರತೀಯ ಸಂಕೇತ ಭಾಷೆಯನ್ನು ಹೆಚ್ಚು ಉತ್ತೇಜಿಸುತ್ತದೆ ಮತ್ತು ನಮ್ಮ ವಿಭಿನ್ನ ಸಾಮರ್ಥ್ಯದ ಸ್ನೇಹಿತರಿಗೆ ಹೆಚ್ಚಿನ ಸಹಾಯ ಮಾಡುತ್ತದೆ.**
>
> **ನರೇಂದ್ರ ಮೋದಿ,**
> **ಪ್ರಧಾನ ಮಂತ್ರಿ**

ಎಂದು ಹೇಳುತ್ತದೆ. ಇದರ ಅರ್ಥ, "ಆಹಾರ ಮತ್ತು ಮನರಂಜನೆಯನ್ನು ನಿಯಂತ್ರಿಸಿದ, ಕರ್ಮ ಮತ್ತು ಪರಿಶ್ರಮದಲ್ಲಿ ಮಿತವಾಗಿರುವ ಮತ್ತು ನಿದ್ರೆ ಮತ್ತು ಎಚ್ಚರದಲ್ಲಿ ಸಂಯಮ ಹೊಂದಿರುವವನಿಗೆ ಯೋಗವು ದುಃಖವನ್ನು ನಾಶಮಾಡುವ ಸಾಧನವಾಗುತ್ತದೆ."

"ಈ ಮನೋಭಾವವನ್ನು ಗಮನದಲ್ಲಿಟ್ಟುಕೊಂಡು, ಕಳೆದ 11 ವರ್ಷಗಳಲ್ಲಿ, ಕೇಂದ್ರ ಸರ್ಕಾರವು ತಾಯಂದಿರು ಮತ್ತು ಮಕ್ಕಳ ಆರೋಗ್ಯಕರ ಜೀವನವನ್ನು ಖಚಿತಪಡಿಸಿಕೊಳ್ಳಲು ಅವರ ಪೋಷಣೆ ಮತ್ತು ಆರೋಗ್ಯಕ್ಕೆ ಒತ್ತು ನೀಡಿದೆ. ಕೇಂದ್ರ ಸರ್ಕಾರವು ಪೌಷ್ಟಿಕತೆಯನ್ನು ಉತ್ತೇಜಿಸಲು ವ್ಯಾಪಕವಾಗಿ ಕೆಲಸ ಮಾಡಿದೆ. ಬಾಲ್ಯದ ಸುತ್ತಲೂ ಬಲವಾದ ರಕ್ಷಣಾತ್ಮಕ ಗುರಾಣಿಯನ್ನು ರಚಿಸಲು ಪ್ರಯತ್ನಗಳನ್ನು ಮಾಡಲಾಗಿದೆ. ಈ ರಕ್ಷಣಾತ್ಮಕ ಗುರಾಣಿ ಮೂರು ಅಂಶಗಳನ್ನು ಹೊಂದಿದೆ: ಆಹಾರ, ಲಸಿಕೆ ಮತ್ತು ನೈರ್ಮಲ್ಯ. ಆರೋಗ್ಯವು ಪೌಷ್ಟಿಕಾಂಶಕ್ಕೆ ನೇರವಾಗಿ ಸಂಬಂಧಿಸಿದೆ. ಪೌಷ್ಟಿಕಾಂಶ ಅಭಿಯಾನಗಳು ಪ್ರತಿಯೊಬ್ಬ ತಾಯಿ ಮತ್ತು ಮಗುವಿಗೆ ಪ್ರಯೋಜನವನ್ನು ನೀಡಿದರೆ, ಅನೇಕ ಜೀವಗಳನ್ನು ಉಳಿಸಬಹುದು. ಈ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ರಾಷ್ಟ್ರೀಯ ಪೋಷಣ್ ಮಿಷನ್ ಅನ್ನು ಪ್ರಾರಂಭಿಸಿತು. ಈ ಮಿಷನ್ ನ ಮಹತ್ವವನ್ನು ಪರಿಗಣಿಸಿ, ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳನ್ನು ಪೌಷ್ಟಿಕಾಂಶಕ್ಕೆ ಮೀಸಲಿಡಲಾಗುತ್ತದೆ."

ಗುಲಾಮಗಿರಿಯ ದೀರ್ಘ ಅವಧಿಯಿಂದಾಗಿ, ಸಂಪನ್ಮೂಲಗಳು ವಿರಳವಾಗಿದ್ದವು, ಬಡತನವು ಅತಿಯಾಗಿತ್ತು ಮತ್ತು ಜನರು ಜೀವನ ಸಾಗಿಸಲು ಹೆಣಗಾಡುತ್ತಿದ್ದರು. ಇದು ಮಕ್ಕಳ ಮೇಲೆ ಹೆಚ್ಚು

## ಬಲವಾದ ಬೇರುಗಳು

### ಪೂರ್ವ ಪ್ರಾಥಮಿಕ ದಾಖಲಾತಿಯಲ್ಲಿ ನಿರಂತರ ಹೆಚ್ಚಳ



- 6 ರಿಂದ 14 ವರ್ಷ ವಯಸ್ಸಿನ ಮಕ್ಕಳ ದಾಖಲಾತಿ 20 ವರ್ಷಗಳಲ್ಲಿಯೇ ಗರಿಷ್ಠ ಮಟ್ಟವನ್ನು ತಲುಪಿದ್ದು 2024 ರಲ್ಲಿ ಶೇ.98.1 ರಷ್ಟಿತ್ತು.

**3 ರಿಂದ 5**

ವರ್ಷ ವಯಸ್ಸಿನ ಮಕ್ಕಳ ಶಾಲಾ ಪೂರ್ವ ದಾಖಲಾತಿ ಸುಧಾರಿಸಿದ್ದು, ಈಗ ಶೇಕಡಾ 70 ಮೀರಿದೆ. ಇದು ಬಾಲ್ಯದ ಶಿಕ್ಷಣವು ಒಂದಲ್ಲ ಒಂದು ರೂಪದಲ್ಲಿ ಎಲ್ಲಾ ಮಕ್ಕಳಿಗೆ ಲಭ್ಯವಾಗುವಂತೆ ಮಾಡುತ್ತದೆ.

### ಪಿಎಂ ಶ್ರೀ ಶಾಲೆಗಳು

**13,076** ಶಾಲೆಗಳನ್ನು ದೇಶಾದ್ಯಂತ ಪಿಎಂ ಶ್ರೀ ಯೋಜನೆಯಡಿ ಆಯ್ಕೆ ಮಾಡಲಾಗಿದೆ.

ಪಿಎಂ ಶ್ರೀ ಶಾಲೆಗಳು ಸ್ಮಾರ್ಟ್ ತರಗತಿ ಕೊಠಡಿಗಳು, ಗ್ರಂಥಾಲಯಗಳು, ಇಂಟರ್ನೆಟ್ ಲಭ್ಯತೆ, ವೃತ್ತಿಪರ ಕೌಶಲ್ಯ ಶಿಕ್ಷಣ, ಸಂಪೂರ್ಣ ಸುಸಜ್ಜಿತ ವಿಜ್ಞಾನ ಪ್ರಯೋಗಾಲಯಗಳು, ಆಟದ ಮೈದಾನಗಳು, ಶಾಲಾ ನಾವೀನ್ಯತೆ ಮಂಡಳಿಗಳು, ಮಿಷನ್ ಲೈಫ್ ಗಾಗಿ ಯುವ ಮತ್ತು ಪರಿಸರ ಕ್ಲಬ್ ಗಳು, ಪ್ರಾಥಮಿಕ ಶಾಲಾ ಮಕ್ಕಳಿಗೆ BALA (ಕಲಿಕಾ ಸಾಧನಗಳಾಗಿ ಕಟ್ಟಡಗಳು) ಸೌಲಭ್ಯಗಳು, ಮ್ಯಾಜಿಕ್ ಬಾಕ್ಸ್, ವಿದ್ಯಾರ್ಥಿಗಳಿಗೆ 10 ಬ್ಯಾಗ್ ಲೆಸ್ ದಿನಗಳು, ಹಾಜರಾತಿ ಮೇಲ್ವಿಚಾರಣೆಗಾಗಿ ಮಕ್ಕಳ ಟ್ರ್ಯಾಕಿಂಗ್ ಸಾಫ್ಟ್ ವೇರ್ ಮತ್ತು ಕೈ ತೊಳೆಯುವ ಸೌಲಭ್ಯಗಳನ್ನು ಹೊಂದಿರುವ ಶೌಚಾಲಯಗಳನ್ನು ಹೊಂದಿವೆ.

### ಭಾರತದ ಮೊದಲ ಸಂಕೇತ ಭಾಷೆ

- ಕೇಂದ್ರ ಸರ್ಕಾರವು ಮೊದಲ ಬಾರಿಗೆ ಭಾರತೀಯ ಸಂಕೇತ ಭಾಷೆ (ಐ ಎಸ್ ಎಲ್) ಅನ್ನು ಸಂಯೋಜಿಸಲು ಕೆಲಸ ಮಾಡುತ್ತಿದೆ.ಎನ್ ಸಿ ಇ ಆರ್ ಟಿ 1 ರಿಂದ 7 ನೇ ತರಗತಿಗಳ ಪಠ್ಯಪುಸ್ತಕಗಳನ್ನು 1 ರಿಂದ 12 ನೇ ತರಗತಿಗಳ ಬೋಧನಾ ಸಾಮಗ್ರಿಗಳ ಭಾಗವಾಗಿ ಐ ಎಸ್ ಎಲ್ ಗೆ ಪರಿವರ್ತಿಸಿದೆ.





# ರಾಷ್ಟ್ರೀಯ ಶಿಕ್ಷಣ ನೀತಿ 2020 ಅಮೃತ ಪೀಳಿಗೆಯನ್ನು ಸಿದ್ಧಪಡಿಸುತ್ತದೆ

- ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗಾಗಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್ ಇ ಪಿ) 2020 ಅನ್ನು ಬಿಡುಗಡೆ ಮಾಡಲಾಯಿತು.
- ಎನ್ ಇ ಪಿ 2020 ರ ಅಡಿಯಲ್ಲಿ, ಭಾರತದಲ್ಲಿ ಮೊದಲ ಬಾರಿಗೆ 3 ರಿಂದ 8 ವರ್ಷ ವಯಸ್ಸಿನ ಮಕ್ಕಳಿಗಾಗಿ ಸಮಗ್ರ ಪಠ್ಯಕ್ರಮದ ಚೌಕಟ್ಟನ್ನು ಅಭಿವೃದ್ಧಿಪಡಿಸಲಾಯಿತು.
- ಶಾಲಾ ಶಿಕ್ಷಣದ ಪಠ್ಯಕ್ರಮ ಮತ್ತು ಶಿಕ್ಷಣ ರಚನೆಯು (5+3+3+4) 5 ವರ್ಷಗಳ ಮೂಲಭೂತ ಹಂತವನ್ನು ಒಳಗೊಂಡಿದೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಿಗೆ ತಲಾ ಮೂರು ವರ್ಷಗಳು ಮತ್ತು ಮಾಧ್ಯಮಿಕ ಹಂತಕ್ಕೆ ನಾಲ್ಕು ವರ್ಷಗಳು.
- 2030ರ ವೇಳೆಗೆ ಪ್ರಿ-ಸ್ಕೂಲ್ ನಿಂದ ಮಾಧ್ಯಮಿಕ ಹಂತದವರೆಗೆ ಶೇ.100 ದಾಖಲಾತಿ ಅನುಪಾತವನ್ನು ಸಾಧಿಸುವ ಗುರಿಯನ್ನು ಎನ್ ಇ ಪಿ 2020 ಹೊಂದಿದೆ.
- ಎನ್ ಇ ಪಿ 2020ರ ಉದ್ದೇಶಗಳನ್ನು ಸಾಧಿಸಲು, ಅಸ್ತಿತ್ವದಲ್ಲಿರುವ ಸಮಗ್ರ ಶಿಕ್ಷಣ ಯೋಜನೆಯನ್ನು ಪರಿಷ್ಕರಿಸಲಾಗಿದೆ ಮತ್ತು ಕೌಶಲ್ಯ ಶಿಕ್ಷಣಕ್ಕೆ ಸಂಬಂಧಿಸಿದ ಹೊಸ ಉಪಕ್ರಮಗಳನ್ನು ಸೇರಿಸಲಾಗಿದೆ.
- 6 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣವನ್ನು ಪರಿಚಯಿಸಲಾಗಿದೆ.
- ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು 6ನೇ ತರಗತಿಯಿಂದ 15 ಗಂಟೆಗಳ ಕೌಶಲ್ಯ ಮಾಡ್ಯೂಲ್ ಆಗಿ ಕೃತಕ ಬುದ್ಧಿಮತ್ತೆ ಕೌಶಲ್ಯಗಳನ್ನು ನೀಡುತ್ತದೆ.
- ಹಬ್ ಮತ್ತು ಸ್ಪೋಕ್ ಮಾದರಿಯನ್ನು ಪರಿಚಯಿಸಲಾಗಿದ್ದು, ಇದರಲ್ಲಿ ಹತ್ತಿರದ ಶಾಲೆಗಳ ವಿದ್ಯಾರ್ಥಿಗಳು ಹಬ್ ಶಾಲೆಗಳಲ್ಲಿ ಲಭ್ಯವಿರುವ ಮೂಲಸೌಕರ್ಯಗಳನ್ನು ಬಳಸಿಕೊಳ್ಳುತ್ತಾರೆ.
- ಎನ್ ಇ ಪಿ 2020, 6 ರಿಂದ 8 ನೇ ತರಗತಿಯವರೆಗೆ 10 ದಿನಗಳ ಬ್ಯಾಗ್ ಲೆಸ್ ಅವಧಿಯನ್ನು ಶಿಫಾರಸು ಮಾಡುತ್ತದೆ, ಇದರಲ್ಲಿ ವಿದ್ಯಾರ್ಥಿಗಳು ಬಡಗಿಗಳು, ತೋಟಗಾರರು, ಕುಂಬಾರರು, ಕಲಾವಿದರು ಇತ್ಯಾದಿಗಳೊಂದಿಗೆ ಇಂಟರ್ನ್ ಶಿಪ್ ಮಾಡುತ್ತಾರೆ.

ಪರಿಣಾಮ ಬೀರಿತು. ಈಗ, ನವ ಭಾರತದಲ್ಲಿ, ಪೋಷಣ್ ಅಭಿಯಾನದಂತಹ ಕಾರ್ಯಕ್ರಮಗಳು ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಪಡೆಯುವುದನ್ನು ಖಚಿತಪಡಿಸುತ್ತಿವೆ. ಬಲವಾದ ಕಟ್ಟಡಕ್ಕೆ ಬಲವಾದ ಅಡಿಪಾಯ ಅತ್ಯಗತ್ಯವಾದಂತೆಯೇ, ಶಕ್ತಿಯುತ ನವ ಭಾರತಕ್ಕೆ ಪೌಷ್ಟಿಕ ಮತ್ತು ಆರೋಗ್ಯಕರ ಬಾಲ್ಯವು ಅತ್ಯಗತ್ಯ ಎಂದು ಪ್ರಧಾನಿ ನರೇಂದ್ರ ಮೋದಿ ನಂಬುತ್ತಾರೆ.

ಒಂದು ದೇಶದಲ್ಲಿ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದರೆ, ಅವರ ಬೆಳವಣಿಗೆ ನಿಧಾನವಾಗುತ್ತದೆ. ಜನನದ ಮೊದಲು ಮತ್ತು ನಂತರ ಮಕ್ಕಳ ಆಹಾರಕ್ರಮದ ಬಗ್ಗೆ ಗಮನ ಹರಿಸಿದರೆ ಮತ್ತು ರೋಗದ ವಿರುದ್ಧ ಹೋರಾಡುವ ಅವರ ಸಾಮರ್ಥ್ಯ ಹೆಚ್ಚಾದರೆ, ಭವಿಷ್ಯದ ಆರೋಗ್ಯ ಸಮಸ್ಯೆಗಳು ಕಡಿಮೆಯಾಗುತ್ತವೆ.

ಹಿಂದೆಲ್ಲಾ ಪೋಷಣೆ, ನೈರ್ಮಲ್ಯ ಮತ್ತು ಲಸಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿರಲಿಲ್ಲ. ಸ್ವಾತಂತ್ರ್ಯದ ನಂತರ ಈ ಸಮಸ್ಯೆಗಳನ್ನು ಪರಿಹರಿಸಲು ಹಲವಾರು ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು, ಆದರೆ ಅವು ಹೆಚ್ಚಿನ ಯಶಸ್ಸನ್ನು



- ಇ-ಸಮಗ್ರ ಶಿಕ್ಷಾ ಅಭಿಯಾನದ ಐಸಿಟಿ ಮತ್ತು ಡಿಜಿಟಲ್ ಉಪಕ್ರಮದಡಿಯಲ್ಲಿ, 6 ರಿಂದ 12 ನೇ ತರಗತಿಯವರೆಗಿನ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಹಭಾಗಿತ್ವದಲ್ಲಿ ಐಸಿಟಿ ಪ್ರಯೋಗಾಲಯಗಳು ಮತ್ತು ಸ್ಮಾರ್ಟ್ ತರಗತಿ ಕೊಠಡಿಗಳನ್ನು ಸ್ಥಾಪಿಸಲಾಗುತ್ತಿದೆ.
- ಮಾತೃಭಾಷೆ: ಭಾರತ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಾಧ್ಯವಾದಷ್ಟು, ಕನಿಷ್ಠ 5 ರಿಂದ 8 ನೇ ತರಗತಿಯವರೆಗೆ ಬೋಧನಾ ಮಾಧ್ಯಮವು ಮನೆಭಾಷೆ/ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿರಬೇಕೆಂದು ಹೇಳಿದೆ.
- ಏಕ್ ಭಾರತ್ ಶ್ರೇಷ್ಠ ಭಾರತ್ ಅಡಿಯಲ್ಲಿ ಭಾಷಾ ಸಂಗಮ: ಎಲ್ಲಾ ಭಾರತೀಯ ಭಾಷೆಗಳನ್ನು ಉತ್ತೇಜಿಸಲು ಭಾಷಾ ಸಂಗಮ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದಲ್ಲಿ, ಶಾಲಾ ಮಕ್ಕಳು ಆಡಿಯೋ ಮತ್ತು ವಿಡಿಯೋ ಸಹಾಯದಿಂದ 22 ಷೆಡ್ಯೂಲ್ಡ್ ಭಾಷೆಗಳಲ್ಲಿ 100 ವಾಕ್ಯಗಳನ್ನು ಕಲಿಯುತ್ತಾರೆ.
- ಸಮಗ್ರ ಶಿಕ್ಷಾ ಯೋಜನೆ 2.0 ಅನ್ನು ರಾಷ್ಟ್ರೀಯ ಶಿಕ್ಷಣ ನೀತಿ 2020ಕ್ಕೆ ಅನುಗುಣವಾಗಿ ಪುನರ್ ವಿನ್ಯಾಸಗೊಳಿಸಲಾಗಿದ್ದು, 2025-26 ರವರೆಗೆ ಕಾರ್ಯನಿರ್ವಹಿಸಲಿದೆ.

**404**

Books have been digitized by the Ministry of Education. It includes new textbooks that start from the basic level. Textbooks for all subjects in grades 1, 2, 3, and 6 have also been translated into 22 scheduled languages.

## ಶಾಲೆಗಳಲ್ಲಿ ಮೂಲಸೌಕರ್ಯ

ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ ಪ್ಲಸ್ (UDISE+) ಪ್ರಕಾರ, ದೇಶಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯಗಳ ಮಟ್ಟವು ವೇಗವಾಗಿ ಸುಧಾರಿಸಿದೆ. 2023-24ರ ಹಣಕಾಸು ವರ್ಷದ ವರದಿಯ ಪ್ರಕಾರ, ಶೇ. 97.1 ರಷ್ಟು ಶಾಲೆಗಳು ಬಾಲಕಿಯರ ಶೌಚಾಲಯಗಳನ್ನು ಹೊಂದಿವೆ, ಶೇ. 94.8 ರಷ್ಟು ಬಾಲಕರ ಶೌಚಾಲಯಗಳನ್ನು ಹೊಂದಿವೆ, ಶೇ. 98.4 ರಷ್ಟು ಕುಡಿಯುವ ನೀರನ್ನು ಹೊಂದಿವೆ, ಶೇ. 92.4 ರಷ್ಟು ವಿದ್ಯುತ್ ಸಂಪರ್ಕಗಳನ್ನು ಹೊಂದಿವೆ, ಶೇ. 64.9 ರಷ್ಟು ಕಾಂಪೌಂಡ್ ಗಳನ್ನು ಹೊಂದಿವೆ ಮತ್ತು ಶೇ. 46.2 ರಷ್ಟು ಶಾಲೆಗಳು ಇಂಟರ್ನೆಟ್ ಸಂಪರ್ಕಗಳನ್ನು ಹೊಂದಿವೆ.

**ಶೇ. 92.4 ರಷ್ಟು**

ವಿದ್ಯುತ್ ಸಂಪರ್ಕಗಳನ್ನು ಹೊಂದಿವೆ

**ಶೇ. 46.2 ರಷ್ಟು**

ಇಂಟರ್ನೆಟ್ ಸಂಪರ್ಕಗಳನ್ನು ಹೊಂದಿವೆ

ಹೆಚ್ಚುವರಿಯಾಗಿ, ಸಮಗ್ರ ಶಿಕ್ಷಾ ಅಭಿಯಾನದ ಅಡಿಯಲ್ಲಿ, ಕೇಂದ್ರ ಸರ್ಕಾರವು

**₹1,85,755**

ಕೋಟಿ ಅನುಮೋದಿತ ವೆಚ್ಚದಲ್ಲಿ 7,297 ಶಾಲಾ ಕಟ್ಟಡಗಳ ಮೇಲ್ದರ್ಜೆ ಮತ್ತು ಸುಧಾರಣೆಗೆ ಅನುಮೋದನೆ ನೀಡಿದೆ.



ಗಳಿಸಲಿಲ್ಲ. ಸೀಮಿತ ಸಂಪನ್ಮೂಲಗಳನ್ನು ಹೊಂದಿರುವ ಸಣ್ಣ ದೇಶಗಳು ಸಹ ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದವು. ಈ ಪರಿಸ್ಥಿತಿಯನ್ನು ನಿವಾರಿಸಲು, ಕೇಂದ್ರ ಸರ್ಕಾರವು 2014 ರಲ್ಲಿ ಪ್ರಯತ್ನಗಳನ್ನು ಪುನರುಜ್ಜೀವನಗೊಳಿಸಿತು.

404 ಪುಸ್ತಕಗಳನ್ನು ಶಿಕ್ಷಣ ಸಚಿವಾಲಯವು ಡಿಜಿಟಲೀಕರಣಗೊಳಿಸಿದೆ. ಇದರಲ್ಲಿ ಮೂಲ ಹಂತದಿಂದ ಪ್ರಾರಂಭವಾಗುವ ಹೊಸ ಪಠ್ಯಪುಸ್ತಕಗಳು ಸೇರಿವೆ. 1, 2, 3 ಮತ್ತು 6ನೇ ತರಗತಿಗಳ ಎಲ್ಲಾ ವಿಷಯಗಳ ಪಠ್ಯಪುಸ್ತಕಗಳನ್ನು 22 ಷೆಡ್ಯೂಲ್ಡ್ ಭಾಷೆಗಳಿಗೆ ಅನುವಾದಿಸಲಾಗಿದೆ. ಲಸಿಕೆ ಅಭಿಯಾನವನ್ನು ಒಂದು ಮಿಷನ್ ಮೋಡ್ ನಲ್ಲಿ ಜಾರಿಗೆ ತರಲು ಅದು ನಿರ್ಧರಿಸಿತು. ದೇಶದ ಪ್ರತಿಯೊಂದು ಮಗುವನ್ನು ತಲುಪುವ ಗುರಿಯನ್ನು ಮಿಷನ್ ಇಂದ್ರಧನುಷ್ ಹೊಂದಿದೆ. ಲಸಿಕೆ ಅಭಿಯಾನವನ್ನು ವೇಗಗೊಳಿಸಿರುವುದು ಮಾತ್ರವಲ್ಲದೆ, ನೀಡಲಾಗುವ ಲಸಿಕೆಗಳ ಸಂಖ್ಯೆಯನ್ನು ಸಹ ಹೆಚ್ಚಿಸಲಾಗಿದೆ. ಈಗ, ಒಟ್ಟು 12 ರೋಗಗಳ ವಿರುದ್ಧ

> **“ಬೊಜ್ಜು ನಮ್ಮ ದೇಶಕ್ಕೆ ಅತ್ಯಂತ ಗಂಭೀರ ಸಮಸ್ಯೆಯಾಗುತ್ತಿದೆ. ಮುಂಬರುವ ವರ್ಷಗಳಲ್ಲಿ, ಪ್ರತಿ ಮೂರು ಜನರಲ್ಲಿ ಒಬ್ಬರು ಬೊಜ್ಜಿನಿಂದ ಬಳಲುತ್ತಾರೆ. ನಾವು ಬೊಜ್ಜಿನಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ಆದ್ದರಿಂದ, ನಾನು ನಿಮಗೆ ಒಂದು ಸಣ್ಣ ಸಲಹೆಯನ್ನು ನೀಡಲು ಬಯಸುತ್ತೇನೆ: ಅಡುಗೆ ಮಾಡುವಾಗ ಶೇ.10 ರಷ್ಟು ಕಡಿಮೆ ಎಣ್ಣೆಯನ್ನು ಬಳಸಿ.**
>
> **ನರೇಂದ್ರ ಮೋದಿ,** ಪ್ರಧಾನಮಂತ್ರಿ

ಲಸಿಕೆಗಳನ್ನು ನೀಡಲಾಗುತ್ತಿದೆ. ಇದಕ್ಕಾಗಿಯೇ ಭಾರತದ ಪ್ರಯತ್ನಗಳು, ವಿಶೇಷವಾಗಿ ಮಿಷನ್ ಇಂದ್ರಧನುಷ್, ಪ್ರಪಂಚದಾದ್ಯಂತ ಪ್ರಶಂಸಿಸಲ್ಪಡುತ್ತಿವೆ. ಒಂದು ಪ್ರಸಿದ್ಧ ವೈದ್ಯಕೀಯ ನಿಯತಕಾಲಿಕವು ಈ ಕಾರ್ಯಕ್ರಮವನ್ನು ವಿಶ್ವದ 12 ಅತ್ಯುತ್ತಮ ಅಭ್ಯಾಸಗಳಲ್ಲಿ ಒಂದಾಗಿ ಆಯ್ಕೆ ಮಾಡಿದೆ. ಅದು ಮಿಷನ್ ಇಂದ್ರಧನುಷ್ ಆಗಿರಲಿ ಅಥವಾ ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನವಾಗಲಿ, ಗರ್ಭಾವಸ್ಥೆಯಲ್ಲಿ ಆರೋಗ್ಯಕರ ಆಹಾರಕ್ಕಾಗಿ ನೀಡಲಾಗುವ ಆರು ಸಾವಿರ ರೂಪಾಯಿಗಳ ಸಹಾಯವು ಗರ್ಭಿಣಿಯರಿಗೆ ಮಾತ್ರವಲ್ಲದೆ ಹುಟ್ಟಲಿರುವ ಮಗುವಿಗೂ ಪೌಷ್ಟಿಕಾಂಶವನ್ನು ಒದಗಿಸುತ್ತಿದೆ.

ಮಕ್ಕಳ ಸುರಕ್ಷತೆಯಲ್ಲಿ ನೈರ್ಮಲ್ಯವು ಒಂದು ನಿರ್ಣಾಯಕ ಅಂಶವಾಗಿದೆ. ನೈರ್ಮಲ್ಯವಿಲ್ಲದ ಪರಿಸ್ಥಿತಿಗಳು ಮಕ್ಕಳಿಗೆ ವಿಶೇಷವಾಗಿ ಹಾನಿಕಾರಕ. ಐದು ವರ್ಷದೊಳಗಿನ ಮಕ್ಕಳಲ್ಲಿ ಅತಿಸಾರದ ಅಪಾಯ ಹೆಚ್ಚು. ಸ್ವಚ್ಛ ಭಾರತ ಮಿಷನ್ ಈ ಸಮಸ್ಯೆಯನ್ನು ನಿವಾರಿಸಿದೆ. ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮವೊಂದೇ ಸುಮಾರು 300,000 ಜೀವಗಳನ್ನು ಉಳಿಸಬಲ್ಲದು ಎಂದು ಅಂತರರಾಷ್ಟ್ರೀಯ ವರದಿಯೊಂದು ಹೇಳುತ್ತದೆ. ಇದು ನೈರ್ಮಲ್ಯದ ಶಕ್ತಿಯಾಗಿದ್ದು, ಇದು ಬಡವರಿಗೆ ಯಾವುದೇ ವೆಚ್ಚವಿಲ್ಲದೆ ಜೀವನವನ್ನು ನೀಡುತ್ತಿದೆ.

ಆರೋಗ್ಯವಂತ ಮಗು ಆರೋಗ್ಯಕರ ರಾಷ್ಟ್ರವನ್ನು ನಿರ್ಮಿಸುತ್ತದೆ. ಈ ದೃಷ್ಟಿಕೋನವನ್ನು ಸಾಕಾರಗೊಳಿಸಲು, ಕೇಂದ್ರ ಸರ್ಕಾರವು ರಾಷ್ಟ್ರೀಯ ಪೋಷಣ್ ಮಿಷನ್ ಅನ್ನು ಮಿಷನ್ ಮೋಡ್ ನಲ್ಲಿ ಪ್ರಾರಂಭಿಸಿದೆ. ಹೆಚ್ಚುವರಿಯಾಗಿ, ಆಯುಷ್ಮಾನ್ ಭಾರತ್ ಯೋಜನೆಯು ಲಕ್ಷಾಂತರ ಕುಟುಂಬಗಳಿಗೆ ಆರೋಗ್ಯ ಭದ್ರತೆಯನ್ನು ಒದಗಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಬಲಪಡಿಸುವುದು ಮಕ್ಕಳ ಪೋಷಣೆ ಮತ್ತು ಆರಂಭಿಕ ಶಿಕ್ಷಣದ ನಡುವೆ ಸಂಪರ್ಕವನ್ನು ಸ್ಥಾಪಿಸಿದೆ. ಕೇಂದ್ರ ಸರ್ಕಾರದ ದೃಷ್ಟಿಕೋನವು ಸ್ಪಷ್ಟವಾಗಿದೆ: ಮಕ್ಕಳು ಆರೋಗ್ಯವಾಗಿದ್ದಾಗ ಮಾತ್ರ ಅವರು ಕಲಿಯುತ್ತಾರೆ, ಯೋಚಿಸುತ್ತಾರೆ ಮತ್ತು ಪ್ರಗತಿ ಹೊಂದುತ್ತಾರೆ. ಭಾರತದ ಅಭಿವೃದ್ಧಿ ಪ್ರಯಾಣದಲ್ಲಿ ಹೆಣ್ಣುಮಕ್ಕಳು ಸಮಾನವಾಗಿ ಭಾಗವಹಿಸುವಂತೆ ಪ್ರಧಾನಮಂತ್ರಿ ಮೋದಿ ಖಚಿತಪಡಿಸಿದ್ದಾರೆ. ಈ ನಿಟ್ಟಿನಲ್ಲಿ, ಬೇಟಿ ಬಚಾವೋ ಬೇಟಿ ಪಡಾವೋ ಅಭಿಯಾನವನ್ನು ಪ್ರಾರಂಭಿಸಲಾಯಿತು. ಈ ಯೋಜನೆಯು ಲಿಂಗ ಅನುಪಾತವನ್ನು ಸುಧಾರಿಸುವುದಲ್ಲದೆ, ಸಮಾಜದ ಮನಸ್ಥಿತಿಯಲ್ಲಿ ತೀವ್ರ ಬದಲಾವಣೆಯನ್ನು ತಂದಿತು. ಇಂದು, ದೇಶದ ಹೆಣ್ಣುಮಕ್ಕಳು ವಿಜ್ಞಾನ, ಕ್ರೀಡೆ, ಮಿಲಿಟರಿ ಮತ್ತು ಬಾಹ್ಯಾಕಾಶ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಶ್ರೇಷ್ಠತೆ ಸಾಧಿಸುತ್ತಿದ್ದಾರೆ.

**ಡಿಜಿಟಲ್ ಇಂಡಿಯಾ - ಭವಿಷ್ಯದ ತಂತ್ರಜ್ಞಾನಕ್ಕೆ ಮಕ್ಕಳನ್ನು ಸಂಪರ್ಕಿಸುವುದು**

## ಅಟಲ್ ಇನ್ನೋವೇಶನ್ ಮಿಷನ್ ಶಾಲಾ ಮಟ್ಟದಲ್ಲಿ ನಾವೀನ್ಯತೆಯ ಉತ್ತೇಜನ

**ದೇಶದಲ್ಲಿ ನಾವೀನ್ಯತೆ ಮತ್ತು ಉದ್ಯಮಶೀಲತೆಯ ಸಂಸ್ಕೃತಿಯನ್ನು ಬೆಳೆಸುವ ಗುರಿಯೊಂದಿಗೆ 2016 ರಲ್ಲಿ ಅಟಲ್ ಇನ್ನೋವೇಶನ್ ಮಿಷನ್ ಅನ್ನು ಪ್ರಾರಂಭಿಸಲಾಯಿತು. ಅಂದಿನಿಂದ, ದೇಶಾದ್ಯಂತ 10,000 ಅಟಲ್ ಟಿಂಕರಿಂಗ್ ಲ್ಯಾಬ್ ಗಳನ್ನು ಶಾಲೆಗಳಲ್ಲಿ ಸ್ಥಾಪಿಸಲಾಗಿದೆ. ಇವು ನಾವೀನ್ಯತೆ ಬಗ್ಗೆ ಮಕ್ಕಳ ಕುತೂಹಲವನ್ನು ಬೆಳೆಸುತ್ತವೆ ಮತ್ತು ಹೊಸ ಆವಿಷ್ಕಾರಗಳಿಗೆ ಪ್ರೇರಣೆ ನೀಡುತ್ತವೆ...**

- ಆಗಸ್ಟ್ 12, 2025 ರಂದು, ಅಟಲ್ ಇನ್ನೋವೇಶನ್ ಮಿಷನ್ (ನೀತಿ ಆಯೋಗ) "ಮೆಗಾ ಟಿಂಕರಿಂಗ್ ಡೇ" ಅನ್ನು ಆಯೋಜಿಸಿತು, ಇದರಲ್ಲಿ 9,467 ಅಟಲ್ ಟಿಂಕರಿಂಗ್ ಲ್ಯಾಬ್ (ಎಟಿಎಲ್) ಶಾಲೆಗಳ 473,350 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ವಚ್ಛ ಭಾರತ ಅಭಿಯಾನದ ಭಾಗವಾಗಿ ವಿದ್ಯಾರ್ಥಿಗಳು ಡಿಐವೈ ವ್ಯಾಕ್ಯೂಮ್ ಕ್ಲೀನರ್ ಗಳನ್ನು ರಚಿಸಿದರು, ಇದು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಮತ್ತು ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿತು.

**10,000**
ಟಿಂಕರಿಂಗ್ ಲ್ಯಾಬ್ ಗಳು 1.10 ಕೋಟಿ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಹೊಂದಿವೆ.

**50,000**
ಅಟಲ್ ಟಿಂಕರಿಂಗ್ ಲ್ಯಾಬ್ ಗಳನ್ನು ಮುಂದಿನ ಐದು ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಸ್ಥಾಪಿಸಲು 2025–26ರ ಕೇಂದ್ರ ಬಜೆಟ್ ನಲ್ಲಿ ಘೋಷಿಸಲಾಗಿದೆ.





## ಪ್ರತಿ ಹಂತಕ್ಕೂ ಒಂದು ವಿಶಿಷ್ಟ ಉಪಕ್ರಮ

**ಬಾಲ ವಾಟಿಕಾ**

1ನೇ ತರಗತಿಗೆ ಪ್ರವೇಶಿಸುವ ಮಕ್ಕಳಿಗಾಗಿ ಪೂರ್ವಸಿದ್ಧತಾ ತರಗತಿ. ಸರಿಸುಮಾರು 600,000 ಶಾಲೆಗಳು ಬಾಲ ವಾಟಿಕಾವನ್ನು ಹೊಂದಿವೆ.

**ವಿದ್ಯಾ ಪ್ರವೇಶ**

ಮೂರು ತಿಂಗಳ ಆಟ ಆಧಾರಿತ ಶಾಲಾ ತಯಾರಿ ಮಾಡ್ಯೂಲ್. ಈ 12 ವಾರಗಳ ಕಾರ್ಯಕ್ರಮವು ವಾರ್ಷಿಕ ಕ್ಯಾಲೆಂಡರ್ ನ ಕಡ್ಡಾಯ ಭಾಗವಾಗಿದೆ. 2024-25ನೇ ಶೈಕ್ಷಣಿಕ ವರ್ಷದಲ್ಲಿ, 8.94 ಲಕ್ಷ ಶಾಲೆಗಳ 1 ಕೋಟಿ ವಿದ್ಯಾರ್ಥಿಗಳು ವಿದ್ಯಾ ಪ್ರವೇಶ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ನಿಪುಣ್ ಭಾರತ್**

ಮಕ್ಕಳು 2 ನೇ ತರಗತಿಯ ಅಂತ್ಯದ ವೇಳೆಗೆ ಅಗತ್ಯವಾದ ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರವನ್ನು ಸಾಧಿಸುವುದನ್ನು ಖಚಿತಪಡಿಸಿಕೊಳ್ಳಲು ಓದುವಿಕೆ ಮತ್ತು ಸಂಖ್ಯಾಶಾಸ್ತ್ರದಲ್ಲಿ ಗ್ರಹಿಕೆಯೊಂದಿಗೆ ರಾಷ್ಟ್ರೀಯ ಪ್ರಾವೀಣ್ಯತೆ ಉಪಕ್ರಮ (ನಿಪುಣ್ ಭಾರತ್) ಅನ್ನು ಜುಲೈ 5, 2021 ರಂದು ಪ್ರಾರಂಭಿಸಲಾಯಿತು. ಇದರಲ್ಲಿ ಮೂರು ವರ್ಷಗಳ ಬಾಲ ವಾಟಿಕಾ ಕಾರ್ಯಕ್ರಮ ಮತ್ತು 1 ಮತ್ತು 2 ನೇ ತರಗತಿಗಳು ಸೇರಿವೆ.

**ಪರಾಖ್**

ಸಮಗ್ರ ಅಭಿವೃದ್ಧಿಗಾಗಿ ಜ್ಞಾನ ಕಾರ್ಯಕ್ಷಮತೆಯ ಮೌಲ್ಯಮಾಪನ, ಪರಿಶೀಲನೆ ಮತ್ತು ವಿಶ್ಲೇಷಣೆ ಸಮೀಕ್ಷೆಯನ್ನು ಪ್ರಾರಂಭಿಸಲಾಗಿದೆ. ಇದರ ಅಡಿಯಲ್ಲಿ, 3, 6 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳು ಮೂಲಭೂತ ಸಾಕ್ಷರತೆ, ಮೂಲಭೂತ ಸಂಖ್ಯಾಶಾಸ್ತ್ರ, ಭಾಷೆ ಮತ್ತು ಗಣಿತಶಾಸ್ತ್ರದಲ್ಲಿ ತಮ್ಮ ಸಾಮರ್ಥ್ಯಗಳನ್ನು ನಿರ್ಣಯಿಸುವ ನಿರೀಕ್ಷೆಯಿದೆ.

**ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ**

2018 ರಲ್ಲಿ, ರಾಷ್ಟ್ರೀಯ ಬಾಲ ಪ್ರಶಸ್ತಿಯನ್ನು ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವಾಗಿ ಮರುಸಂಘಟಿಸಲಾಯಿತು. ಈ ಪ್ರಶಸ್ತಿಯನ್ನು 5 ರಿಂದ 18 ವರ್ಷದೊಳಗಿನ ಮಕ್ಕಳಿಗೆ ನೀಡಲಾಗುತ್ತದೆ.

21ನೇ ಶತಮಾನವು ಡಿಜಿಟಲ್ ಯುಗವಾಗಿದ್ದು, ಪ್ರಧಾನಮಂತ್ರಿ ಮೋದಿ ಇದನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಡಿಜಿಟಲ್ ಇಂಡಿಯಾ ಅಭಿಯಾನವು ಭಾರತದ ಮಕ್ಕಳನ್ನು ತಾಂತ್ರಿಕವಾಗಿ ಸಬಲೀಕರಣಗೊಳಿಸುವತ್ತ ಐತಿಹಾಸಿಕ ಹೆಜ್ಜೆಗಳನ್ನು ಇಟ್ಟಿದೆ. ಇಂಟರ್ನೆಟ್ ಈಗ ಹಳ್ಳಿಗಳಲ್ಲಿಯೂ ಲಭ್ಯವಿದೆ ಮತ್ತು ಆನ್ಲೈನ್ ಶಿಕ್ಷಣ ಮತ್ತು ಸ್ಮಾರ್ಟ್ ತರಗತಿ ಕೊಠಡಿಗಳು ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿವೆ. ಈ ಅಭಿಯಾನದ ಪರಿಣಾಮವಾಗಿ ಮಕ್ಕಳು ತಂತ್ರಜ್ಞಾನವನ್ನು ಬಳಸುವುದಲ್ಲದೆ, ನಾವೀನ್ಯಕಾರರಾಗುತ್ತಿದ್ದಾರೆ. ಇಂದು, ದೇಶಾದ್ಯಂತ ಸಣ್ಣ ಪಟ್ಟಣಗಳು ಮತ್ತು ಹಳ್ಳಿಗಳ ಯುವಕರು ಸ್ಟಾರ್ಟ್‌ಅಪ್ ಇಂಡಿಯಾ ಮತ್ತು ಅಟಲ್ ಇನ್ನೋವೇಶನ್ ಮಿಷನ್ ಮೂಲಕ ಜಾಗತಿಕವಾಗಿ ತಮ್ಮ ಛಾಪು ಮೂಡಿಸುತ್ತಿದ್ದಾರೆ.

**ಮಕ್ಕಳಿಗೆ ದೊಡ್ಡ ಸಂರಕ್ಷಕನಾಗಿ ಹೊರಹೊಮ್ಮುತ್ತಿರುವ ಪಿಎಂ ಕೇರ್ಸ್ ಫಂಡ್**

ಜೀವನವು ನಮ್ಮನ್ನು ಅನಿರೀಕ್ಷಿತ ಸನ್ನಿವೇಶಗಳಿಗೆ, ನಾವು ಎಂದಿಗೂ ಊಹಿಸದ ಸನ್ನಿವೇಶಗಳಿಗೆ ದೂಡುತ್ತದೆ. ಇದ್ದಕ್ಕಿದ್ದಂತೆ, ಸಂತೋಷವು ಅನಿರೀಕ್ಷಿತವಾದ ಕತ್ತಲೆಯಿಂದ ಬದಲಾಯಿಸಲ್ಪಡುತ್ತದೆ. ಸಾಂಕ್ರಾಮಿಕ ರೋಗವು ಅನೇಕ ವ್ಯಕ್ತಿಗಳು ಮತ್ತು ಕುಟುಂಬಗಳಿಗೆ ದುಃಖವನ್ನು ತಂದಿತು. ಈ ವಿಪತ್ತಿನಲ್ಲಿ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ, ಪಿಎಂ ಕೇರ್ಸ್ ಮಕ್ಕಳ ನಿಧಿಯು ರಕ್ಷಕನಾಗಿ ಹೊರಹೊಮ್ಮಿದೆ. ಕೋವಿಡ್-19ರಿಂದ ಸಂತ್ರಸ್ತರಾದ ಮಕ್ಕಳ ಕಷ್ಟಗಳನ್ನು ನಿವಾರಿಸುವ ಈ ಪ್ರಯತ್ನವು ಒಂದು ಪ್ರಮುಖ ಸಹಾಯವಾಗಿದೆ ಎಂದು ಸಾಬೀತಾಗಿದೆ. ಮಕ್ಕಳಿಗಾಗಿ ಪಿಎಂ ಕೇರ್ಸ್ ನಿಧಿಯು ದೇಶದ ಪ್ರತಿಯೊಬ್ಬ ನಾಗರಿಕನ ಸೂಕ್ಷ್ಮತೆಯನ್ನು ಪ್ರತಿಬಿಂಬಿಸುತ್ತದೆ. ಬಾಧಿತ ಮಕ್ಕಳನ್ನು ಅವರ ಮನೆಗಳ ಹತ್ತಿರದ ಶಾಲೆಗಳಿಗೆ ದಾಖಲಿಸಲಾಯಿತು. ಮಕ್ಕಳಿಗಾಗಿ ಪಿಎಂ ಕೇರ್ಸ್ ನಿಧಿಯು ಅವರ ನೋಟ್ ಬುಕ್, ಪುಸ್ತಕಗಳು ಮತ್ತು ಸಮವಸ್ತ್ರಗಳ ವೆಚ್ಚವನ್ನು ಭರಿಸಲು ಸಹಾಯ ಮಾಡುತ್ತದೆ. ಇತರ ದೈನಂದಿನ ಅಗತ್ಯಗಳಿಗಾಗಿ ಇತರ ಕಾರ್ಯಕ್ರಮಗಳ ಮೂಲಕ ಅವರಿಗೆ ₹4,000 ಮಾಸಿಕ ಭತ್ಯೆಯನ್ನು ಸಹ ಒದಗಿಸಲಾಗಿದೆ. ಈ ಮಕ್ಕಳು ತಮ್ಮ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದಾಗ, ಅವರ ಭವಿಷ್ಯದ ಕನಸುಗಳನ್ನು ನನಸಾಗಿಸಲು ಅವರಿಗೆ ಹೆಚ್ಚಿನ ಹಣದ ಅಗತ್ಯವಿರುತ್ತದೆ. ಈ ಉದ್ದೇಶಕ್ಕಾಗಿ, 18 ರಿಂದ 23 ವರ್ಷದೊಳಗಿನ ಯುವಕರು ಮಾಸಿಕ ಭತ್ಯೆಯನ್ನು ಪಡೆಯುತ್ತಾರೆ. 23 ವರ್ಷ ತಲುಪಿದ ನಂತರ, ಅವರು ₹10 ಲಕ್ಷ ಪಡೆಯುತ್ತಾರೆ. ಈ ಮಕ್ಕಳು ಆರೋಗ್ಯ ಸಮಸ್ಯೆಗಳಿಗೆ

> **“ಜೀವನದಲ್ಲಿ ಯಾವುದೇ ಸವಾಲುಗಳಿಲ್ಲದಿದ್ದರೆ, ಸ್ಪರ್ಧೆ ಇಲ್ಲದಿದ್ದರೆ, ಜೀವನವು ತುಂಬಾ ನೀರಸ ಮತ್ತು ನಿರ್ಜೀವವಾಗುತ್ತದೆ. ಸ್ಪರ್ಧೆ ಇರಬೇಕು, ಆದರೆ ಅದು ಆರೋಗ್ಯಕರ ಸ್ಪರ್ಧೆಯಾಗಿರಬೇಕು.**
>
> **ನರೇಂದ್ರ ಮೋದಿ,**
> **ಪ್ರಧಾನ ಮಂತ್ರಿ**

## ಹೊಸ ಉಪಕ್ರಮಗಳು

### ಪರೀಕ್ಷಾ ಪೇ ಚರ್ಚಾ (ಪಿಪಿಸಿ)
ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರೊಂದಿಗೆ ನಡೆಸುವ ಸಂವಾದ ಕಾರ್ಯಕ್ರಮವು ಫೆಬ್ರವರಿ 16, 2018 ರಂದು ಪ್ರಾರಂಭವಾಯಿತು. ಮೊದಲ ಪಿಪಿಸಿಯಲ್ಲಿ 22,000 ಮಂದಿ ಭಾಗವಹಿಸಿದ್ದರೆ, ಫೆಬ್ರವರಿ 10, 2025 ರಂದು ನಡೆದ 8ನೇ ಪಿಪಿಸಿಯಲ್ಲಿ ಭಾಗವಹಿಸಿದವರ ಸಂಖ್ಯೆ 5.11 ಕೋಟಿಗೆ ಏರಿತು.

### ಅಡುಗೆ ಎಣ್ಣೆಯಲ್ಲಿ ಶೇ.10 ರಷ್ಟು ಕಡಿಮೆ ಮಾಡುವುದು
"ಮನ್ ಕಿ ಬಾತ್"ನ 119ನೇ ಸಂಚಿಕೆಯಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಕ್ಕಳಲ್ಲಿ ಬೊಜ್ಜು ನಾಲ್ಕು ಪಟ್ಟು ಹೆಚ್ಚಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು ಮತ್ತು ಅದನ್ನು ಪರಿಹರಿಸಲು ಕ್ರಮಗಳನ್ನು ಸೂಚಿಸಿದರು. ಅಡುಗೆ ಎಣ್ಣೆ ಬಳಕೆಯನ್ನು ಶೇ. 10 ರಷ್ಟು ಕಡಿಮೆ ಮಾಡಲು ಸಹ ಅವರು ಕರೆ ನೀಡಿದರು.

### ಸ್ವದೇಶಿ ಚಳುವಳಿಗೆ ಅಡಿಪಾಯ
ಸ್ವದೇಶಿ ಚಳುವಳಿ ಶತಮಾನಗಳಷ್ಟು ಹಳೆಯದಾದ ಕುರುಹು ಮಾತ್ರವಲ್ಲ, ಭವಿಷ್ಯವನ್ನು ಬಲಪಡಿಸುವ ಒಂದು ಆಂದೋಲನವಾಗಿದೆ ಮತ್ತು ಸಮಾಜ, ವಿಶೇಷವಾಗಿ ಯುವಕರು ಅದನ್ನು ಮುನ್ನಡೆಸಬೇಕು. ಪ್ರಧಾನಮಂತ್ರಿ ಮೋದಿ ಮಕ್ಕಳು ಮತ್ತು ಯುವಜನರಿಗೆ ಪದೇ ಪದೇ ಇದೇ ರೀತಿಯ ಮನವಿಗಳನ್ನು ಮಾಡುವ ಮೂಲಕ ಅವರು ಸ್ವದೇಶಿ ಮನೋಭಾವವನ್ನು ಅಳವಡಿಸಿಕೊಳ್ಳಲು ಅಡಿಪಾಯ ಹಾಕುತ್ತಿದ್ದಾರೆ.

### ಧೈರ್ಯಶಾಲಿ ಮಕ್ಕಳೊಂದಿಗೆ ಸಂವಾದ
2024 ರಲ್ಲಿ ನಡೆದ ವೀರ ಬಾಲ ದಿವಸ್ ಸಂದರ್ಭದಲ್ಲಿ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ವಿಜೇತರೊಂದಿಗೆ ಪ್ರಧಾನಮಂತ್ರಿ ಮೋದಿ ಸಂವಾದ ನಡೆಸಿದರು. ಈ ಕಾರ್ಯಕ್ರಮದಲ್ಲಿ, ಶೌರ್ಯ, ನಾವೀನ್ಯತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಕ್ರೀಡೆ ಮತ್ತು ಕಲೆಗಳಲ್ಲಿ ವಿಜೇತರಾದ ಮಕ್ಕಳು ಭಾಗವಹಿಸಿದ್ದರು. ಸಂವಾದದ ಸಮಯದಲ್ಲಿ, ಈ ವೀರ ಬಾಲ ದಿನವು ನಮಗೆ ಎಷ್ಟೇ ಕಠಿಣ ಸಂದರ್ಭಗಳು ಬಂದರೂ... ಎಷ್ಟೇ ಪ್ರತಿಕೂಲ ಸನ್ನಿವೇಶ ಎದುರಾದರೂ, ದೇಶ ಮತ್ತು ಅದರ ಹಿತಾಸಕ್ತಿಗಳಿಗಿಂತ ಯಾವುದೂ ಮುಖ್ಯವಲ್ಲ ಎಂಬುದನ್ನು ಕಲಿಸುತ್ತದೆ ಎಂದು ಪ್ರಧಾನಮಂತ್ರಿ ಮೋದಿ ಹೇಳಿದರು.



## ಸುರಕ್ಷಿತ ಬಾಲ್ಯ, ಸದೃಢ ಭಾರತ

**ದೇಶದ ಭವಿಷ್ಯವು ಮಕ್ಕಳ ನಗುವಿನಲ್ಲಿದೆ... ಈ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು, ಬಾಲ್ಯವು ಸಂತೋಷವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಹಿಂಸೆ, ಶೋಷಣೆ, ಬಾಲ ಕಾರ್ಮಿಕ ಪದ್ಧತಿ ಹಾಗೂ ಲಿಂಗ ತಾರತಮ್ಯದಂತಹ ಅಪರಾಧಗಳನ್ನು ನಿಗ್ರಹಿಸಲು ಕೇಂದ್ರ ಸರ್ಕಾರವು 2014 ರಿಂದ ಹಲವಾರು ಕಾನೂನು ಕ್ರಮಗಳನ್ನು ತೆಗೆದುಕೊಂಡಿದೆ...**

### ಬಾಲ ಕಾರ್ಮಿಕ ಪದ್ಧತಿ
- ಬಾಲ ಕಾರ್ಮಿಕ ಪದ್ಧತಿ ಭಾರತದಲ್ಲಿ ದೀರ್ಘಕಾಲದ ಸಮಸ್ಯೆಯಾಗಿದೆ. 2016 ರಲ್ಲಿ ಅಂಗೀಕರಿಸಲ್ಪಟ್ಟ ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆಯು ಈ ದಿಕ್ಕಿನಲ್ಲಿ ಐತಿಹಾಸಿಕ ಬದಲಾವಣೆಯನ್ನು ತಂದಿತು.
- ಈ ತಿದ್ದುಪಡಿಯು 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಎಲ್ಲಾ ರೀತಿಯ ಉದ್ಯೋಗಗಳ ಮೇಲೆ ಸಂಪೂರ್ಣ ನಿಷೇಧವನ್ನು ವಿಧಿಸಿತು.
- 14 ರಿಂದ 18 ವರ್ಷ ವಯಸ್ಸಿನ ಹದಿಹರೆಯದವರು ಅಪಾಯಕಾರಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವುದನ್ನು ನಿಷೇಧಿಸಲಾಗಿದೆ.



- ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವವರಿಗೆ ಕಠಿಣ ಶಿಕ್ಷೆಗಳನ್ನು ಪರಿಚಯಿಸಲಾಯಿತು, ಇದರಲ್ಲಿ ಮೊದಲ ಬಾರಿಗೆ ಜೈಲು ಶಿಕ್ಷೆ ಮತ್ತು ಭಾರಿ ದಂಡಗಳು ಸೇರಿವೆ.
- ಈ ಕ್ರಮವು ಅಂತಾರಾಷ್ಟ್ರೀಯ ಕಾರ್ಮಿಕ ಮಾನದಂಡಗಳಿಗೆ ಅನುಗುಣವಾಗಿರುವುದಲ್ಲದೆ, "ಕೆಲಸಕ್ಕಿಂತ ಶಿಕ್ಷಣ" ಎಂಬ ಸಾಮಾಜಿಕ ಜಾಗೃತಿಯಾಗಿಯೂ ಸಾಬೀತಾಯಿತು.

ಆಯುಷ್ಮಾನ್ ಕಾರ್ಡ್ ಅಡಿಯಲ್ಲಿ ₹5 ಲಕ್ಷದವರೆಗಿನ ಉಚಿತ ಚಿಕಿತ್ಸೆಯನ್ನು ಸಹ ಪಡೆಯುತ್ತಾರೆ. ಈ ಮಕ್ಕಳಿಗೆ ಅವರ ಹಿರಿಯರ ಬೆಂಬಲದ ಜೊತೆಗೆ ಭಾವನಾತ್ಮಕ ಬೆಂಬಲ ಮತ್ತು ಸೂಕ್ತ ಮಾನಸಿಕ ಮಾರ್ಗದರ್ಶನವನ್ನು ಒದಗಿಸಲು ವಿಶೇಷ "ಸಂವಾದ್ ಸಹಾಯವಾಣಿ"ಯನ್ನು ಪ್ರಾರಂಭಿಸಲಾಗಿದೆ.

**ಸಂಸ್ಕೃತಿ ಮತ್ತು ದೇಶಭಕ್ತಿ - ವಿಕಸಿತ ಭಾರತದ ಆತ್ಮ**
ಕೇಂದ್ರ ಸರ್ಕಾರವು ವಿಕಸಿತ ಭಾರತವು ಆರ್ಥಿಕವಾಗಿ ಮಾತ್ರವಲ್ಲದೆ ಮೌಲ್ಯಗಳು ಮತ್ತು ಸಂಪ್ರದಾಯಗಳ

## ಬಾಲ ನ್ಯಾಯ ಕಾಯ್ದೆ 2015

- ಮಕ್ಕಳ ಹಕ್ಕುಗಳನ್ನು ರಕ್ಷಿಸಲು, ಅವರಿಗೆ ಕಾನೂನು ನೆರವು ನೀಡಲು ಮತ್ತು ಅಪರಾಧದಲ್ಲಿ ಭಾಗಿಯಾದ ಅಥವಾ ಬಲಿಯಾದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ನಿಬಂಧನೆಗಳೊಂದಿಗೆ ಕೇಂದ್ರ ಸರ್ಕಾರವು ಬಾಲನ್ಯಾಯ (ಆರೈಕೆ ಮತ್ತು ರಕ್ಷಣೆ) ಕಾಯ್ದೆ, 2015 ಅನ್ನು ಜಾರಿಗೆ ತಂದಿದೆ.
- ಬಾಲಾಪರಾಧಿ ನ್ಯಾಯ ವ್ಯವಸ್ಥೆಯನ್ನು ಹೆಚ್ಚು ಜವಾಬ್ದಾರಿಯುತ, ಸೂಕ್ಷ್ಮ ಮತ್ತು ಪ್ರಾಯೋಗಿಕವಾಗಿಸುವುದು ಇದರ ಉದ್ದೇಶವಾಗಿದೆ. ಇದು ಬಾಲಾಪರಾಧಿ ನ್ಯಾಯ ಮಂಡಳಿಗಳು ಮತ್ತು ಮಕ್ಕಳ ಕಲ್ಯಾಣ ಸಮಿತಿಗಳ ಸ್ಥಾಪನೆಯಂತಹ ನಿಬಂಧನೆಗಳನ್ನು ಒಳಗೊಂಡಿದೆ.

## ಭಾರತದಲ್ಲಿ ದತ್ತು ಪರಿಸರ ವ್ಯವಸ್ಥೆ ಸರಳೀಕೃತ

ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (ಸಿ ಎ ಆರ್ ಎ) ದೇಶದಲ್ಲಿ ಮಕ್ಕಳನ್ನು ದತ್ತು ಪಡೆಯುವ ಪ್ರಕ್ರಿಯೆಯನ್ನು ಸರಳಗೊಳಿಸಿದೆ. ಮುಗ್ಧ ಮಕ್ಕಳನ್ನು ರಕ್ಷಿಸಲು ದತ್ತು ಪ್ರಕ್ರಿಯೆಯು ಕಾನೂನುಬದ್ಧ ಮತ್ತು ನೈತಿಕವಾಗಿರುವುದನ್ನು ಖಚಿತಪಡಿಸಿದೆ.

**8,598** ಮಕ್ಕಳನ್ನು ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರವು ಗುರುತಿನ ಅಭಿಯಾನದ ಮೂಲಕ ದತ್ತು ಸ್ವೀಕಾರ ಕೂಟಕ್ಕೆ ಸೇರಿಸಿದೆ.

**4,515** ಮಕ್ಕಳನ್ನು 2024-25ನೇ ಆರ್ಥಿಕ ವರ್ಷದಲ್ಲಿ ದತ್ತು ಪಡೆಯಲಾಗಿದ್ದು, 2014-15ರ ನಂತರದ ಕಳೆದ ದಶಕದಲ್ಲಿ ಇದು ದಾಖಲೆಯಾಗಿದೆ.

## ಆಟಗಳ ಮೂಲಕ ಭವಿಷ್ಯಕ್ಕೆ ಸಿದ್ಧತೆ

ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2022 ಅನ್ನು 3-8 ವರ್ಷ ವಯಸ್ಸಿನ ಮಕ್ಕಳ ಶಿಕ್ಷಣದ ಆರಂಭಿಕ ಹಂತಗಳಿಗಾಗಿ ಅಭಿವೃದ್ಧಿಪಡಿಸಲಾಗಿದೆ. ಇದು ಅವರ ಮಾತೃಭಾಷೆಯಲ್ಲಿ ಆಟ ಮತ್ತು ಕಥೆ ಆಧಾರಿತ ಕಲಿಕೆಗೆ ಒತ್ತು ನೀಡುತ್ತದೆ. ಅದಕ್ಕಾಗಿಯೇ ಅವರ ತಿಳುವಳಿಕೆಗಾಗಿ ಮಾಯಾ ಪೆಟ್ಟಿಗೆಯನ್ನು ಅಭಿವೃದ್ಧಿಪಡಿಸಲಾಗಿದೆ. ಆಟಿಕೆಗಳು, ಬೊಂಬೆಗಳು, ಆಸಕ್ತಿದಾಯಕ ಕಥೆಗಳು, ಒಗಟುಗಳು, ಪೋಸ್ಟರ್ ಗಳು ಮತ್ತು ಆಟಗಳನ್ನು ಸಹ ಈ ಮಾಯಾ ಪೆಟ್ಟಿಗೆಯಲ್ಲಿ ಸೇರಿಸಲಾಗಿದೆ.

## ಕಾಣೆಯಾದ ಮಕ್ಕಳನ್ನು ಹುಡುಕಲು ಮತ್ತು ಮತ್ತೆ ಒಂದುಗೂಡಿಸಲು ಪೋರ್ಟಲ್



- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು 'ಟ್ರ್ಯಾಕ್ ಚೈಲ್ಡ್ ಪೋರ್ಟಲ್' ಅನ್ನು ಅಭಿವೃದ್ಧಿಪಡಿಸಿದೆ, ಇದು ದೇಶಾದ್ಯಂತ ಕಾಣೆಯಾದ ಮತ್ತು ಪತ್ತೆಯಾದ ಮಕ್ಕಳನ್ನು ಟ್ರ್ಯಾಕ್ ಮಾಡಲು ಅನುವು ಮಾಡಿಕೊಡುತ್ತದೆ.
- ಟ್ರ್ಯಾಕ್ ಚೈಲ್ಡ್ ಪೋರ್ಟಲ್ ಗೃಹ ಸಚಿವಾಲಯದ ಸಿ ಸಿ ಟಿ ಎನ್ ಎಸ್ ಅಥವಾ ಅಪರಾಧ ಮತ್ತು ಅಪರಾಧಿ ಟ್ರ್ಯಾಕಿಂಗ್ ಮತ್ತು ನೆಟ್ವರ್ಕ್ ಸಿಸ್ಟಮ್ನೊಂದಿಗೆ ಸಹ ಸಂಪರ್ಕ ಹೊಂದಿದೆ.
- ಮಕ್ಕಳನ್ನು ಪತ್ತೆಹಚ್ಚಲು ಮತ್ತು ಮತ್ತೆ ಒಂದುಗೂಡಿಸಲು ಟ್ರ್ಯಾಕ್ ಚೈಲ್ಡ್ ಡೇಟಾಬೇಸ್ನೊಂದಿಗೆ ಕಾಣೆಯಾದ ಮಕ್ಕಳ ಪ್ರಥಮ ಮಾಹಿತಿ ವರದಿಗಳನ್ನು (ಎಫ್ ಐ ಆರ್) ಹೊಂದಿಸಲು ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತದೆ.

**ಇಲ್ಲಿ, "ಕಳೆದುಹೋದ ಮತ್ತು ಪತ್ತೆಯಾದ" ವಿಭಾಗದಲ್ಲಿ, ಯಾವುದೇ ನಾಗರಿಕರು ಕಾಣೆಯಾದ ಅಥವಾ ಪತ್ತೆಯಾದ ಯಾವುದೇ ಮಗುವಿನ ಬಗ್ಗೆ ವರದಿ ಮಾಡಬಹುದು. ಮಕ್ಕಳನ್ನು ರಕ್ಷಿಸಲು ಮತ್ತು ಹಿಂದಿರುಗಿಸಲು ಎನ್ ಸಿ ಪಿ ಸಿ ಆರ್ "ಮನೆಗೆ ಹೋಗು ಮತ್ತೆ ಒಂದಾಗು" ಪೋರ್ಟಲ್ ಅನ್ನು ಸಹ ಪ್ರಾರಂಭಿಸಿದೆ.**

ದೃಷ್ಟಿಯಿಂದಲೂ ಬಲಿಷ್ಠವಾಗಿರಬೇಕು ಎಂದು ನಂಬುತ್ತದೆ. ಮಕ್ಕಳಿಗೆ ಆಧುನಿಕ ಶಿಕ್ಷಣವನ್ನು ಒದಗಿಸುವುದು ಮಾತ್ರವಲ್ಲದೆ ಅವರನ್ನು ಭಾರತೀಯ ಸಂಸ್ಕೃತಿ, ಯೋಗ, ಪರಿಸರ ರಕ್ಷಣೆ ಮತ್ತು ಆಧ್ಯಾತ್ಮಿಕತೆಯೊಂದಿಗೆ ಸಂಪರ್ಕಿಸುವುದು ಸರ್ಕಾರದ ದೂರದೃಷ್ಟಿಯಾಗಿದೆ.

ಸ್ವದೇಶಿ ಬಗ್ಗೆ ಕಲಿಯುವುದಾಗಲಿ, ಸ್ವಾತಂತ್ರ್ಯ ಹೋರಾಟಗಾರರಿಂದ ಸ್ಫೂರ್ತಿ ಪಡೆಯುವುದಾಗಲಿ, ಭಾರತದ ಪರಂಪರೆಯನ್ನು ಅರ್ಥಮಾಡಿಕೊಳ್ಳುವುದಾಗಲಿ ಅಥವಾ ಸಂವಿಧಾನದ ಮೌಲ್ಯಗಳನ್ನು ಅರ್ಥಮಾಡಿಕೊಳ್ಳುವುದಾಗಲಿ, ಕೇಂದ್ರ ಸರ್ಕಾರವು ಇವುಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಲು ಎಲ್ಲಾ ಹಂತಗಳಲ್ಲಿ ಚಟುವಟಿಕೆಗಳು, ಉಪಕ್ರಮಗಳು ಮತ್ತು ಅಭಿಯಾನಗಳನ್ನು ಆಯೋಜಿಸುತ್ತಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಯ ಮೇಲಿನ ನಂಬಿಕೆಯು ನಿಸ್ಸಂದೇಹವಾಗಿ ಭಾರತದ ಪ್ರಯಾಣದ ಬಹುದೊಡ್ಡ ಶಕ್ತಿಯಾಗಿದೆ. ಇಂದಿನ ಮಕ್ಕಳು ಭವಿಷ್ಯ ಮಾತ್ರವಲ್ಲ, ಭಾರತದ ಭರವಸೆ, ಸ್ಫೂರ್ತಿ ಮತ್ತು ಶಕ್ತಿಯೂ ಹೌದು. ಕಳೆದ 11 ವರ್ಷಗಳಲ್ಲಿ ಕೇಂದ್ರ ಸರ್ಕಾರದ ನೀತಿ ಮತ್ತು ದೃಷ್ಟಿಕೋನವು, ಅವುಗಳನ್ನು ಮಾತೃತ್ವದ ಧೋರಣೆಯಿಂದ ಜಾರಿಗೆ ತಂದಾಗ ಮುಂಬರುವ ಪೀಳಿಗೆಗಳು ನಿಜವಾಗಿಯೂ ವರ್ತಮಾನ ಮತ್ತು ಭವಿಷ್ಯದ ಮುಂಚೂಣಿಯಲ್ಲಿರುತ್ತವೆ, ವಿಕಸಿತ ಭಾರತದ ಹಾದಿಯನ್ನು ಬಲಪಡಿಸುತ್ತವೆ ಎಂದು ತೋರಿಸುತ್ತದೆ.

**ಭದ್ರತೆ, ನಿರ್ಣಯ ಮತ್ತು ದೀಪಾವಳಿ**

# ನೌಕಾ ಪಡೆಯ ಯೋಧರೊಂದಿಗೆ ಪ್ರಧಾನಿಯವರ ದೀಪಾವಳಿ

*ಪ್ರತಿಯೊಬ್ಬರೂ ತಮ್ಮ ಪ್ರೀತಿಪಾತ್ರರೊಂದಿಗೆ ದೀಪಾವಳಿಯನ್ನು ಆಚರಿಸುತ್ತಾರೆ ಮತ್ತು ಪ್ರಧಾನಿಯವರೂ ಇದಕ್ಕೆ ಹೊರತಾಗಿಲ್ಲ, ಆದರೆ ಅವರ ಕುಟುಂಬದಲ್ಲಿ ದೇಶದ ಭದ್ರತಾ ಸಿಬ್ಬಂದಿಯೂ ಸೇರಿದ್ದಾರೆ. ಗುಜರಾತ್ ಮುಖ್ಯಮಂತ್ರಿಯಾಗಿದ್ದ ಕಾಲದಿಂದ ಈಗಿನವರೆಗೂ, ಅವರು ಪ್ರತಿ ದೀಪಾವಳಿಯನ್ನು ದೇಶದ ಗಡಿಗಳನ್ನು ರಕ್ಷಿಸುವ ಸೇನೆ ಮತ್ತು ಭದ್ರತಾ ಸಿಬ್ಬಂದಿಯೊಂದಿಗೆ ಆಚರಿಸುತ್ತಿದ್ದಾರೆ. ಈ ವರ್ಷವೂ ಅವರು ಅದನ್ನೇ ಮಾಡಿದರು... ಗೋವಾ ಮತ್ತು ಕಾರವಾರದ ಪಶ್ಚಿಮ ಕರಾವಳಿಯಲ್ಲಿ ದೇಶದ ಧೈರ್ಯಶಾಲಿ ನೌಕಾ ಸಿಬ್ಬಂದಿಯೊಂದಿಗೆ ಐ ಎನ್ ಎಸ್ ವಿಕ್ರಾಂತ್ ನಲ್ಲಿ ದೀಪಾವಳಿಯನ್ನು ಆಚರಿಸಿದರು...*

ದೇಶದ ಸಶಸ್ತ್ರ ಪಡೆಗಳು ಪ್ರತಿಯೊಂದು ಗಡಿಯಲ್ಲಿ, ಭೂಮಿ, ನೀರು ಮತ್ತು ಗಾಳಿಯಲ್ಲಿ, ಪ್ರತಿಯೊಂದು ಸನ್ನಿವೇಶದಲ್ಲೂ ಸಮರ್ಪಣಾಭಾವದಿಂದ ದೇಶಕ್ಕೆ ಸೇವೆ ಸಲ್ಲಿಸುತ್ತವೆ. ದೇಶದ ಸಮುದ್ರ ಗಡಿಗಳು ಮತ್ತು ವಾಣಿಜ್ಯ ಹಿತಾಸಕ್ತಿಗಳನ್ನು ರಕ್ಷಿಸಲು ನೌಕಾಪಡೆಯನ್ನು ನಿಯೋಜಿಸಲಾಗಿದೆ, ವಾಯುಪಡೆಯು ಆಕಾಶದಲ್ಲಿ ಭಾರತದ ಭದ್ರತೆಗೆ ಬದ್ಧವಾಗಿದೆ. ಭೂಮಿಯಲ್ಲಿ, ಸುಡುವ ಮರುಭೂಮಿಗಳಿಂದ ಹಿಮನದಿಗಳವರೆಗೆ, ಸೇನೆ, ಬಿ ಎಸ್ ಎಫ್ ಮತ್ತು ಐಟಿಬಿಪಿ ಯೋಧರು ಗಡಿಗಳನ್ನು ಕಾಪಾಡುತ್ತಾರೆ. ಅದೇ ರೀತಿ, ಇತರ ವಿವಿಧ ರಂಗಗಳಲ್ಲಿ, ಎಸ್ ಎಸ್ ಬಿ, ಅಸ್ಸಾಂ ರೈಫಲ್ಸ್, ಸಿ ಆರ್ ಪಿ ಎಫ್, ಸಿ ಐ ಎಸ್ ಎಫ್ ಮತ್ತು ನಮ್ಮ ಗುಪ್ತಚರ ಸಂಸ್ಥೆಗಳು ಭಾರತ ಮಾತೆಯ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತವೆ. ಇದಲ್ಲದೆ, ಭಾರತೀಯ ಕರಾವಳಿ ಕಾವಲು ಪಡೆ, ನೌಕಾಪಡೆಯೊಂದಿಗೆ ಸಮನ್ವಯದಿಂದ, ನಮ್ಮ ಕರಾವಳಿಯನ್ನು ಹಗಲು ರಾತ್ರಿ ರಕ್ಷಿಸುತ್ತದೆ.

ಪ್ರಧಾನಿ ಮೋದಿ ಅವರು ರಾಷ್ಟ್ರೀಯ ಭದ್ರತೆಗಾಗಿ ಅಪಾರ ತ್ಯಾಗ ಮಾಡುವ ಸಶಸ್ತ್ರ ಪಡೆಗಳೊಂದಿಗೆ ದೀಪಾವಳಿ ಆಚರಿಸುತ್ತಿದ್ದಾರೆ. ಈ ವರ್ಷ ಅವರು ಐ ಎನ್ ಎಸ್ ವಿಕ್ರಾಂತ್ ನಲ್ಲಿರುವ ನೌಕಾ ಸಿಬ್ಬಂದಿಯೊಂದಿಗೆ ದೀಪಾವಳಿ ಆಚರಿಸಿದರು. ಅಕ್ಟೋಬರ್ 20 ರಂದು ಐ ಎನ್ ಎಸ್ ವಿಕ್ರಾಂತ್ ನಲ್ಲಿ ನಡೆದ ದೀಪಾವಳಿ ಆಚರಣೆಯ ಸಂದರ್ಭದಲ್ಲಿ ಸೈನಿಕರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ, ಪ್ರತಿಯೊಬ್ಬರೂ ತಮ್ಮ ಕುಟುಂಬಗಳೊಂದಿಗೆ ದೀಪಾವಳಿ ಆಚರಿಸಲು ಬಯಸುತ್ತಾರೆ. ನನಗೂ ನನ್ನ ಕುಟುಂಬ ಸದಸ್ಯರೊಂದಿಗೆ ದೀಪಾವಳಿ ಆಚರಿಸಲು ಅಭ್ಯಾಸವಾಗಿದೆ. ನನ್ನ ಕುಟುಂಬ ಸದಸ್ಯರಾದ ನಿಮ್ಮ ಜೊತೆ ದೀಪಾವಳಿ ಆಚರಿಸಲು ನಾನು ಬಂದಿದ್ದೇನೆ ಎಂದರು. "ನಾನು ಈ ದೀಪಾವಳಿಯನ್ನು ನನ್ನ ಕುಟುಂಬ ಸದಸ್ಯರೊಂದಿಗೆ ಆಚರಿಸುತ್ತಿದ್ದೇನೆ ಮತ್ತು ಅದಕ್ಕಾಗಿಯೇ ಇದು ನನಗೆ ವಿಶೇಷವಾಗಿದೆ." ಎಂದು ಅವರು ಹೇಳಿದರು,

ಈ ದೀಪಾವಳಿ ಪ್ರಧಾನಮಂತ್ರಿ ಮೋದಿಯವರಿಗೆ ಹಲವು ವಿಧಗಳಲ್ಲಿ





## ಜಾಗತಿಕ ಸ್ಥಿರತೆಯಲ್ಲಿ ಭಾರತೀಯ ನೌಕಾಪಡೆಯ ಮಹತ್ವದ ಪಾತ್ರ

- ಇಂದು, ಪ್ರಪಂಚದಾದ್ಯಂತದ ದೇಶಗಳ ಆರ್ಥಿಕತೆ ಮತ್ತು ಪ್ರಗತಿ ಸಮುದ್ರ ಮಾರ್ಗಗಳ ಮೇಲೆ ಅವಲಂಬಿತವಾಗಿದ್ದು, ಭಾರತೀಯ ನೌಕಾಪಡೆಯು ಜಾಗತಿಕ ಸ್ಥಿರತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.
- ವಿಶ್ವದ ತೈಲ ಪೂರೈಕೆಯ ಶೇ.66 ರಷ್ಟು ಮತ್ತು ವಿಶ್ವದ ಕಂಟೇನರ್ ಸಾಗಣೆಯ ಶೇ.50 ರಷ್ಟು ಹಿಂದೂ ಮಹಾಸಾಗರದ ಮೂಲಕ ಹಾದು ಹೋಗುತ್ತವೆ. ಈ ಮಾರ್ಗಗಳನ್ನು ರಕ್ಷಿಸಲು ಭಾರತೀಯ ನೌಕಾಪಡೆಯು ಹಿಂದೂ ಮಹಾಸಾಗರದ ರಕ್ಷಕನಾಗಿ ಕಾರ್ಯನಿರ್ವಹಿಸುತ್ತದೆ.
- ಮಿಷನ್ ಆಧಾರಿತ ನಿಯೋಜನೆಗಳು, ಕಡಲ್ಗಳ್ಳತನ ನಿಗ್ರಹ ಗಸ್ತುಗಳು ಮತ್ತು ಮಾನವೀಯ ನೆರವು ಕಾರ್ಯಾಚರಣೆಗಳ ಮೂಲಕ, ಭಾರತೀಯ ನೌಕಾಪಡೆಯು ಈ ಪ್ರದೇಶದಾದ್ಯಂತ ಜಾಗತಿಕ ಭದ್ರತಾ ಪಾಲುದಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.
- ನಮ್ಮ ದ್ವೀಪಗಳ ಭದ್ರತೆ ಮತ್ತು ಸಮಗ್ರತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ನೌಕಾಪಡೆಯು ಪ್ರಮುಖ ಪಾತ್ರ ವಹಿಸುತ್ತದೆ. ಗಣರಾಜ್ಯೋತ್ಸವದಂದು ದೇಶದ ಪ್ರತಿಯೊಂದು ದ್ವೀಪದಲ್ಲೂ ತ್ರಿವರ್ಣ ಧ್ವಜ ಹಾರಿಸಬೇಕೆಂದು ನಾವು ಸಂಕಲ್ಪ ಮಾಡಿದೆವು. ನೌಕಾಪಡೆಯು ಈ ಪ್ರತಿಜ್ಞೆಯನ್ನು ಹೆಮ್ಮೆಯಿಂದ ಈಡೇರಿಸುತ್ತಿದೆ. 2014 ರಲ್ಲಿ, ನಮ್ಮ ನೆರೆಯ ದೇಶವಾದ ಮಾಲ್ಡೀವ್ಸ್ ನಲ್ಲಿ ಕುಡಿಯುವ ನೀರಿನ ಬಿಕ್ಕಟ್ಟು ಉಂಟಾದಾಗ, ನಾವು ಆಪರೇಷನ್ ನೀರ್ ಅನ್ನು ಪ್ರಾರಂಭಿಸಿದೆವು ಮತ್ತು ನಮ್ಮ ನೌಕಾಪಡೆಯು ಶುದ್ಧ ನೀರಿನ ಸರಬರಾಜುಗಳೊಂದಿಗೆ ಅಲ್ಲಿಗೆ ತಲುಪಿತು.

## ಸೇನೆಯು ಸ್ವಾವಲಂಬನೆಯತ್ತ ವೇಗವಾಗಿ ಸಾಗುತ್ತಿದೆ

- ಭಾರತದ ರಕ್ಷಣಾ ಉತ್ಪಾದನೆಯು 11 ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಾಗಿದ್ದು, ಕಳೆದ ವರ್ಷ ₹1.5 ಲಕ್ಷ ಕೋಟಿ ಮೀರಿದೆ.
- 2014 ರಿಂದ, ಭಾರತೀಯ ನೌಕಾಪಡೆಯು ಭಾರತೀಯ ಹಡಗುಕಟ್ಟೆಗಳಿಂದ 40 ಕ್ಕೂ ಹೆಚ್ಚು ದೇಶೀಯ ಯುದ್ಧನೌಕೆಗಳು ಮತ್ತು ಜಲಾಂತರ್ಗಾಮಿಗಳನ್ನು ಪಡೆದುಕೊಂಡಿದೆ.
- ಕಳೆದ ದಶಕದಲ್ಲಿ ದೇಶದ ರಕ್ಷಣಾ ರಫ್ತು 30 ಪಟ್ಟು ಹೆಚ್ಚಾಗಿದೆ. ರಕ್ಷಣಾ ನವೋದ್ಯಮಗಳು ಮತ್ತು ದೇಶೀಯ ರಕ್ಷಣಾ ಘಟಕಗಳು ಈ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಸರಾಸರಿ, ಪ್ರತಿ **40** ದಿನಗಳಿಗೊಮ್ಮೆ, ದೇಶೀಯವಾಗಿ ನಿರ್ಮಿಸಲಾದ ಹೊಸ ಯುದ್ಧನೌಕೆ ಅಥವಾ ಜಲಾಂತರ್ಗಾಮಿ ನೌಕಾಪಡೆಗೆ ಸೇರುತ್ತದೆ.

**"ಐ ಎನ್ ಎಸ್ ವಿಕ್ರಾಂತ್ ಇಂದು ಆತ್ಮನಿರ್ಭರ ಭಾರತ ಮತ್ತು ಮೇಡ್ ಇನ್ ಇಂಡಿಯಾದ ಶ್ರೇಷ್ಠ ಸಂಕೇತವಾಗಿದೆ. ಸಮುದ್ರಗಳನ್ನು ದಾಟಿ ಸಾಗುತ್ತಿರುವ ಸ್ವದೇಶಿ ನಿರ್ಮಿತ ಐ ಎನ್ ಎಸ್ ವಿಕ್ರಾಂತ್, ಭಾರತದ ಮಿಲಿಟರಿ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ.**

**ನರೇಂದ್ರ ಮೋದಿ,**
**ಪ್ರಧಾನ ಮಂತ್ರಿ**



## ಐ ಎನ್ ಎಸ್ ವಿಕ್ರಾಂತ್ ನಲ್ಲಿ ನಡೆದ ಕಾರ್ಯಕ್ರಮಗಳು

- ವಿಮಾನದ ಡೆಕ್ ನಲ್ಲಿ, ಪ್ರಧಾನಿ ಮೋದಿ ಅವರು ಮಿಗ್ -29 ಕೆ ಯುದ್ಧ ವಿಮಾನವು ಸಣ್ಣ ರನ್ ವೇಯಲ್ಲಿ ಟೇಕ್ ಆಫ್ ಮತ್ತು ಲ್ಯಾಂಡ್ ಆಗುವುದನ್ನು ವೀಕ್ಷಿಸಿದರು.
- ಇದು ನಿಖರತೆ ಮತ್ತು ಶೌರ್ಯವನ್ನು ಪ್ರದರ್ಶಿಸುವ ಅದ್ಭುತ ಮತ್ತು ಸ್ಫೂರ್ತಿದಾಯಕ ವಾಯು ಶಕ್ತಿ ಪ್ರದರ್ಶನದ ಭಾಗವಾಗಿತ್ತು.
- ಪ್ರಧಾನಿ ಮೋದಿ ನೌಕಾ ಸಿಬ್ಬಂದಿಯೊಂದಿಗೆ ಊಟ ಮಾಡಿದರು ಮತ್ತು ಸೈನಿಕರು "ಕಸಮ್ ಸಿಂಧೂರ್ ಕಿ" ಹಾಡನ್ನು ಹಾಡಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದರು.
- ಐ ಎನ್ ಎಸ್ ವಿಕ್ರಾಂತ್ ನಲ್ಲಿ ಯೋಗ ಕಾರ್ಯಕ್ರಮವನ್ನು ನಡೆಸಲಾಯಿತು, ಇದರಲ್ಲಿ ನಾವಿಕರು ಭಾಗವಹಿಸಿದ್ದರು.

ವಿಶೇಷವಾಗಿತ್ತು, ಏಕೆಂದರೆ ಅವರು ಐ ಎನ್ ಎಸ್ ವಿಕ್ರಾಂತ್ ನಲ್ಲಿ ರಾತ್ರಿಯನ್ನು ಕಳೆದರು ಮತ್ತು ಅಲ್ಲಿಂದ ಸೂರ್ಯೋದಯವನ್ನು ವೀಕ್ಷಿಸಿದರು. ಒಂದೆಡೆ, ಅವರು ಸಾಗರದ ವಿಹಂಗಮ ನೋಟವನ್ನು ಕಂಡರು, ಮತ್ತೊಂದೆಡೆ, ಅವರು ಭಾರತ ಮಾತೆಯ ಕೆಚ್ಚೆದೆಯ ಸೈನಿಕರ ಅಪಾರ ಶಕ್ತಿಯನ್ನು ವೀಕ್ಷಿಸಿದರು. ಒಂದು ಕಡೆ ಅಂತ್ಯವಿಲ್ಲದ ದಿಗಂತವಿದ್ದರೆ, ಇನ್ನೊಂದೆಡೆ ಅನಂತ ಶಕ್ತಿಯ ಸಂಕೇತವಾದ ಭವ್ಯವಾದ ಐ ಎನ್ ಎಸ್ ವಿಕ್ರಾಂತ್ ಇತ್ತು. ಈ ಕಾರ್ಯಕ್ರಮದಲ್ಲಿ ಅವರು, ಸಮುದ್ರದ ನೀರಿನ ಮೇಲೆ ಹೊಳೆಯುವ ಸೂರ್ಯನ ಬೆಳಕು ನಮ್ಮ ವೀರ ಸೈನಿಕರು ಬೆಳಗಿದ ದೀಪಾವಳಿಯ ದೀಪಗಳಂತೆ ಎಂದು ಹೇಳಿದರು. ನೌಕಾಪಡೆಯ ವೀರ ಯೋಧರ ನಡುವೆ ದೀಪಾವಳಿಯ ಈ ಪವಿತ್ರ ಹಬ್ಬವನ್ನು ಆಚರಿಸುವುದು ನನ್ನ ಸೌಭಾಗ್ಯ ಎಂದರು. ಈ ಸಂದರ್ಭದಲ್ಲಿ, ಪ್ರಧಾನಿಯವರು ಸಶಸ್ತ್ರ ಪಡೆಗಳಿಗೆ ವಿಶೇಷ ಗೌರವ ಸಲ್ಲಿಸಿದರು, ನೌಕಾಪಡೆಯು ಹುಟ್ಟುಹಾಕಿದ ಭಯ, ವಾಯುಪಡೆಯು ಪ್ರದರ್ಶಿಸಿದ ಅದ್ಭುತ ಕೌಶಲ್ಯ ಮತ್ತು ಭಾರತೀಯ ಸೇನೆಯ ಶೌರ್ಯದ ಅದ್ಭುತ ಸಮನ್ವಯವು ಪಾಕಿಸ್ತಾನವು ಆಪರೇಷನ್ ಸಿಂಧೂರದಲ್ಲಿ ಶರಣಾಗುವಂತೆ ಮಾಡಿತು ಎಂದು ಹೇಳಿದರು. ಆದ್ದರಿಂದ, ಇಂದು, ಐ ಎನ್ ಎಸ್ ವಿಕ್ರಾಂತ್ ನ ಈ ಪವಿತ್ರ ಮತ್ತು ಶೌರ್ಯ ಸ್ಥಳದಿಂದ, ನಾನು ಮತ್ತೊಮ್ಮೆ ಮೂರು ಸಶಸ್ತ್ರ ಪಡೆಗಳ ವೀರ ಯೋಧರಿಗೆ ನಮಸ್ಕರಿಸುತ್ತೇನೆ ಎಂದು ಪ್ರಧಾನಿ ಹೇಳಿದರು.

*ಪ್ರಧಾನ ಮಂತ್ರಿಯವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.*




# ಸಮುದ್ರದ ಮೂಲಕ ಸಮೃದ್ಧಿಗೆ ದಾರಿ

*ಮ್ಯಾರಿಟೈಮ್ ಇಂಡಿಯಾ ವಿಷನ್ 2030 ಮತ್ತು ಮ್ಯಾರಿಟೈಮ್ ಅಮೃತ್ ಕಾಲ್ ವಿಷನ್ 2047 ಸಮೃದ್ಧಿಯನ್ನು ಭದ್ರಪಡಿಸುವ ನಿಟ್ಟಿನಲ್ಲಿ ಭಾರತದ ಮೆಟ್ಟಿಲುಗಳಾಗಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಕ್ಟೋಬರ್ 29 ರಂದು ನಡೆದ ಭಾರತ ಕಡಲ ಸಪ್ತಾಹ 2025ರಲ್ಲಿ ನಾಯಕರ ಸಮಾವೇಶದಲ್ಲಿ ಕಡಲ ಸಾಮರ್ಥ್ಯಗಳನ್ನು ವಿಸ್ತರಿಸುವ ಈ ದೃಷ್ಟಿಕೋನವನ್ನು ಹಂಚಿಕೊಂಡರು.*

ಭಾರತದ ವಿಶಾಲವಾದ ಕರಾವಳಿಯು ಜಾಗತಿಕ ಕಡಲ ಭೂರಮೆಯಲ್ಲಿ ದೇಶದ ಸಮೃದ್ಧಿ ಮತ್ತು ನಾಯಕತ್ವಕ್ಕೆ ಹೊಸ ಮಾರ್ಗಗಳನ್ನು ತೆರೆಯುತ್ತದೆ. ವಾಸ್ತವವಾಗಿ, ಭಾರತದ ಒಟ್ಟು ವ್ಯಾಪಾರದ ಶೇ.95ರಷ್ಟು ಮತ್ತು ಮೌಲ್ಯದಲ್ಲಿ ಸುಮಾರು ಶೇ.70ರಷ್ಟು ಕಡಲ ಮಾರ್ಗಗಳ ಮೂಲಕ ಹಾದುಹೋಗುತ್ತದೆ. ಈ ಬಂದರುಗಳು ಭಾರತವನ್ನು ವಿಶ್ವಾದ್ಯಂತ ಮಾರುಕಟ್ಟೆಗಳೊಂದಿಗೆ ಸಂಪರ್ಕಿಸುತ್ತವೆ. ಆದ್ದರಿಂದ ಭಾರತದ ಆರ್ಥಿಕ ಆರೋಗ್ಯವು ಸಮುದ್ರಗಳ ಮೂಲಕ ಹಾದುಹೋಗುತ್ತದೆ ಎಂದು ಹೇಳಲಾಗುತ್ತದೆ. ಭಾರತವು ಈಗ ಜಾಗತಿಕ ಕಡಲ ಭೂರಮೆಯಲ್ಲಿ ಪ್ರಬಲ ಶಕ್ತಿಯಾಗಿ ತನ್ನನ್ನು ತಾನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಅದಕ್ಕಾಗಿಯೇ, 2014 ರ ನಂತರ, ಭಾರತವು ತನ್ನ ಕಡಲ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಗಮನಾರ್ಹ ಪ್ರಯತ್ನಗಳನ್ನು ಕೈಗೊಂಡಿದೆ. ಈ ಕಾರ್ಯತಂತ್ರದ ಭಾಗವಾಗಿ ಇಂಡಿಯಾ ಮ್ಯಾರಿಟೈಮ್ ವಿಷನ್ 2030 ಅನ್ನು 2021 ರಲ್ಲಿ ಪ್ರಾರಂಭಿಸಲಾಯಿತು. ಈ ದೃಷ್ಟಿಕೋನವು ಸಮೃದ್ಧಿಯ ಸಾಮರ್ಥ್ಯದ ಜೊತೆಗೆ, ಭಾರತ ಕಡಲ ಸಪ್ತಾಹ 2025 ರಲ್ಲಿ ಪ್ರಧಾನಮಂತ್ರಿ ಮೋದಿ ಅವರು ಒತ್ತಿಹೇಳಿದರು. ಅಕ್ಟೋಬರ್ 27 ರಿಂದ 31 ರವರೆಗೆ ಮುಂಬೈನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ 85 ದೇಶಗಳ 10,000 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಕಡಲ ನಾಯಕರ ಸಮಾವೇಶದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕಡಲ ಸಾಮರ್ಥ್ಯವನ್ನು ವಿಸ್ತರಿಸಲು ಭಾರತದ ಕ್ರಮಗಳು ಮತ್ತು ಅದರ ಭವಿಷ್ಯದ ಕಾರ್ಯತಂತ್ರವನ್ನು ವಿವರಿಸಿದರು. ಕಳೆದ 11 ವರ್ಷಗಳಲ್ಲಿ, ಭಾರತದ ಕಡಲ ವಲಯವು ಐತಿಹಾಸಿಕ ಪರಿವರ್ತನೆಗೆ ಒಳಗಾಗಿದೆ, 150 ಕ್ಕೂ ಹೆಚ್ಚು ಹೊಸ ಉಪಕ್ರಮಗಳನ್ನು ಪ್ರಾರಂಭಿಸಲಾಗಿದೆ. ಪ್ರಮುಖ ಬಂದರುಗಳ ಸಾಮರ್ಥ್ಯ ಬಹುತೇಕ ದುಪ್ಪಟ್ಟಾಗಿದೆ. ವಹಿವಾಟು ಸಮಯ ಅಥವಾ ಬಂದರುಗಳಲ್ಲಿ ಸರಕುಗಳನ್ನು ಲೋಡ್ ಮಾಡಲು ಅಥವಾ ಇಳಿಸಲು ತೆಗೆದುಕೊಳ್ಳುವ ಸಮಯ ಕಡಿಮೆಯಾಗಿದೆ. ಕ್ರೂಸ್ ಪ್ರವಾಸೋದ್ಯಮವು ಹೊಸ ವೇಗವನ್ನು ಪಡೆದುಕೊಂಡಿದೆ. ಜಲಮಾರ್ಗಗಳಲ್ಲಿ ಸರಕು ಸಾಗಣೆ ಶೇಕಡಾ 700 ಕ್ಕಿಂತ ಹೆಚ್ಚಾಗಿದೆ. ಭಾರತದ ಬಂದರುಗಳನ್ನು ಈಗ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅತ್ಯಂತ ಪರಿಣಾಮಕಾರಿ ಎಂದು ಪರಿಗಣಿಸಲಾಗಿದೆ, ಅನೇಕ ವಿಷಯಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳನ್ನು ಮೀರಿಸಿದೆ ಎಂದು ಪ್ರಧಾನಮಂತ್ರಿ ಮೋದಿ ಹೇಳಿದರು. ಭಾರತೀಯ ಬಂದರುಗಳಲ್ಲಿ ಸರಾಸರಿ ಕಂಟೇನರ್ ಇರುವಿಕೆ ಸಮಯ ಈಗ ಮೂರು ದಿನಗಳಿಗಿಂತ ಕಡಿಮೆಯಾಗಿದೆ, ಇದು ಅನೇಕ ಅಭಿವೃದ್ಧಿ ಹೊಂದಿದ ದೇಶಗಳಿಗಿಂತ ಉತ್ತಮವಾಗಿದೆ. ಹಡಗಿನಲ್ಲಿ ವಾಸಿಸುವ ಸರಾಸರಿ ಸಮಯವು 96 ಗಂಟೆಗಳಿಂದ ಕೇವಲ 48 ಗಂಟೆಗಳಿಗೆ ಇಳಿದಿದೆ. ಇದಲ್ಲದೆ, ವಿಶ್ವ ಬ್ಯಾಂಕಿನ ಸಾಗಣೆ ಕಾರ್ಯಕ್ಷಮತೆ ಸೂಚ್ಯಂಕದಲ್ಲಿ ಕಾರ್ಯಕ್ಷಮತೆ ಸುಧಾರಿಸಿದೆ.

ಭಾರತದ ಭವ್ಯ ಕಡಲ ಇತಿಹಾಸ ಮತ್ತು ಭವಿಷ್ಯದ ದೃಷ್ಟಿಕೋನವನ್ನು ವಿವರಿಸಿದ ಪ್ರಧಾನಮಂತ್ರಿ ಮೋದಿ, ಅಜಂತಾ ಗುಹೆಗಳಲ್ಲಿರುವ ಮೂರು ಸ್ತಂಭಗಳ ಹಡಗಿನ ಚಿತ್ರದ ಬಗ್ಗೆ ಉಲ್ಲೇಖಿಸಿದರು. ಈ ಚಿತ್ರವನ್ನು ಆರನೇ ಶತಮಾನದಲ್ಲಿ



**ಗುರಿ...** ಮ್ಯಾರಿಟೈಮ್ ಇಂಡಿಯಾ ವಿಷನ್ ಅಡಿಯಲ್ಲಿ 2030ರ ವೇಳೆಗೆ ಹಡಗು ಮತ್ತು ಹಡಗು ನಿರ್ಮಾಣದಲ್ಲಿ ಅಗ್ರ 10 ದೇಶಗಳಲ್ಲಿ ಒಂದಾಗುವುದು ಮತ್ತು 2047 ರ ವೇಳೆಗೆ ಮ್ಯಾರಿಟೈಮ್ ಅಮೃತ್ ಕಾಲ್ ವಿಷನ್ ಅಡಿಯಲ್ಲಿ ಅಗ್ರ 5 ರಲ್ಲಿ ಒಂದೆನಿಸುವುದು.



## ಪ್ರಯತ್ನಗಳು..

**3.5** ಲಕ್ಷ ಕೋಟಿ ರೂ.ಗಳನ್ನು ಮ್ಯಾರಿಟೈಮ್ ಇಂಡಿಯಾ ವಿಷನ್ 2030 ರ ಅಡಿಯಲ್ಲಿ ಪ್ರಾರಂಭಿಸಲಾದ 150ಕ್ಕೂ ಹೆಚ್ಚು ಹೊಸ ಉಪಕ್ರಮಗಳಲ್ಲಿ ಹೂಡಿಕೆ ಮಾಡಲಾಗುವುದು.

- ಈಗ, ಬಂದರುಗಳು ಮತ್ತು ಹಡಗುಗಳಲ್ಲಿ ಶೇಕಡಾ 100 ರಷ್ಟು ವಿದೇಶಿ ಹೂಡಿಕೆಗೆ ಅನುಮತಿ ನೀಡಲಾಗಿದೆ.
- ವ್ಯಾಪಾರ ಹಡಗು ಕಾಯ್ದೆ ಮತ್ತು ಕರಾವಳಿ ಹಡಗು ಕಾಯ್ದೆಯನ್ನು ಜಾರಿಗೆ ತರಲಾಗಿದ್ದು, 100 ವರ್ಷಗಳಿಗಿಂತ ಹಳೆಯದಾದ ಹಡಗು ಕಾನೂನುಗಳನ್ನು ತೆಗೆದುಹಾಕಲಾಗಿದೆ.
- 69,725 ಕೋಟಿ ರೂ.ಗಳ ಹಡಗು ನಿರ್ಮಾಣ ಮತ್ತು ಕಡಲ ಸುಧಾರಣಾ ಯೋಜನೆಗಳನ್ನು ಸೆಪ್ಟೆಂಬರ್ 2025 ರಲ್ಲಿ ಪ್ರಾರಂಭಿಸಲಾಗಿದೆ.
- ಈಶಾನ್ಯ ಭಾರತದಲ್ಲಿ ಒಳನಾಡು ಜಲಸಾರಿಗೆ ಮೂಲಸೌಕರ್ಯಗಳ ಅಭಿವೃದ್ಧಿಗೆ 1,000 ಕೋಟಿ ರೂ.ಗೂ ಹೆಚ್ಚು ಹೂಡಿಕೆ ಮಾಡಲಾಗಿದೆ.



**5.8** ಲಕ್ಷ ಕೋಟಿ ರೂಪಾಯಿಗಳನ್ನು 2035ರ ವೇಳೆಗೆ ಸಾಗರಮಾಲಾ ಯೋಜನೆಯಡಿ 840 ಯೋಜನೆಗಳಿಗೆ ವೆಚ್ಚಮಾಡಲಾಗುವುದು.

## ಫಲಿತಾಂಶಗಳು...

- ತರಬೇತಿ ಪಡೆದ ನಾವಿಕರ ವಿಶ್ವದ ಅಗ್ರ ಮೂರು ಪೂರೈಕೆದಾರರಲ್ಲಿ ಭಾರತವೂ ಒಂದಾಗಿದೆ. ಕಡಲ ಕಾರ್ಮಿಕರ ಸಂಖ್ಯೆ 1.25 ಲಕ್ಷದಿಂದ 3 ಲಕ್ಷಕ್ಕೆ ಏರಿದೆ, ಇದು ಜಾಗತಿಕ ಕಡಲ ಕಾರ್ಯಪಡೆಯ ಶೇ.12ನ್ನು ಪ್ರತಿನಿಧಿಸುತ್ತದೆ.
- ಕಾರ್ಯಾಚರಣೆಯ ಜಲಮಾರ್ಗಗಳ ಸಾಮರ್ಥ್ಯ 3 ರಿಂದ 32ಕ್ಕೆ ಏರಿದೆ. ನಮ್ಮ ಬಂದರುಗಳ ನಿವ್ವಳ ವಾರ್ಷಿಕ ಲಾಭ ಒಂಬತ್ತು ಪಟ್ಟು ಹೆಚ್ಚಾಗಿದೆ.
- ಭಾರತದ ಮೊದಲ ಆಳವಾದ ಸಮುದ್ರದ ಅಂತಾರಾಷ್ಟ್ರೀಯ ಸಾಗಣೆ ಕೇಂದ್ರವಾದ ವಿಝಿಂಜಮ್ ಬಂದರು ಕಾರ್ಯರೂಪಕ್ಕೆ ಬಂದಿದೆ. ವಿಶ್ವದ ಅತಿದೊಡ್ಡ ಕಂಟೇನರ್ ಹಡಗು ಇತ್ತೀಚೆಗೆ ಅಲ್ಲಿಗೆ ಆಗಮಿಸಿದೆ.
- 2024-25ರ ಆರ್ಥಿಕ ವರ್ಷದಲ್ಲಿ, ಪ್ರಮುಖ ಬಂದರುಗಳ ಮೂಲಕ ನಿರ್ವಹಿಸಲಾದ ಸರಕುಗಳು 85.5 ಕೋಟಿ ಟನ್ ಗಳನ್ನು ತಲುಪಿವೆ, ಇದು ಕಡಲ ವ್ಯಾಪಾರ ಮತ್ತು ಬಂದರು ದಕ್ಷತೆಯಲ್ಲಿ ಗಣನೀಯ ಹೆಚ್ಚಳವನ್ನು ಸೂಚಿಸುತ್ತದೆ.
- ಕಾಂಡ್ಲಾ ಬಂದರು ಹಸಿರು ಹೈಡ್ರೋಜನ್ ಸ್ಥಾವರವನ್ನು ಒಳಗೊಂಡ ಭಾರತದ ಮೊದಲ ಬಂದರು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಟರ್ಮಿನಲ್ ಹಂತ 2 ಅನ್ನು ಪ್ರಾರಂಭಿಸುವುದರೊಂದಿಗೆ, ಮುಂಬೈ ಅತಿದೊಡ್ಡ ಕಂಟೈನರ್ ಬಂದರು ಆಗಿದೆ.

**2047ರ** ವೇಳೆಗೆ ಕಡಲ ವಲಯವು ಸರಿಸುಮಾರು 8 ಟ್ರಿಲಿಯನ್ ರೂಪಾಯಿ ಮೌಲ್ಯದ ಹೂಡಿಕೆಗಳನ್ನು ಆಕರ್ಷಿಸುವ ಮತ್ತು ಸರಿಸುಮಾರು 1.5 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ.

ರಚಿಸಲಾಗಿದೆ, ಆದರೆ ಶತಮಾನಗಳ ನಂತರ ಜಗತ್ತು ಮೂರು-ಸ್ತಂಭದ ಹಡಗುಗಳನ್ನು ಬಳಸಲು ಪ್ರಾರಂಭಿಸಿತು. ಭಾರತದಲ್ಲಿ ನಿರ್ಮಿಸಲಾದ ಹಡಗುಗಳು ಜಾಗತಿಕ ವ್ಯಾಪಾರದ ಪ್ರಮುಖ ಭಾಗವಾಗಿದ್ದವು. ಈಗ, ಭಾರತವು ಮತ್ತೊಮ್ಮೆ ಹಡಗು ನಿರ್ಮಾಣದಲ್ಲಿ ಹೊಸ ಎತ್ತರವನ್ನು ತಲುಪುವ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿದೆ. ಛತ್ರಪತಿ ಶಿವಾಜಿ ಮಹಾರಾಜರು ಸಮುದ್ರಗಳು ಕೇವಲ ಗಡಿಗಳಲ್ಲ, ಅವಕಾಶಗಳ ಹೆಬ್ಬಾಗಿಲುಗಳು ಎಂಬುದನ್ನು ನಮಗೆ ತೋರಿಸಿದ್ದಾರೆ ಎಂದು ಪ್ರಧಾನಮಂತ್ರಿ ಮೋದಿ ಹೇಳಿದರು. ಇಂದು, ಭಾರತವು ಅದೇ ದೃಷ್ಟಿಕೋನದೊಂದಿಗೆ ಮುಂದುವರಿಯುತ್ತಿದೆ.

*ಪ್ರಧಾನಮಂತ್ರಿಯವರ ಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.*




# ಅಗತ್ಯವಿರುವ ಪ್ರತಿಯೊಬ್ಬರಿಗೂ ಮನೆ
# ವಸತಿ ಮತ್ತು ಉದ್ಯೋಗ

*ಒಂದು ಮನೆ - ಅಲ್ಲಿ ಕನಸುಗಳು ರೂಪುಗೊಳ್ಳುತ್ತವೆ. ಗುಣಮಟ್ಟದ ವಸತಿ ಒದಗಿಸಲು 2016ರಲ್ಲಿ ಪ್ರಾರಂಭಿಸಲಾದ ಪ್ರಧಾನಮಂತ್ರಿ ಗ್ರಾಮೀಣ ವಸತಿ ಯೋಜನೆ ನವೆಂಬರ್ 20ರಂದು ತನ್ನ 9ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಯೋಜನೆಯ ವಿಸ್ತರಣೆಯೊಂದಿಗೆ, ಪ್ರತಿ ಅರ್ಹ ಕುಟುಂಬವು ಈಗ ಮನೆಯನ್ನು ಪಡೆಯುತ್ತಿದೆ ಮತ್ತು ಉದ್ಯೋಗಾವಕಾಶಗಳು ಸಹ ಹೆಚ್ಚಾಗುತ್ತಿವೆ.*

ಮನೆ ಕೇವಲ ಒಬ್ಬರ ತಲೆಯ ಮೇಲಿರುವ ಛಾವಣಿಯಲ್ಲ, ಅದು ಒಬ್ಬರ ಸಾಮಾಜಿಕ, ಆರ್ಥಿಕ ಮತ್ತು ಭವಿಷ್ಯದ ಭದ್ರತೆಯನ್ನು ಬಲಪಡಿಸುವ ಆಶ್ರಯವೂ ಆಗಿದೆ. ಇದು ಕುಟುಂಬದ ವರ್ತಮಾನ ಮತ್ತು ಭವಿಷ್ಯವನ್ನು ನಿರ್ಧರಿಸುತ್ತದೆ. ಇದಕ್ಕಾಗಿಯೇ, 2014 ರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ರಚನೆಯಾದಾಗ, ಪ್ರಧಾನ ಮಂತ್ರಿ ವಸತಿ ಯೋಜನೆ-ನಗರವನ್ನು 2015 ರಲ್ಲಿ ಮತ್ತು ಪ್ರಧಾನ ಮಂತ್ರಿ ವಸತಿ ಯೋಜನೆ-ಗ್ರಾಮೀಣವನ್ನು 2016 ರಲ್ಲಿ ಪ್ರಾರಂಭಿಸಲಾಯಿತು. ಹೀಗಾಗಿ, ಬಡತನದ ವಿರುದ್ಧದ ಹೋರಾಟದಲ್ಲಿ ಮನೆಯ ಪರಿಕಲ್ಪನೆಯನ್ನು ಬಲವಾದ ಅಡಿಪಾಯವನ್ನಾಗಿ ಮಾಡಲಾಯಿತು ಮತ್ತು ಮೂಲಭೂತ ಅಗತ್ಯಗಳನ್ನು ಪೂರೈಸುವ ಸಾಧನವನ್ನಾಗಿ ಮಾಡಲಾಯಿತು. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು, "ಪ್ರಧಾನಮಂತ್ರಿ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಲಾಗುತ್ತಿರುವ ಮನೆಗಳು ಕೇವಲ ಒಂದು ಯೋಜನೆಗೆ ಸೀಮಿತವಾಗಿಲ್ಲ. ಅವು ಹಲವಾರು ಯೋಜನೆಗಳ ಗುಚ್ಛವಾಗಿವೆ. ಅವುಗಳಲ್ಲಿ ಸ್ವಚ್ಛ ಭಾರತ ಅಭಿಯಾನದಡಿ ನಿರ್ಮಿಸಲಾದ ಶೌಚಾಲಯಗಳು, ಸೌಭಾಗ್ಯ ಯೋಜನೆ ಮೂಲಕ ವಿದ್ಯುತ್ ಸಂಪರ್ಕಗಳು, ಉಜ್ವಲ ಯೋಜನೆಯಡಿ ಉಚಿತ ಎಲ್ ಪಿ ಜಿ ಸಂಪರ್ಕಗಳು ಮತ್ತು ಜಲ ಜೀವನ್ ಮಿಷನ್ ಅಡಿಯಲ್ಲಿ ನಲ್ಲಿ ನೀರು ಸರಬರಾಜು ಸೇರಿವೆ. ಈ ಹಿಂದೆ, ಬಡವರು ಈ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಒಂದು ಸರ್ಕಾರಿ ಕಚೇರಿಯಿಂದ ಮತ್ತೊಂದು ಸರ್ಕಾರಿ ಕಚೇರಿಗೆ ವರ್ಷಗಟ್ಟಲೆ ಅಲೆಯಬೇಕಾಗಿತ್ತು.

ಪ್ರಧಾನ ಮಂತ್ರಿ ವಸತಿ ಯೋಜನೆ-ಗ್ರಾಮೀಣ ಅಡಿಯಲ್ಲಿ, 2.95 ಕೋಟಿ ಮನೆಗಳು ಮತ್ತು ಹೆಚ್ಚುವರಿ 2 ಕೋಟಿ ಹೊಸ ಮನೆಗಳ ಆರಂಭಿಕ ಅನುಮೋದನೆಯೊಂದಿಗೆ, ಒಟ್ಟು 4.95 ಕೋಟಿ ಮನೆಗಳನ್ನು ನಿರ್ಮಿಸುವ ಗುರಿಯನ್ನು ನಿಗದಿಪಡಿಸಲಾಗಿದೆ. ಆಗಸ್ಟ್ 2025ರ

## ತಂತ್ರಜ್ಞಾನದ ಮೂಲಕ ಪಾರದರ್ಶಕತೆ ಹೆಚ್ಚಳ

ವಸತಿ + 2024 ಅಪ್ಲಿಕೇಶನ್, ಎಐ / ಎಂಎಲ್ ಆಧಾರಿತ ವಂಚನೆ ಪತ್ತೆಹಚ್ಚುವಿಕೆ, ಇ-ಕೆವೈಸಿ, ಆಧಾರ್ ಆಧಾರಿತ ನೇರ ಸವಲತ್ತು ವರ್ಗಾವಣೆ (ಡಿಬಿಟಿ), ಜಿಯೋ-ಟ್ಯಾಗ್ ಮಾಡಿದ ಛಾಯಾಚಿತ್ರಗಳು ಮತ್ತು ನೈಜ-ಸಮಯದ ನಿಗಾ ಡ್ಯಾಶ್ ಬೋರ್ಡ್ ಗಳ ಬಳಕೆಯೊಂದಿಗೆ, ಗ್ರಾಮೀಣ ಮತ್ತು ಹಿಂದುಳಿದ ಜನರಿಗೆ ಸಹಾಯ ಮಾಡುವುದು ಸುಲಭವಾಗಿದೆ, ಇದು ಹೆಚ್ಚಿನ ಪಾರದರ್ಶಕತೆಗೆ ಕಾರಣವಾಗುತ್ತಿದೆ. ಉದ್ದೇಶಿತ ಸ್ಥಳದಿಂದ ನಿರ್ಮಾಣದ ಅಂತ್ಯದವರೆಗೆ ಪ್ರತಿ ಹಂತದಲ್ಲೂ ಜಿಯೋ-ಟ್ಯಾಗ್ ಮಾಡಿದ ಮತ್ತು ಸಮಯ ಉಲ್ಲೇಖಿತ (ಟೈಮ್-ಸ್ಟ್ಯಾಂಪ್ಡ್) ಚಿತ್ರಗಳನ್ನು ಅಪ್ಲೋಡ್ ಮಾಡುವುದು ಕಡ್ಡಾಯವಾಗಿದೆ.

## ಯೋಜನೆ ಆಧಾರಿತ ಉದ್ಯೋಗ

ಪಿಎಂಎವೈ-ಜಿ (ಪ್ರಧಾನ ಮಂತ್ರಿ ವಸತಿ ಯೋಜನೆ - ಗ್ರಾಮೀಣ) ಅಡಿಯಲ್ಲಿ, ಪ್ರತಿ ಫಲಾನುಭವಿಗೆ ತಮ್ಮ ಮನೆ ನಿರ್ಮಾಣಕ್ಕಾಗಿ ಪ್ರಸ್ತುತ ದರದಲ್ಲಿ 90/95 ಮಾನವ ದಿನಗಳ ಕೌಶಲ್ಯರಹಿತ ವೇತನ ಉದ್ಯೋಗವನ್ನು ಕಡ್ಡಾಯವಾಗಿ ಎಂಜಿಎನ್ ಆರ್ ಜಿಎ ಸಮನ್ವಯದೊಂದಿಗೆ ಒದಗಿಸಲಾಗುತ್ತದೆ.



201 ಮಾನವ ದಿನಗಳ ಉದ್ಯೋಗ (56 ನುರಿತ 34 ಅರೆ-ನುರಿತ ಮತ್ತು 111 ಕೌಶಲ್ಯರಹಿತರಿಗೆ) ಒಂದು ಮನೆ ನಿರ್ಮಾಣದಿಂದ ಉತ್ಪತ್ತಿಯಾಗುತ್ತದೆ. ಪಿಎಂಎವೈ-ಜಿ ಅಡಿಯಲ್ಲಿ 2.83 ಕೋಟಿ ಮನೆಗಳ ನಿರ್ಮಾಣದೊಂದಿಗೆ ಕಳೆದ 9 ವರ್ಷಗಳಲ್ಲಿ 568 ಕೋಟಿಗೂ ಹೆಚ್ಚು ಮಾನವ ದಿನಗಳ ಉದ್ಯೋಗವನ್ನು ಸೃಷ್ಟಿಸಲಾಗಿದೆ.

- ಪಿಎಂಎವೈ-ಜಿ ಗ್ರಾಮೀಣ ಮೇಸ್ತ್ರಿ ತರಬೇತಿ ಕಾರ್ಯಕ್ರಮದ ಅಡಿಯಲ್ಲಿ, ಆಗಸ್ಟ್ 2025ರ ವೇಳೆಗೆ 2.97 ಲಕ್ಷ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. ಕೆಲವು ಪ್ರಮಾಣೀಕೃತ ಮೇಸ್ತ್ರಿಗಳು ವಿದೇಶದಲ್ಲಿ ಕೆಲಸ ಮಾಡುವ ಅವಕಾಶಗಳನ್ನು ಸಹ ಪಡೆದಿದ್ದಾರೆ.
- ಈ ಯೋಜನೆಯು ಮನೆ ನಿರ್ಮಾಣಕ್ಕಾಗಿ ಕಟ್ಟಡ ಸಾಮಗ್ರಿಗಳ ಉತ್ಪಾದನೆ ಮತ್ತು ಸಾಗಣೆಯ ಮೂಲಕ ಗಮನಾರ್ಹ ಪರೋಕ್ಷ ಉದ್ಯೋಗವನ್ನು ಸೃಷ್ಟಿಸಿದೆ.

## ಬಾಡಿಗೆ ವಸತಿ

ಪ್ರಧಾನ ಮಂತ್ರಿ ವಸತಿ ಯೋಜನೆ (ಪಿಎಂಎವೈ-ಜಿ) - ನಗರ ಕಾರ್ಮಿಕರಿಗೆ ಕೈಗೆಟುಕುವ ಬಾಡಿಗೆ ವಸತಿ ಸಂಕೀರ್ಣಗಳ ಯೋಜನೆಗೆ ಚಾಲನೆ ನೀಡಲಾಗಿದೆ.

**41,000+**
ಮನೆಗಳು ಪೂರ್ಣಗೊಂಡಿವೆ. ಯೋಜನೆಯಡಿ ಒಟ್ಟು 82,273 ಹೊಸ ಮನೆಗಳಿಗೆ ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆ.




### ಗ್ರಾಮೀಣ ಭಾರತದಲ್ಲಿ ಪಕ್ಕಾ ಮನೆಗಳು... ಕನಸು ರೂಪುಗೊಳ್ಳುತ್ತಿದೆ

ಪ್ರಧಾನ ಮಂತ್ರಿ ವಸತಿ ಯೋಜನೆ(ಪಿಎಂಎವೈ-ಜಿ) - ಗ್ರಾಮೀಣ ಅನ್ನು ನವೆಂಬರ್ 20, 2016ರಂದು ಪ್ರಾರಂಭಿಸಲಾಯಿತು, ಆದರೆ ಏಪ್ರಿಲ್ 1, 2016 ರಿಂದಲೇ ಜಾರಿಗೆ ಬಂದಿತ್ತು. ಫಲಾನುಭವಿಗಳನ್ನು ಮೂರು ಹಂತಗಳ ಮೂಲಕ ಆಯ್ಕೆ ಮಾಡಲಾಗುತ್ತದೆ: ಸಾಮಾಜಿಕ-ಆರ್ಥಿಕ ಸ್ಥಿತ ಆಧಾರಿತ 2011ರ ಜನಗಣತಿ, ಗ್ರಾಮಸಭೆಯ ಅನುಮೋದನೆ ಮತ್ತು ಜಿಯೋ-ಟ್ಯಾಗಿಂಗ್.

**4.95** ಕೋಟಿ ಒಟ್ಟು ಗುರಿ

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ **4.12** ಕೋಟಿ ಮನೆಗಳನ್ನು ಹಂಚಿಕೆ ಮಾಡಲಾಗಿದೆ

**3.85** ಕೋಟಿ ಮಂಜೂರು ಮಾಡಲಾಗಿದೆ. 2.83 ಕೋಟಿ ಮನೆಗಳು ಪೂರ್ಣಗೊಂಡಿವೆ.

- ಆಗಸ್ಟ್ 2025ರ ವೇಳೆಗೆ ಕೇಂದ್ರವು 2,61,432 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.
- 2 ಕೋಟಿ ಹೆಚ್ಚುವರಿ ಮನೆಗಳಿಗೆ 3.06 ಲಕ್ಷ ಕೋಟಿ ರೂ.

### ಪಿಎಂಎವೈ-ನಗರ 2.0 ನಲ್ಲಿ ₹10 ಲಕ್ಷ ಕೋಟಿ ಹೂಡಿಕೆ

ಪಿಎಂಎವೈ-ನಗರ 2.0 ನಲ್ಲಿ 2.20 ಲಕ್ಷ ಕೋಟಿ ರೂ.ಗಳ ಕೇಂದ್ರದ ನೆರವಿನೊಂದಿಗೆ 1 ಕೋಟಿ ನಗರ ನಿರ್ವಸತಿ ಕುಟುಂಬಗಳ ವಸತಿ ಅಗತ್ಯಗಳನ್ನು ಪೂರೈಸುವ ಗುರಿ ಹೊಂದಿದೆ. ಈ ಯೋಜನೆಯನ್ನು ಜೂನ್ 15, 2015ರಂದು ಪ್ರಾರಂಭಿಸಲಾಯಿತು.

**95.51** ಲಕ್ಷ ಮನೆಗಳು ಪೂರ್ಣಗೊಂಡಿವೆ.

2025ರ ಅಕ್ಟೋಬರ್ 22ರೊಳಗೆ **1.21** ಕೋಟಿ ಮನೆಗಳಿಗೆ ಅನುಮೋದನೆ

**16+** ಲಕ್ಷ ಆಧುನಿಕ ಲೈಟ್ ಹೌಸ್ ಗಳನ್ನು ನಿರ್ಮಿಸಲಾಗಿದೆ.

ಒಟ್ಟು ಹೂಡಿಕೆ 22 ಪಟ್ಟು ಹೆಚ್ಚಾಗಿದೆ

| | |
|---|---|
| 2014 | **0.38** ಲಕ್ಷ ಕೋಟಿ ರೂಪಾಯಿ |
| 2025 | **8.29** ಲಕ್ಷ ಕೋಟಿ ರೂಪಾಯಿ |

ಹೊತ್ತಿಗೆ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 4.12 ಕೋಟಿ ಮನೆಗಳನ್ನು ಹಂಚಿಕೆ ಮಾಡಲಾಗಿದ್ದು, ಅದರಲ್ಲಿ 3.85 ಕೋಟಿ ಮನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಪೈಕಿ 2.83 ಕೋಟಿ ಮನೆಗಳು ಪೂರ್ಣಗೊಂಡಿವೆ. ಪ್ರಧಾನ ಮಂತ್ರಿ ವಸತಿ ಯೋಜನೆ-ಗ್ರಾಮೀಣ ಅಡಿಯಲ್ಲಿ ದೀನದಲಿತರಿಗೆ ನೀಡಿದ ಆದ್ಯತೆಯ ಭಾಗವಾಗಿ, ಆಗಸ್ಟ್ 2025ರ ವೇಳೆಗೆ 268,480 ಭೂರಹಿತ ಫಲಾನುಭವಿಗಳಿಗೆ ಮನೆಗಳನ್ನು ಮಂಜೂರು ಮಾಡಲಾಗಿದೆ. ಈ ಯೋಜನೆಯು ಕಳೆದ ಒಂಬತ್ತು ವರ್ಷಗಳಲ್ಲಿ 568 ಕೋಟಿ ಮಾನವ ದಿನಗಳ ಉದ್ಯೋಗವನ್ನು ಸೃಷ್ಟಿಸಿದೆ ಮತ್ತು 2028-29ರ ವೇಳೆಗೆ 2 ಕೋಟಿ ಹೆಚ್ಚುವರಿ ಮನೆಗಳ ನಿರ್ಮಾಣದಿಂದ ಸುಮಾರು 10 ಕೋಟಿ ಜನರಿಗೆ ಪ್ರಯೋಜನವಾಗುವ ನಿರೀಕ್ಷೆಯಿದೆ. ಮನೆಗಳ ತ್ವರಿತ ನಿರ್ಮಾಣವನ್ನು ಖಚಿತಪಡಿಸಿಕೊಳ್ಳಲು ಆಧುನಿಕ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಹೊಸ ಮನೆ ನಿರ್ಮಾಣ ತಂತ್ರಜ್ಞಾನಗಳು ಕೈಗೆಟುಕುವ, ಸಮರ್ಥನೀಯ ಮತ್ತು ಹೊಸ ವಸತಿಯ ಕನಸನ್ನು ಎಲ್ಲರಿಗೂ ನನಸಾಗಿಸುತ್ತಿವೆ. ಪ್ರಧಾನ ಮಂತ್ರಿ ವಸತಿ ಯೋಜನೆ ಅಡಿಯಲ್ಲಿ ಶೇ.70ರಷ್ಟು ಮನೆಗಳು ಮಹಿಳಾ ಫಲಾನುಭವಿಗಳ ಹೆಸರಿನಲ್ಲಿವೆ. ಪ್ರಧಾನ ಮಂತ್ರಿ ವಸತಿ ಯೋಜನೆ - ಗ್ರಾಮೀಣ ಯೋಜನೆಯು ಶೇ.60 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಶೇ.15 ರಷ್ಟು ಅಲ್ಪಸಂಖ್ಯಾತರಿಗೆ ಮನೆಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.









## 51,000 ನೇಮಕಾತಿ ಪತ್ರಗಳ ವಿತರಣೆ

# ಯುವಶಕ್ತಿಯೇ ಅತಿ ದೊಡ್ಡ ಶಕ್ತಿ

*ಭಾರತದ ಯುವಜನರು ದೇಶದ ಶಕ್ತಿ ಮತ್ತು ಸಾಮರ್ಥ್ಯದ ನಿಜವಾದ ಸಂಕೇತ. ಇದಕ್ಕಾಗಿಯೇ ಕೇಂದ್ರ ಸರ್ಕಾರವು ವಾಸ್ತವ ಸಾಧ್ಯವಾದ ಮುದ್ರಾ ಯೋಜನೆ, ಕೌಶಲ್ಯ ಭಾರತ, ಸ್ಟಾರ್ಟ್‌ಅಪ್ ಇಂಡಿಯಾದಂತಹ ಉಪಕ್ರಮಗಳನ್ನು ಕೈಗೊಂಡಿದೆ. ಮತ್ತೊಂದೆಡೆ, ರೋಜ್ ಗಾರ್ ಮೇಳಗಳ ಮೂಲಕ, ಸುಮಾರು 11 ಲಕ್ಷ ನೇಮಕಾತಿಗಳನ್ನು ಈಗಾಗಲೇ ಮಾಡಲಾಗಿದೆ. ಈ ಪ್ರಯತ್ನವನ್ನು ಮುಂದುವರಿಸುತ್ತಾ, ಅಕ್ಟೋಬರ್ 24 ರಂದು 51,000 ಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ.*

ಭಾರತದ ಅತ್ಯಂತ ದೊಡ್ಡ ಆಸ್ತಿ ಎಂದರೆ ಅದರ ಯುವ ಮಾನವ ಸಂಪನ್ಮೂಲ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಈ ದೃಷ್ಟಿಕೋನವು ಕೇಂದ್ರ ಸರ್ಕಾರದ ನೀತಿಗಳಲ್ಲಿ ಸ್ಪಷ್ಟವಾಗಿ ಪ್ರತಿಫಲಿತವಾಗಿದ್ದು, ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯೋಗ ಮತ್ತು ಸ್ವಾವಲಂಬನೆಯ ದಿಸೆಯಲ್ಲಿನ ಪ್ರತಿಯೊಂದು ಉಪಕ್ರಮವೂ ದೇಶದ ಯುವಜನರ ಸುತ್ತ ಕೇಂದ್ರೀಕೃತವಾಗಿದೆ.

ಒಂದೆಡೆ, ಸ್ಕಿಲ್ ಇಂಡಿಯಾ ಮಿಷನ್ ನಂತಹ ಅಭಿಯಾನಗಳು ಯುವಜನರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುತ್ತಿದ್ದರೆ, ಮತ್ತೊಂದೆಡೆ ರೋಜ್ಗಾರ್ ಮೇಳ ಮತ್ತು ರಾಷ್ಟ್ರೀಯ ವೃತ್ತಿ ಸೇವಾ ವೇದಿಕೆಯಂತಹ ಉಪಕ್ರಮಗಳು ಯುವಸಮೂಹವನ್ನು ಹೊಸ ಅವಕಾಶಗಳೊಂದಿಗೆ ಸಂಪರ್ಕಿಸುತ್ತಿವೆ. ಆದಾಗ್ಯೂ, ಕೇಂದ್ರ ಸರ್ಕಾರದ ಪ್ರಯತ್ನಗಳು ಸರ್ಕಾರಿ ಉದ್ಯೋಗಗಳಿಗೆ ಮಾತ್ರ ಸೀಮಿತವಾಗಿಲ್ಲ. ಸರ್ಕಾರವು 3.5 ಕೋಟಿ ಯುವಜನರಿಗೆ ಉದ್ಯೋಗ ಒದಗಿಸುವ ಗುರಿ ಹೊಂದಿರುವ ಪ್ರಧಾನಮಂತ್ರಿ ವಿಕಸಿತ ಭಾರತ ರೋಜ್ಗಾರ್ ಯೋಜನೆಯನ್ನು ಸಹ ಪ್ರಾರಂಭಿಸಿದೆ.

ರೋಜ್ಗಾರ್ ಮೇಳದಲ್ಲಿ ಯುವಜನರನ್ನು ಉದ್ದೇಶಿಸಿ ಮಾತನಾಡುತ್ತಾ ಭಾರತದ ಯುವಸಮೂಹದ ಆಕಾಂಕ್ಷೆಗಳನ್ನು ಈಡೇರಿಸುವ ಈ ಬದ್ಧತೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಒತ್ತಿ ಹೇಳಿದರು.

ಭಾರತವು ತನ್ನ ಯುವಜನರ ಸಾಮರ್ಥ್ಯವನ್ನು ತನ್ನ ದೊಡ್ಡ ಶಕ್ತಿ ಎಂದು ಗುರುತಿಸುತ್ತಾ ಪ್ರತಿಯೊಂದು ಕ್ಷೇತ್ರದಲ್ಲೂ ಮುನ್ನಡೆಯುತ್ತಿದೆ ಎಂದು ಅವರು ಹೇಳಿದರು. ನಮ್ಮ ವಿದೇಶಾಂಗ ನೀತಿಯನ್ನು ಸಹ ಭಾರತದ ಯುವಸಮೂಹದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗುತ್ತಿದೆ. ರಾಜತಾಂತ್ರಿಕ

# ಯುವಸಮೂಹಕ್ಕಾಗಿ ಪ್ರಮುಖ ಹೆಜ್ಜೆ
## 'ಪ್ರತಿಭಾ ಸೇತು ವೇದಿಕೆ'

ಉದ್ಯೋಗ, ಕೌಶಲ್ಯ ಮತ್ತು ಕೈಗಾರಿಕೆಗಳನ್ನು ಸಂಪರ್ಕಿಸುವ ಕೇಂದ್ರ ಸರ್ಕಾರದ ಪ್ರಮುಖ ಉಪಕ್ರಮವಾದ 'ಪ್ರತಿಭಾ ಸೇತು ಪೋರ್ಟಲ್' ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರಸ್ತಾಪಿಸಿದ್ದಾರೆ. ಯು ಪಿ ಎಸ್ ಸಿ ಅಂತಿಮ ಪಟ್ಟಿಯಲ್ಲಿ ಹೆಸರಿದ್ದರೂ ಸೇವೆಗೆ ಆಯ್ಕೆಯಾಗದ ಅಭ್ಯರ್ಥಿಗಳ ಕಠಿಣ ಪರಿಶ್ರಮ ಇನ್ನು ಮುಂದೆ ವ್ಯರ್ಥವಾಗುವುದಿಲ್ಲ ಎಂದು ಅವರು ವಿಶ್ವಾಸದಿಂದ ನುಡಿದಿದ್ದಾರೆ. ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳು ಈಗ  ಪ್ರತಿಭಾ ಪೋರ್ಟಲ್ ಮೂಲಕ ಈ ಪ್ರತಿಭಾನ್ವಿತರೊಂದಿಗೆ ಸಂಪರ್ಕ ಸಾಧಿಸುತ್ತಿದ್ದು, ಈ ಪೋರ್ಟಲ್ ಮೂಲಕ ಈ ಯುವಕರನ್ನು ಆಹ್ವಾನಿಸಿ ಸಂದರ್ಶನ ಮಾಡಿ, ಅವರಿಗೆ ಉದ್ಯೋಗಾವಕಾಶಗಳನ್ನು ಒದಗಿಸುತ್ತಿವೆ.

## ರಾಷ್ಟ್ರ ನಿರ್ಮಾಣದ ಅವಕಾಶ

ಐಗಾಟ್ (iGot) ಕರ್ಮಯೋಗಿ ಭಾರತ್ ವೇದಿಕೆ ಸೇರ್ಪಡೆ ಮೂಲಕ ಸುಮಾರು 15 ದಶಲಕ್ಷ ಉದ್ಯೋಗಿಗಳು ತಮ್ಮ ಕೌಶಲ್ಯಗಳನ್ನು ಉನ್ನತೀಕರಿಸಿಕೊಂಡಿದ್ದಾರೆ.




**3,600** ಕ್ಕೂ ಹೆಚ್ಚು ಉನ್ನತ ಗುಣಮಟ್ಟದ ಕೋರ್ಸ್ ಗಳು ಲಭ್ಯವಿದೆ.

- ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಲಕ್ಷಾಂತರ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿವೆ.
- ಸಮಾನ ಅವಕಾಶಗಳಿಗಾಗಿ 13 ಪ್ರಾದೇಶಿಕ ಭಾಷೆಗಳಲ್ಲಿ ನೇಮಕಾತಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.
- ಯು ಪಿ ಎಸ್ ಸಿ, ಎಸ್ ಎಸ್ ಸಿ, ರೈಲ್ವೆ ನೇಮಕಾತಿ ಮಂಡಳಿ ಮತ್ತು ಐ ಬಿ ಪಿ ಎಸ್ ನಂತಹ ಪ್ರತಿಷ್ಠಿತ ಏಜೆನ್ಸಿಗಳ ಮೂಲಕ ನೇಮಕಾತಿಗಳನ್ನು ಮಾಡಲಾಗುತ್ತಿದೆ.
- ಪಾರದರ್ಶಕ ಮತ್ತು ಸಕಾಲಿಕ ನೇಮಕಾತಿ ಪ್ರಕ್ರಿಯೆಯನ್ನು ಖಚಿತಪಡಿಸಿಕೊಳ್ಳುತ್ತಾ ಪ್ರಶ್ನೆಪತ್ರಿಕೆ ಸೋರಿಕೆಯ ವಿರುದ್ಧ ಕಠಿಣ ಕಾನೂನುಗಳನ್ನು ಅನುಷ್ಠಾನ ಮಾಡಲಾಗಿದೆ.
- ರಾಷ್ಟ್ರ ನಿರ್ಮಾಣದಲ್ಲಿ ಯುವಜನರ ಪಾಲ್ಗೊಳ್ಳುವಿಕೆ ಮೂಲಕ – "ನಾಗರಿಕರು ಮೊದಲು" ಮುನ್ನೋಟವು ಸಾಕಾರಗೊಳ್ಳುತ್ತಿದೆ.
- ಮಹತ್ವಾಕಾಂಕ್ಷಿ ಜಿಲ್ಲೆಗಳ ಮಹಿಳೆಯರು, ಅಂಗವಿಕಲರು ಮತ್ತು ಅಭ್ಯರ್ಥಿಗಳಿಗೆ ವಿಶೇಷ ಸವಲತ್ತುಗಳನ್ನು ಒದಗಿಸಲಾಗುತ್ತಿದೆ.




## ಯುವಜನರಿಗೆ ಸರ್ಕಾರಿ ಉದ್ಯೋಗ ಒದಗಿಸಲು ರೋಜ್ಗಾರ್ ಮೇಳ




ಮಾತುಕತೆಗಳು ಮತ್ತು ಜಾಗತಿಕ ಒಡಂಬಡಿಕೆಗಳು ಯುವಜನರಿಗೆ ತರಬೇತಿ, ಕೌಶಲ್ಯವರ್ಧನೆ ಮತ್ತು ಉದ್ಯೋಗ ಸೃಷ್ಟಿಯನ್ನು ಪ್ರಧಾನವಾಗಿಸಿವೆ. ದೇಶದ ಯಶಸ್ಸು ಮತ್ತು ಭವಿಷ್ಯದ ಮುನ್ನೋಟದಲ್ಲಿ ಯುವಕರು ಪ್ರಮುಖ ಪಾತ್ರ ವಹಿಸುವರು ಎಂದು ಹೇಳಿರುವ ಪ್ರಧಾನಮಂತ್ರಿ ಮೋದಿ ಅವರು, ದೇಶವು ನಿರಂತರವಾಗಿ ವಿಕಸಿತ ಭಾರತದ ಗುರಿ ಸಾಕಾರದತ್ತ ಕಾರ್ಯ ನಿರ್ವಹಿಸುತ್ತಿದ್ದು ಯುವ ಕರ್ಮಯೋಗಿಗಳು (ನಿಸ್ವಾರ್ಥ ಕಾರ್ಯಕರ್ತರು) ಈ ದೂರದೃಷ್ಟಿಯ ನೋಟವನ್ನು ವಾಸ್ತವದಲ್ಲಿ ಸಾಕಾರಗೊಳಿಸುವರು ಎಂದು ಭರವಸೆ ವ್ಯಕ್ತಪಡಿಸಿದ್ದಾರೆ.

"ಇಂದು, ನೀವು ಕೇವಲ ಸರ್ಕಾರಿ ನೇಮಕಾತಿಯನ್ನು ಪಡೆದಿಲ್ಲ; ರಾಷ್ಟ್ರದ ಸೇವೆಗೆ ಸಕ್ರಿಯವಾಗಿ ಕೊಡುಗೆ ನೀಡಲು ನಿಮಗೆ ಅವಕಾಶ ಸಿಕ್ಕಿದೆ. ನೀವು ಈ ಮನೋಭಾವದೊಂದಿಗೆ ಪ್ರಾಮಾಣಿಕತೆ ಮತ್ತು ಸಮಗ್ರತೆಯೊಂದಿಗೆ ಕಾರ್ಯ ನಿರ್ವಹಿಸುವಿರಿ ಮತ್ತು ಭವಿಷ್ಯದ ಭಾರತಕ್ಕಾಗಿ ಉತ್ತಮ ವ್ಯವಸ್ಥೆಯನ್ನು ನಿರ್ಮಿಸಲು ನೀವು ಸಹಾಯ ಮಾಡುವಿರಿ ಎಂಬ ವಿಶ್ವಾಸವಿದೆ" ಎಂದೂ ಪ್ರಧಾನಮಂತ್ರಿಗಳು ಆತ್ಮವಿಶ್ವಾಸದಿಂದ ನುಡಿದಿದ್ದಾರೆ. ಯುವಕರಿಗೆ ಸಂದೇಶ ನೀಡುತ್ತಾ ಅವರು, 'ನಮ್ಮದು ನಾಗರಿಕ ದೇವೋ ಭವ' ಎಂಬ ಮಂತ್ರ ಎಂಬುದು ನಿಮಗೆ ತಿಳಿದಿದೆ. ಆದ್ದರಿಂದ, ಸೇವಾ ಮನೋಭಾವ ಮತ್ತು ಸಮರ್ಪಣೆಯೊಂದಿಗೆ, ಪ್ರತಿಯೊಬ್ಬ ನಾಗರಿಕರಿಗೆ ಜೀವನದಲ್ಲಿ ಹೇಗೆ ನೆರವಾಗಬಲ್ಲದಾಗಿದೆ ಎಂಬುದನ್ನು ನೀವು ಎಂದಿಗೂ ಮರೆಯಬಾರದು" ಎಂದು ಕರೆ ನೀಡಿದ್ದಾರೆ.

*ಪ್ರಧಾನಮಂತ್ರಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ*






# ಒಂದು ರಾಷ್ಟ್ರ, ಸಂಕಲ್ಪ ಅಚಲ

*ಸ್ವಾತಂತ್ರ್ಯಾ ನಂತರ ದೇಶದ ಗೃಹ ಸಚಿವರಾಗಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು 550ಕ್ಕೂ ಹೆಚ್ಚು ರಾಜಪ್ರಭುತ್ವದ ರಾಜ್ಯಗಳನ್ನು ಒಗ್ಗೂಡಿಸುವ ಮೂಲಕ ರಾಷ್ಟ್ರೀಯ ಏಕತೆ ಮತ್ತು ಸಬಲೀಕರಣಕ್ಕೆ ಅಡಿಪಾಯ ಹಾಕಿದರು. ಇಂದಿಗೂ ಇದನ್ನು ಮಹತ್ವದ ಉದಾಹರಣೆಯನ್ನಾಗಿ ಉಲ್ಲೇಖಿಸಲಾಗುತ್ತದೆ. ಏಕ ಭಾರತ - ಶ್ರೇಷ್ಠ ಭಾರತ ಎಂಬ ಪರಿಕಲ್ಪನೆಯು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಅತ್ಯಂತ ಪ್ರಮುಖವಾಗಿತ್ತು ಎಂದು ರಾಷ್ಟ್ರೀಯ ಏಕತಾ ದಿನ ಮತ್ತು ಪಟೇಲರ 150 ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸ್ಮರಿಸಿದ್ದಾರೆ.*

ಇತಿಹಾಸ ಬರೆಯುವಲ್ಲಿ ಸಮಯ ವ್ಯರ್ಥ ಮಾಡಬಾರದು; ಇತಿಹಾಸ ನಿರ್ಮಿಸಲು ಶ್ರಮಿಸಬೇಕು ಎಂದು ಸರ್ದಾರ್ ಪಟೇಲ್ ನಂಬಿದ್ದರು. ಈ ಮನೋಭಾವವು ಅವರ ಜೀವನದುದ್ದಕ್ಕೂ ಪ್ರತಿಫಲಿತವಾಗಿದೆ. ಸರ್ದಾರ್ ಸಾಹೇಬರು ರೂಪಿಸಿದ ನೀತಿಗಳು ಮತ್ತು ಅವರು ತೆಗೆದುಕೊಂಡ ನಿರ್ಧಾರಗಳು ಹೊಸ ಇತಿಹಾಸ ಸೃಷ್ಟಿಸಿದವು. ಅಲ್ಲದೆ, ಅವರು ರಾಜಪ್ರಭುತ್ವದ ರಾಜ್ಯಗಳನ್ನು ಏಕೀಕರಿಸುವ ಮೂಲಕ ದೇಶದ ಏಕತೆ ಮತ್ತು ಭದ್ರತೆಯನ್ನು ಬಲಪಡಿಸಿದರು. ಸಹಕಾರಿ ಸಂಸ್ಥೆಗಳೊಂದಿಗೆ ರೈತರು ಮತ್ತು ಹಿಂದುಳಿದ ವರ್ಗದವರನ್ನು ಸಂಪರ್ಕಿಸಿದ್ದು ದೇಶವು ಸ್ವ-ಉದ್ಯೋಗ ಮತ್ತು ಸ್ವಾವಲಂಬನೆಯತ್ತ ಪ್ರಗತಿ ಸಾಧಿಸಲು ಸಾಧ್ಯವಾಗಿ ನ್ಯಾಯದಲ್ಲಿ ನಂಬಿಕೆ ಮತ್ತು ಸಮಾನ ಬಂಧದಿಂದ ಒಗ್ಗೂಡಿದ ರಾಷ್ಟ್ರ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟಿತು.

ಸರ್ದಾರ್ ಪಟೇಲರ ಜನ್ಮ ದಿನಾಚರಣೆ ಸ್ವಾಭಾವಿಕವಾಗಿಯೇ ರಾಷ್ಟ್ರೀಯ ಏಕತೆಯ ಭವ್ಯ ಹಬ್ಬವಾಗಿದೆ ಎಂದು ಗುಜರಾತ್ನ ಕೆವಾಡಿಯಾದಲ್ಲಿ ನಡೆದ ರಾಷ್ಟ್ರೀಯ ಏಕತಾ ದಿನ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಬಣ್ಣಿಸಿದರು.

ನಾವು, 140 ಕೋಟಿ ದೇಶವಾಸಿಗಳು ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನ ಮತ್ತು ಜನವರಿ 26 ರಂದು ಗಣರಾಜ್ಯೋತ್ಸವವನ್ನು ಆಚರಿಸುವಂತೆಯೇ, ಏಕತಾ ದಿನವು ನಮಗೆ ಸ್ಫೂರ್ತಿ ಮತ್ತು ಹೆಮ್ಮೆಯ ಮಹತ್ವದ ಕ್ಷಣವಾಗಿದೆ. ಇಂದು, ಕೋಟ್ಯಂತರ ಜನರು ಏಕತೆಯ ಪ್ರತಿಜ್ಞೆ ಮಾಡಿದ್ದಾರೆ ಮತ್ತು ದೇಶದ ಒಗ್ಗಟ್ಟನ್ನು ಬಲಪಡಿಸುವಂತಹ ಕಾರ್ಯಗಳನ್ನು ಉತ್ತೇಜಿಸಲು ನಾವು ಸಂಕಲ್ಪ ಮಾಡಿದ್ದೇವೆ.

ಭಾರತದ ಏಕೀಕರಣದ ಹಿಂದಿನ ಪ್ರೇರಕ ಶಕ್ತಿಯಾಗಿದ್ದ ಸರ್ದಾರ್ ಪಟೇಲ್ ಅವರು ದೇಶದ ರಚನಾತ್ಮಕ ವರ್ಷಗಳಲ್ಲಿ ಅದರ ಭವಿಷ್ಯವನ್ನು ರೂಪಿಸಿದರು. ರಾಷ್ಟ್ರೀಯ ಸಮಗ್ರತೆ, ಉತ್ತಮ ಆಡಳಿತ ಮತ್ತು ಸಾರ್ವಜನಿಕ ಸೇವೆಗೆ ಅವರ ಬದ್ಧತೆ ಅಚಲವಾಗಿತ್ತು. 2014ರ ನಂತರ, ದೇಶವು ಮತ್ತೊಮ್ಮೆ ಅವರ ಸ್ಫೂರ್ತಿದಾಯಕ ಉಕ್ಕಿನ ಸಂಕಲ್ಪಕ್ಕೆ ಸಾಕ್ಷಿಯಾಗಿದೆ ಎಂದು ಪ್ರಧಾನಮಂತ್ರಿ ಮೋದಿ ಸ್ಪಷ್ಟಪಡಿಸಿದರು. ಇಂದು, ಕಾಶ್ಮೀರವು 370 ನೇ ವಿಧಿಯ ಸಂಕೋಲೆಗಳಿಂದ ಮುಕ್ತವಾಗಿದೆ ಮತ್ತು

## ಈ ನಿರ್ಣಯಗಳು ಪ್ರಧಾನಿಯವರಿಗೆ ಹೆಮ್ಮೆ

- ಸರ್ದಾರ್ ಪಟೇಲ್ ಅವರ ಗೌರವಾರ್ಥ ಏಕತಾ ಪ್ರತಿಮೆ ನಿರ್ಮಾಣ ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸಮರ್ಪಿತವಾದ ಪಂಚತೀರ್ಥ ಸ್ಥಾಪನೆ.
- ಎಲ್ಲಾ ಮಾಜಿ ಪ್ರಧಾನಮಂತ್ರಿಗಳ ಕೊಡುಗೆಗಳನ್ನು ಗೌರವಿಸಲು ಪ್ರಧಾನಮಂತ್ರಿ ಸಂಗ್ರಹಾಲಯ ನಿರ್ಮಾಣ.
- ಕರ್ಪೂರಿ ಠಾಕೂರ್ ಮತ್ತು ಪ್ರಣಬ್ ಮುಖರ್ಜಿ ಅವರಿಗೆ ಭಾರತ ರತ್ನ ಪ್ರದಾನ; ಮುಲಾಯಂ ಸಿಂಗ್ ಯಾದವ್ ಅವರಂತಹ ನಾಯಕರಿಗೆ ಪದ್ಮ ಪ್ರಶಸ್ತಿ ಪುರಸ್ಕಾರ.

## ಭಾರತದ ಏಕತೆಯ ನಾಲ್ಕು ಸ್ತಂಭಗಳು

- **ಪ್ರಥಮ ಸ್ತಂಭ –** ಸಾಂಸ್ಕೃತಿಕ ಏಕತೆ
- **ದ್ವಿತೀಯ –** ಭಾಷಾ ಏಕತೆ
- **ತೃತೀಯ -** ತಾರತಮ್ಯ-ಮುಕ್ತ ಅಭಿವೃದ್ಧಿ
- **ಚತುರ್ಥ ಸ್ತಂಭ –** ಸಂಪರ್ಕದ ಮೂಲಕ ಹೃದಯ ಬಾಂಧವ್ಯ

## ಕೆವಾಡಿಯಾದಲ್ಲಿ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸ

ಸರ್ದಾರ್ ಪಟೇಲ್ ಅವರ 150ನೇ ಜನ್ಮ ದಿನಾಚರಣೆಯ ಮುನ್ನಾದಿನದಂದು ಕೆವಾಡಿಯಾದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು

**1,219**

ಕೋಟಿ ರೂಪಾಯಿ ಮೌಲ್ಯದ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು.



ಸಾರ್ವಜನಿಕರಿಗೆ ಆರಾಮದಾಯಕ ಮತ್ತು ಸುಧಾರಿತ ಸಾರಿಗೆ ಸೌಲಭ್ಯಗಳನ್ನು ಒದಗಿಸುವ ವಿದ್ಯುತ್ ಬಸ್ ಗಳ ಸಮೂಹಕ್ಕೆ ಚಾಲನೆ ನೀಡಲಾಗಿದೆ.

- ಭಗವಾನ್ ಬಿರ್ಸಾ ಮುಂಡಾ ಅವರಿಗೆ ಸಮರ್ಪಿತವಾದ ಮಾದರಿ ಕೇಂದ್ರವಾದ ಬಿರ್ಸಾ ಮುಂಡಾ ಭವನ; ಆತಿಥ್ಯ ವಲಯದ ಮೊದಲ ಹಂತದಲ್ಲಿ ಉದ್ಯೋಗಿಗಳಿಗೆ ವಸತಿ ಸಂಕೀರ್ಣ; ಮತ್ತು ಬೋನ್ಸಾಯಿ ಉದ್ಯಾನವನ ಈ ಯೋಜನೆಗಳ ಪೈಕಿ ಸೇರಿವೆ.
- ಭಾರತದ ಉಕ್ಕಿನ ಮನುಷ್ಯರಾದ ಪಟೇಲರಿಗೆ ಗೌರವ ಸೂಚಕವಾಗಿ ವಿಶೇಷ ಸ್ಮರಣಾರ್ಥ ನಾಣ್ಯ ಮತ್ತು ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಯಿತು. ಪ್ರಧಾನಿ ಮೋದಿ ಅವರು ಸರ್ದಾರ್ ಪಟೇಲ್ ಅವರ ಕುಟುಂಬ ಸದಸ್ಯರನ್ನೂ ಭೇಟಿಯಾದರು.



**“ಭಾರತದ ಏಕತೆಯ ಬಗೆಗಿನ ಪಟೇಲರ ದೃಷ್ಟಿಕೋನದ ಪ್ರಬಲ ಸಂಕೇತವೇ ಏಕತಾ ಪ್ರತಿಮೆ. ಇದು ರಾಷ್ಟ್ರದ ಗರಿಮೆಯ ಸೆಲೆಯಾಗಿದೆ ಮತ್ತು ಸರ್ದಾರ್ ಪಟೇಲ್ ಅವರ ಕನಸುಗಳನ್ನು ನನಸಾಗಿಸುವ ನಮ್ಮ ಸಾಮೂಹಿಕ ಸಂಕಲ್ಪದ ಪ್ರೇರಕ ಶಕ್ತಿಯಾಗಿದೆ.**

**ನರೇಂದ್ರ ಮೋದಿ, ಪ್ರಧಾನಮಂತ್ರಿ**

## ರಾಷ್ಟ್ರೀಯ ಏಕತಾ ದಿನದ ಪ್ರತಿಜ್ಞೆ ಬೋಧನೆ

- ಪ್ರಧಾನಮಂತ್ರಿ ಮೋದಿ ಅವರು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಪುಷ್ಪ ನಮನ ಸಲ್ಲಿಸಿದರು. ಅವರು ರಾಷ್ಟ್ರೀಯ ಏಕತಾ ದಿನದ ಪ್ರತಿಜ್ಞೆಯನ್ನೂ ಬೋಧಿಸಿದರು.
- ಸಿ ಆರ್ ಪಿ ಎಫ್ ನ ಐವರು ಶೌರ್ಯ ಚಕ್ರ ಪುರಸ್ಕೃತರು ಮತ್ತು ಬಿಎಸ್‌ಎಫ್ನ ಹದಿನಾರು ಶೌರ್ಯ ಪದಕ ವಿಜೇತರಿಗೆ ಪರೇಡ್ ನಲ್ಲಿ ಗೌರವ ಸಮರ್ಪಣೆ
- ರಾಷ್ಟ್ರೀಯ ಏಕತಾ ದಿನದ ಪರೇಡ್ ನಲ್ಲಿ ಎನ್ ಎಸ್ ಜಿ, ಎನ್ ಡಿ ಆರ್ ಎಫ್, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಮಣಿಪುರ, ಮಹಾರಾಷ್ಟ್ರ, ಛತ್ತೀಸ್ ಗಢ, ಉತ್ತರಾಖಂಡ ಮತ್ತು ಪುದುಚೇರಿಯ 10 ಸ್ತಬ್ಧಚಿತ್ರಗಳಿದ್ದವು.
- ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 900 ಕಲಾವಿದರು ಪ್ರಸ್ತುತಪಡಿಸಿದ ಭಾರತದ ಶಾಸ್ತ್ರೀಯ ನೃತ್ಯಗಳು ಭಾರತೀಯ ಸಂಸ್ಕೃತಿಯ ಶ್ರೀಮಂತಿಕೆ ಮತ್ತು ವೈವಿಧ್ಯತೆಯನ್ನು ಪ್ರದರ್ಶಿಸಿದವು.

ಮುಖ್ಯವಾಹಿನಿಗೆ ಸಂಪೂರ್ಣವಾಗಿ ಸಂಯೋಜಿಸಲ್ಪಟ್ಟಿದೆ. ಈಗ ಪಾಕಿಸ್ತಾನ ಮತ್ತು ಭಯೋತ್ಪಾದನಾ ಮಾಸ್ಟರ್ ಗಳಿಗೂ ಕೂಡ ಭಾರತದ ನಿಜವಾದ ಶಕ್ತಿ ಏನೆಂಬುದು ಗೊತ್ತಾಗಿದೆ! ಇಂದು, ಯಾರಾದರೂ ಭಾರತದ ಮೇಲೆ ಹುಬ್ಬೇರಿಸುವ ಧೈರ್ಯ ಮಾಡಿದರೆ, ಭಾರತ ಅವರ ನೆಲೆಗಳಿಗೆ ನುಗ್ಗಿ ಪ್ರತಿದಾಳಿ ಮಾಡಲಿದೆ ಎಂಬುದನ್ನು ಆಪರೇಷನ್ ಸಿಂಧೂರ್ ನಲ್ಲಿ ಇಡೀ ಜಗತ್ತು ನೋಡಿದೆ. ಪ್ರತಿ ಬಾರಿಯೂ ಭಾರತದ ಪ್ರತಿಕ್ರಿಯೆ ಮೊದಲಿಗಿಂತ ದೊಡ್ಡದಾಗಿದೆ, ಹಿಂದಿನದಕ್ಕಿಂತಲೂ ಹೆಚ್ಚು ನಿರ್ಣಾಯಕವಾಗಿದೆ. ಇದು ಉಕ್ಕಿನ ಮನುಷ್ಯನ ಭಾರತ ಎಂಬ ಸಂದೇಶವನ್ನು ಭಾರತದ ಶತ್ರುಗಳಿಗೆ ಸಾರಿದೆ. ಸರ್ದಾರ್ ಪಟೇಲ್ ಅವರು ದೇಶದ ಭದ್ರತೆ ಮತ್ತು ಗೌರವದ ವಿಚಾರದಲ್ಲಿ ಎಂದಿಗೂ ರಾಜಿ ಮಾಡಿಕೊಂಡಿರಲಿಲ್ಲ.

*ಪ್ರಧಾನಮಂತ್ರಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ*

# ಭಾರತದ ಅಭಿವೃದ್ಧಿಯ ಚಾಲನಾ ಶಕ್ತಿ ಛತ್ತೀಸ್ ಗಢ

*ಸಣ್ಣ ರಾಜ್ಯಗಳನ್ನು ಅವುಗಳ ಸಂಪನ್ಮೂಲಗಳ ಬಳಕೆಗೆ ಹೊಸ ಎತ್ತರಕ್ಕೆ ಕೊಂಡೊಯ್ಯಲು ಅಭಿವೃದ್ಧಿಪಡಿಸಬೇಕು ಎಂಬ ಅಂದಿನ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ದೂರದೃಷ್ಟಿಗೆ ಅನುಗುಣವಾಗಿ ಛತ್ತೀಸ್ ಗಢ ರಾಜ್ಯವು 25 ವರ್ಷಗಳ ಹಿಂದೆ, ಅಸ್ತಿತ್ವಕ್ಕೆ ಬಂದಿತು. ಅಂದಿನಿಂದ, ಆ ರಾಜ್ಯ ಸಾಧಿಸಿದ ವೇಗದ ಪ್ರಗತಿಯು ಇತರ ರಾಜ್ಯಗಳಿಗೆ ಮಾದರಿಯಾಗಿದೆ. ಛತ್ತೀಸ್ ಗಢದ ರಜತ ಮಹೋತ್ಸವ ಸಮಾರಂಭದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ₹14,000 ಕೋಟಿಗೂ ಹೆಚ್ಚು ಮೌಲ್ಯದ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸ ನೆರವೇರಿಸಿದರು.*

ಈ ರಾಜ್ಯವು ಒಂದು ಕಾಲ ಘಟ್ಟದಲ್ಲಿ ನಕ್ಸಲ್ ವಾದದ ಭೀಕರತೆ ಮತ್ತು ಮೂಲಭೂತ ಸೌಕರ್ಯಗಳ ಕೊರತೆಯನ್ನು ಎದುರಿಸಿತ್ತು. ಆದರೆ ಇಂದು, ಈ ರಾಜ್ಯ ಭಾರತದ ಅಭಿವೃದ್ಧಿಯ ಪಯಣದಲ್ಲಿ ಅತ್ಯಂತ ಮಹತ್ವದ ಪಾಲುದಾರನಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವೆಂಬರ್ 1 ರಂದು ನವ ರಾಯ್ ಪುರದಲ್ಲಿ ನಡೆದ ರಜತ ಮಹೋತ್ಸವ ಸಮಾರಂಭದಲ್ಲಿ ಛತ್ತೀಸ್ ಗಢದ ಸಾಧನೆಗಳನ್ನು ವಿವರಿಸಿದಾಗ ಕಳೆದ 25 ವರ್ಷಗಳಲ್ಲಿನ ಪರಿವರ್ತನೆಯು ಅನುರಣಿಸಿತು. ಪಕ್ಷದ ಕಾರ್ಯಕರ್ತನಾಗಿದ್ದಾಗಿನಿಂದ ದೇಶದ ಪ್ರಧಾನಿಯಾಗುವವರೆಗಿನ ಛತ್ತೀಸ್ ಗಢದ ಅಭಿವೃದ್ಧಿಯ ಪಯಣಕ್ಕೆ ಸಾಕ್ಷಿಯಾಗಿರುವ ಪ್ರಧಾನಮಂತ್ರಿ ಮೋದಿ ಅವರು, ಛತ್ತೀಸ್ ಗಢ ರಚನೆಯಾದಾಗ ಹಳ್ಳಿಗಳನ್ನು ತಲುಪುವುದು ಕಷ್ಟಕರವಾಗಿತ್ತು, ಆ ಸಮಯದಲ್ಲಿ, ಅನೇಕ ಹಳ್ಳಿಗಳಿಗೆ ರಸ್ತೆಗಳಿರಲಿಲ್ಲ. ಈಗ, ಹಳ್ಳಿಗಳಲ್ಲಿನ ರಸ್ತೆ ಜಾಲವು 40,000 ಕಿಲೋಮೀಟರ್ ನಷ್ಟಿದೆ ಎಂದು ತಿಳಿಸಿದ್ದಾರೆ. ಭಾರತದ ಪ್ರಗತಿಯಲ್ಲಿ ಛತ್ತೀಸ್ ಗಢದ ಪಾತ್ರವನ್ನು ಒತ್ತಿಹೇಳುತ್ತಾ, ಕಳೆದ 11 ವರ್ಷಗಳಲ್ಲಿ ಛತ್ತೀಸ್ ಗಢವು ರಾಷ್ಟ್ರೀಯ ಹೆದ್ದಾರಿಗಳ ಅಭೂತಪೂರ್ವ ವಿಸ್ತರಣೆಯನ್ನು ಕಂಡಿದೆ ಎಂದು ಹೇಳಿದರು. ರಾಜ್ಯದಲ್ಲಿ ಈ ಹಿಂದೆ, ಕೇವಲ ಒಂದು ವೈದ್ಯಕೀಯ ಕಾಲೇಜು ಇತ್ತು, ಆದರೆ ಪ್ರಸ್ತುತ 14 ಕಾಲೇಜುಗಳಿವೆ ಎಂದು ಅವರು ಅಂಕಿಅಂಶ ನೀಡಿದ್ದಾರೆ.

ರಾಯ್ ಪುರದಲ್ಲಿ ಎಐಐಎಂಎಸ್ ಇದೆ. ಐದೂವರೆ ಸಾವಿರಕ್ಕೂ ಹೆಚ್ಚು ಆಯುಷ್ಮಾನ್ ಆರೋಗ್ಯ ಮಂದಿರಗಳಿವೆ. ರಾಯ್ಪುರ, ಬಿಲಾಸ್ಪುರ ಮತ್ತು ಜಗದಲ್ಪುರದಂತಹ ನಗರಗಳು ನೇರ ವಿಮಾನಗಳ ಮೂಲಕ ಸಂಪರ್ಕ ಹೊಂದಿವೆ. ಕಚ್ಚಾ ವಸ್ತುಗಳ ರಫ್ತುದಾರ ರಾಜ್ಯವಷ್ಟೇ ಅಲ್ಲ, ಛತ್ತೀಸ್ ಗಢ ಈಗ ಕೈಗಾರಿಕಾ ರಾಜ್ಯವಾಗಿಯೂ ಹೊರಹೊಮ್ಮುತ್ತಿದೆ.

ಮಾವೋವಾದ ಮತ್ತು ನಕ್ಸಲ್ ವಾದದ ಹಿಡಿತದಿಂದ ಮುಕ್ತವಾಗಿ ಈಗ ಅಭಿವೃದ್ಧಿಯ ಸುವರ್ಣಯುಗದತ್ತ ಮುನ್ನಡೆಯುತ್ತಿರುವ ಛತ್ತೀಸ್ ಗಢದ ಪರಿವರ್ತನೆಯ ಪಯಣದ ಬಗ್ಗೆಯೂ ಪ್ರಧಾನಮಂತ್ರಿ ಮೋದಿ ಅವರು ಒತ್ತಿ ಹೇಳಿದ್ದಾರೆ. ರಾಜ್ಯವು 50-55 ವರ್ಷಗಳ ಕಾಲ, ನಕ್ಸಲ್ ವಾದದಿಂದಾಗಿ ತೀವ್ರವಾಗಿ ಬಳಲಿದ್ದು, ಬುಡಕಟ್ಟು ಪ್ರದೇಶಗಳಲ್ಲಿ ರಸ್ತೆ ಸೌಕರ್ಯವಿರಲಿಲ್ಲ. ಮಕ್ಕಳು ಶಾಲಾ ಶಿಕ್ಷಣದಿಂದ ಮತ್ತು ರೋಗಿಗಳು ಆಸ್ಪತ್ರೆಗಳಿಂದ ವಂಚಿತರಾಗಿದ್ದರು. ವೈದ್ಯರು ಮತ್ತು ಶಿಕ್ಷಕರನ್ನು ಕೊಲ್ಲಲಾಗುತ್ತಿತ್ತು ಇಡೀ ದೇಶವನ್ನು ಮಾವೋವಾದ ಮತ್ತು ನಕ್ಸಲ್ ವಾದದಿಂದ ಮುಕ್ತಗೊಳಿಸಲು ನಾವು 2014 ರಲ್ಲಿ ಸಂಕಲ್ಪ ಮಾಡಿದ್ದೆವು ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಫಲಿತಾಂಶಗಳು ಸ್ಪಷ್ಟವಾಗಿವೆ: 2014 ರವರೆಗೆ ದೇಶಾದ್ಯಂತ 125ಕ್ಕೂ ಹೆಚ್ಚು ಜಿಲ್ಲೆಗಳು ಮಾವೋವಾದದಿಂದ ನಲುಗಿದ್ದವು, ಆದರೆ ಇಂದು ಮಾವೋವಾದಿಗಳ ಹಿಡಿತ ಕೇವಲ ಮೂರು ಜಿಲ್ಲೆಗಳಿಗೆ ಸೀಮಿತವಾಗಿದೆ.









# ಅಭಿವೃದ್ಧಿ ಯೋಜನೆಗಳ ಕೊಡುಗೆಗಳು:
# ವಸತಿ, ರಸ್ತೆ ಮತ್ತು ಇಂಧನ ಯೋಜನೆಗಳಿಗೆ ಸ್ಟಾರ್ಟ್-ಅಪ್ ವಿಲೇಜ್ ಉದ್ಯಮಶೀಲತಾ ಕಾರ್ಯಕ್ರಮ

ಪ್ರಧಾನಿ ಮೋದಿ ಅವರು ರಾಜ್ಯದಲ್ಲಿ ₹14,260 ಕೋಟಿಗೂ ಹೆಚ್ಚು ಮೌಲ್ಯದ ಅಭಿವೃದ್ಧಿ ಮತ್ತು ಪರಿವರ್ತನಾತ್ಮಕ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಸಂಪೂರ್ಣ ಸೌರಶಕ್ತಿ ಚಾಲಿತ ಹೊಸ ವಿಧಾನಸಭಾ ಕಟ್ಟಡ, ಶಹೀದ್ ವೀರ್ ನಾರಾಯಣ್ ಸಿಂಗ್ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ವಸ್ತುಸಂಗ್ರಹಾಲಯ ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 3.51 ಲಕ್ಷ ಹೊಸ ಮನೆಗಳು ಈ ಪೈಕಿ ಸೇರಿವೆ.

- ಛತ್ತೀಸ್ ಗಢದ ಒಂಬತ್ತು ಜಿಲ್ಲೆಗಳಲ್ಲಿ 12 ಹೊಸ ಸ್ಟಾರ್ಟ್-ಅಪ್ ಗ್ರಾಮ ಉದ್ಯಮಶೀಲತಾ ಕಾರ್ಯಕ್ರಮ (SVEP) ಬ್ಲಾಕ್ ಗಳನ್ನು ಉದ್ಘಾಟಿಸಲಾಗಿದೆ.
- ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಅಡಿಯಲ್ಲಿ 3 ಲಕ್ಷ ಫಲಾನುಭವಿಗಳಿಗೆ ಕಂತುಗಳಲ್ಲಿ ₹1,200 ಕೋಟಿ ಬಿಡುಗಡೆ ಮಾಡಲಾಗಿದೆ.
- ಬಸ್ತಾರ್ ಮತ್ತು ನಾರಾಯಣಪುರ ಜಿಲ್ಲೆಗಳ ಹಲವು ವಿಭಾಗಗಳಲ್ಲಿ ವ್ಯಾಪಿಸಿರುವ ರಾಷ್ಟ್ರೀಯ ಹೆದ್ದಾರಿ 130D (ನಾರಾಯಣಪುರ-ಕಸ್ತೂರ್ಮೇತ-ಕುತುಲ್-ನಿಲಂಗೂರ್-ಮಹಾರಾಷ್ಟ್ರ ಗಡಿ) ಯ ನಿರ್ಮಾಣ ಮತ್ತು ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ.
- ರಾಯ್ಪುರದಲ್ಲಿ HPCL ನ ಅತ್ಯಾಧುನಿಕ ಪೆಟ್ರೋಲಿಯಂ ತೈಲ ಡಿಪೋ ಮತ್ತು 489 ಕಿಮೀ ಉದ್ದದ ನಾಗ್ಪುರ-ಜಾರ್ಸುಗುಡ ನೈಸರ್ಗಿಕ ಅನಿಲ ಪೈಪ್ಲೈನ್ ಲೋಕಾರ್ಪಣೆ ಮಾಡಲಾಗಿದೆ.
- ಜಂಜ್ಗೀರ್-ಚಂಪಾ ಜಿಲ್ಲೆಯ ಸಿಲಾದೇಹಿ-ಗಟ್ವಾ-ಬಿರ್ರಾ ಮತ್ತು ರಾಜನಂದಗಾಂವ್ ಜಿಲ್ಲೆಯ ಬಿಜ್ಲೆತಾಲಾದಲ್ಲಿ ಎರಡು ಸ್ಮಾರ್ಟ್ ಕೈಗಾರಿಕಾ ಪ್ರದೇಶಗಳು, ನವ ರಾಯ್ಪುರದಲ್ಲಿ ಫಾರ್ಮಾಸಿಟಿಕಲ್ ಪಾರ್ಕ್, ಮಣೇಂದ್ರಗಢ, ಕಬೀರ್ ಧಾಮ್, ಜಂಜ್ ಗಿರ್-ಚಂಪಾ, ಗೀದಮ್ (ದಾಂತೇವಾಡ) ನಲ್ಲಿ ವೈದ್ಯಕೀಯ ಕಾಲೇಜುಗಳು ಹಾಗೂ ಬಿಲಾಸ್ಪುರದಲ್ಲಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ.

## ಹಸಿರು ಮಾರ್ಗದ ಹೆದ್ದಾರಿಗಳು

- ಪಾತಲ್ಗಾಂವ್-ಕುಂಕುರಿಯಿಂದ ಛತ್ತೀಸ್ಗಢ-ಜಾರ್ಖಂಡ್ ಗಡಿಯವರೆಗಿನ ನಾಲ್ಕು ಪಥಗಳ ಗ್ರೀನ್ ಫೀಲ್ಡ್ (ರಸ್ತೆ ಮಾರ್ಗವಿಲ್ಲದ ಸ್ಥಳದಲ್ಲಿ ಕ್ಷಿಪ್ರ ಮಾರ್ಗ) ಹೆದ್ದಾರಿಗೆ ಶಿಲಾನ್ಯಾಸ ನೆರವೇರಿಸಲಾಗಿದೆ.
- ಈ ಕಾರ್ಯತಂತ್ರದ ಕಾರಿಡಾರ್ ಪ್ರಮುಖ ಕಲ್ಲಿದ್ದಲು ಗಣಿಗಳು, ಕೈಗಾರಿಕಾ ಪ್ರದೇಶಗಳು ಮತ್ತು ಕೊರ್ಬಾ, ರಾಯ್ ಗಢ, ಜಶ್ಪುರ, ರಾಂಚಿ ಮತ್ತು ಜೆಮ್ ಶೆಡ್ಪುರದ ಉಕ್ಕಿನ ಸ್ಥಾವರಗಳನ್ನು ಸಂಪರ್ಕಿಸಲಿದೆ.

**ಪೂರ್ವ ಮತ್ತು ಪಶ್ಚಿಮ ಗ್ರಿಡ್ ಗಳ ನಡುವೆ ಅಂತರ-ಪ್ರಾದೇಶಿಕ ಇಂಧನ ಪ್ರಸರಣ ಸಾಮರ್ಥ್ಯವನ್ನು ಹೆಚ್ಚಿಸುವ**

**1,600**

**ಮೆಗಾ ವ್ಯಾಟ್ ಅಂತರ-ಪ್ರಾದೇಶಿಕ ER–WR ಅಂತರಸಂಪರ್ಕ ಯೋಜನೆ ಉದ್ಘಾಟಿಸಲಾಗಿದೆ.**

**ರೂ. 5,610**

**ಕೋಟಿ ಮೌಲ್ಯದ ಹೊಸ ಮತ್ತು ಪೂರೈಕೆ-ಸುಧಾರಣಾ ಯೋಜನೆಗಳ ಉದ್ಘಾಟನೆ / ಶಂಕುಸ್ಥಾಪನೆ ನೆರವೇರಿಸಲಾಗಿದ್ದು, ₹480 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಒಂಬತ್ತು ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸಹ ಉದ್ಘಾಟಿಸಲಾಗಿದೆ.**



ಒಂದು ಕಾಲದಲ್ಲಿ ಬಾಂಬ್ ಮತ್ತು ಬಂದೂಕುಗಳ ಭಯವಿದ್ದ ಛತ್ತೀಸ್ ಗಢದಲ್ಲಿ ಪರಿಸ್ಥಿತಿ ಬದಲಾಗಿದೆ. ಏಳು ದಶಕಗಳಲ್ಲಿ ಮೊದಲ ಬಾರಿಗೆ ಬಿಜಾಪುರದ ಚಿಲ್ಕಪಲ್ಲಿ ಗ್ರಾಮದಲ್ಲಿ ವಿದ್ಯುತ್ ಸೌಲಭ್ಯ ಒದಗಿಸಲಾಗಿದೆ. ಅಬುಜ್ ಮದ್ ನ ರೇಕವಾಯ ಗ್ರಾಮದಲ್ಲಿ, ಸ್ವಾತಂತ್ರ್ಯಾ ನಂತರ ಮೊದಲ ಬಾರಿಗೆ ಶಾಲೆ ನಿರ್ಮಾಣದ ಕೆಲಸ ಪ್ರಾರಂಭವಾಗಿದೆ. ಕೆಂಪು ಧ್ವಜದ ಬದಲಿಗೆ ನಮ್ಮ ರಾಷ್ಟ್ರೀಯ ತ್ರಿವರ್ಣ ಧ್ವಜ ಹೆಮ್ಮೆಯಿಂದ ಹಾರುತ್ತಿದೆ.

### ಜನ್ಮಜಾತ ಹೃದಯ ಕಾಯಿಲೆ ಜಯಿಸಿದ ಮಕ್ಕಳೊಂದಿಗೆ ಪ್ರಧಾನಿಯವರ 'ದಿಲ್ ಕಿ ಬಾತ್'

ನವ ರಾಯ್ ಪುರದ ಶ್ರೀ ಸತ್ಯ ಸಾಯಿ ಸಂಜೀವಿನಿ ಆಸ್ಪತ್ರೆಯಲ್ಲಿ 'ದಿಲ್ ಕಿ ಬಾತ್' ಕಾರ್ಯಕ್ರಮದ ಭಾಗವಾಗಿ ನಡೆದ 'ಜೀವದ ಉಡುಗೊರೆ' ('ಗಿಫ್ಟ್ ಆಫ್ ಲೈಫ್') ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜನ್ಮಜಾತ ಹೃದ್ರೋಗಗಳಿಗೆ ಯಶಸ್ವಿ ಚಿಕಿತ್ಸೆ ಪಡೆದ 2,500 ಮಕ್ಕಳೊಂದಿಗೆ ಸಂವಾದ ನಡೆಸಿದರು. ಯುವ ಹಾಕಿ ಚಾಂಪಿಯನ್ ಒಬ್ಬರು ತಾವು ಐದು ಪದಕಗಳನ್ನು ಗೆದ್ದಿದ್ದು, ಶಾಲೆಯಲ್ಲಿ ತಪಾಸಣೆಯ ಸಮಯದಲ್ಲಿ ಹೃದಯದ ಕಾಯಿಲೆ ಇರುವುದು ಪತ್ತೆಯಾಯಿತು ಎಂದು ವಿವರಿಸುತ್ತಾ, ಆರು ತಿಂಗಳ ಹಿಂದೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಈಗ ಹಾಕಿ ಆಡುವುದನ್ನು ಮುಂದುವರಿಸಿರುವುದಾಗಿ ಹೇಳಿದರು. ಅವರ ಆಕಾಂಕ್ಷೆಗಳ ಬಗ್ಗೆ ಪ್ರಧಾನಿಯವರು ಪ್ರಶ್ನೆ ಕೇಳಿದಾಗ, ವೈದ್ಯೆಯಾಗಿ ಮಕ್ಕಳಿಗೆ ಚಿಕಿತ್ಸೆ ನೀಡುವ ಬಯಕೆ ಇದೆ ಎಂದು ಉದಯೋನ್ಮುಖ ಹಾಕಿ ಪಟು ಉತ್ತರಿಸಿದರು. ಮಕ್ಕಳೊಂದಿಗಿನ ತಮ್ಮ ಸಂವಾದದ ಸಮಯದಲ್ಲಿ, ಯಾವುದೇ ಒಳ್ಳೆಯ ಕಾರ್ಯವನ್ನು ಸಾಧಿಸಲು ಆರೋಗ್ಯಕರ ದೇಹ ಅತ್ಯಗತ್ಯ ಎಂದು ಪ್ರಧಾನಿ ಮೋದಿ ಅವರು ಒತ್ತಿ ಹೇಳಿದರು. ಯೋಗ ಮತ್ತು ನಿಯಮಿತ, ಶಿಸ್ತುಬದ್ಧ ನಿದ್ದೆಯ ದಿನಚರಿಯ ಮೂಲಕ ಮಕ್ಕಳು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಪ್ರಧಾನಮಂತ್ರಿ ಸಲಹೆ ನೀಡಿದರು.

ಪ್ರಧಾನಮಂತ್ರಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ




**ಆರ್ಯ ಸಮಾಜದ 150ನೇ ವಾರ್ಷಿಕೋತ್ಸವ**

# ಇತಿಹಾಸದ ಪುನರ್ ವ್ಯಾಖ್ಯಾನ

*ಆರ್ಯ ಸಮಾಜವು ಸ್ಥಾಪನೆಯಾದಾಗಿನಿಂದ ಇಂದಿನವರೆಗೆ ಇತಿಹಾಸದ ಹಾದಿಗೆ ಹೊಸ ಮಜಲನ್ನು ನೀಡಿದೆ. ಆರ್ಯ ಸಮಾಜವು ಭಾರತೀಯತೆಯನ್ನು ನಿರ್ಭಯವಾಗಿ ಪ್ರತಿಪಾದಿಸಿದೆ. ಆರ್ಯ ಸಮಾಜದ 150 ವರ್ಷಗಳು ಭಾರತೀಯ ಸಮಾಜದ ವೈದಿಕ ಗುರುತನ್ನು ಸಂರಕ್ಷಿಸುವ ಸಾಂಕೇತಿಕ ಸಂಬಂಧ ಹೊಂದಿವೆ ಎಂದು 2025ರ ಅಂತಾರಾಷ್ಟ್ರೀಯ ಆರ್ಯ ಮಹಾಸಮ್ಮೇಳನದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.*

ನಮ್ಮ ವೇದಗಳಲ್ಲಿ "ಕೃಣ್ವಂತೋ ವಿಶ್ವಂ ಆರ್ಯಂ" ಎಂದಿದೆ, ಅಂದರೆ "ಇಡೀ ಜಗತ್ತನ್ನು ಔನ್ನತ್ಯಕ್ಕೆ ಕೊಂಡೊಯ್ಯೋಣ ಮತ್ತು ಉದಾತ್ತ ಚಿಂತನೆಗಳೆಡೆಗೆ ಮಾರ್ಗದರ್ಶನ ಮಾಡೋಣ." ಸ್ವಾಮಿ ದಯಾನಂದರು ಈ ವೇದದ ಹೇಳಿಕೆಯನ್ನು ಆರ್ಯ ಸಮಾಜದ ಧ್ಯೇಯವಾಕ್ಯವಾಗಿ ಅಳವಡಿಸಿಕೊಂಡರು. ಇಂದು, ಈ ವೇದ ವಾಕ್ಯವು ಭಾರತದ ಅಭಿವೃದ್ಧಿ ಪಯಣದ ಮೂಲಭೂತ ಮಂತ್ರವೂ ಆಗಿದೆ. ಭಾರತದ ಅಭಿವೃದ್ಧಿಯ ಮೂಲಕ ವಿಶ್ವದ ಕಲ್ಯಾಣ, ಮತ್ತು ಭಾರತದ ಸಮೃದ್ಧಿಯ ಮೂಲಕ ಮಾನವೀಯತೆಗೆ ಸೇವೆ ಎಂಬ ದೃಷ್ಟಿಕೋನದೊಂದಿಗೆ ದೇಶ ಮುನ್ನಡೆಯುತ್ತಿದೆ. ಇಂದು, ಭಾರತವು ಸುಸ್ಥಿರ ಅಭಿವೃದ್ಧಿಯ ದಿಕ್ಕಿನಲ್ಲಿ ಪ್ರಮುಖ ಜಾಗತಿಕ ಧ್ವನಿಯಾಗಿದೆ. ಸ್ವಾಮಿ ದಯಾನಂದರು ವೇದಗಳಿಗೆ ಮರಳುವಂತೆ ಕರೆ ನೀಡಿದಂತೆಯೇ, ಇಂದು ಭಾರತವು ಜಾಗತಿಕ ವೇದಿಕೆಯಲ್ಲಿ ವೈದಿಕ ಜೀವನ ವಿಧಾನ ಮತ್ತು ಆದರ್ಶಗಳಿಗೆ ಮರಳುವ ಬಗ್ಗೆ ಮಾತನಾಡುತ್ತಿದೆ. ಇದಕ್ಕಾಗಿ ಮಿಷನ್ ಲೈಫ್ (LiFE) ಆರಂಭಿಸಲಾಗಿದ್ದು ಪ್ರಪಂಚದಾದ್ಯಂತದ ಬೆಂಬಲ ದೊರೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

"ಒಂದು ಸೂರ್ಯ, ಒಂದು ಜಗತ್ತು, ಒಂದು ಗ್ರಿಡ್" ಎಂಬ ಮುನ್ನೋಟದೊಂದಿಗೆ, ನಾವು ಶುದ್ಧ ಇಂಧನವನ್ನು ಜಾಗತಿಕ ಆಂದೋಲನವಾಗಿ ಪರಿವರ್ತಿಸುತ್ತಿದ್ದೇವೆ. ಇದಲ್ಲದೆ, ಅಂತಾರಾಷ್ಟ್ರೀಯ ಯೋಗ ದಿನದ ಮೂಲಕ ಯೋಗ ಜ್ಞಾನವು ಪ್ರಪಂಚದಾದ್ಯಂತ 190ಕ್ಕೂ ಹೆಚ್ಚು ದೇಶಗಳನ್ನು ತಲುಪಿದೆ. ವೇದಗಳು ನಮಗೆ "ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಜಾನತಾಮ್" ಎಂದು ಕಲಿಸುತ್ತವೆ, ಅಂದರೆ ನಾವು ಒಟ್ಟಾಗಿ ನಡೆಯಬೇಕು, ಒಗ್ಗೂಡಿ ಮಾತನಾಡಬೇಕು ಮತ್ತು ಪರಸ್ಪರರ ಮನಸ್ಸನ್ನು ಅರ್ಥಮಾಡಿಕೊಳ್ಳಬೇಕು.

ಅಂದರೆ, ನಾವು ಪರಸ್ಪರರ ಆಲೋಚನೆಗಳನ್ನು ಗೌರವಿಸಬೇಕು. ವೇದಗಳ ಈ

## ಸ್ವಾಮಿ ದಯಾನಂದ ಸರಸ್ವತಿ ದಾರ್ಶನಿಕರು

ವಸಾಹತುಶಾಹಿ ಆಳ್ವಿಕೆಯ ಅವಧಿಯಲ್ಲಿ, ಶತಮಾನಗಳ ಗುಲಾಮಗಿರಿಯು ರಾಷ್ಟ್ರ ಮತ್ತು ಸಮಾಜವನ್ನು ಛಿದ್ರಗೊಳಿಸಿತ್ತು. ಭಾರತೀಯ ಸಂಪ್ರದಾಯಗಳು ಮತ್ತು ನಂಬಿಕೆಗಳನ್ನು ಬ್ರಿಟಿಷರು ದುರ್ಬಲಗೊಳಿಸುತ್ತಿದ್ದ ಆ ಸಂಕಷ್ಟದ ಸಮಯದಲ್ಲಿ, ಒಬ್ಬ ಯುವ ತಪಸ್ವಿ ಹೊರಹೊಮ್ಮಿದರು. ಅವರು ದೂರದ ಮತ್ತು ಕಠಿಣ ಭೂಪ್ರದೇಶ ಹಿಮಾಲಯದಲ್ಲಿ ತೀವ್ರವಾದ ಆಧ್ಯಾತ್ಮಿಕ ಅಭ್ಯಾಸದಲ್ಲಿ ತೊಡಗಿ ಕಠಿಣ ತಪಸ್ಸಿನ ಮೂಲಕ ತಮ್ಮನ್ನು ತಾವು ಪರೀಕ್ಷಿಸಿಕೊಂಡರು. ಅಲ್ಲಿಂದ ಹಿಂದಿರುಗಿದ ಬಳಿಕ, ಅವರು ಕೀಳರಿಮೆಯಲ್ಲಿ ಸಿಲುಕಿದ್ದ ಭಾರತೀಯ ಸಮಾಜವನ್ನು ಎಚ್ಚರಿಸಿದರು. ಅವರು ಆತ್ಮವಿಶ್ವಾಸದಿಂದ ತಮ್ಮ ಸಮುದಾಯಕ್ಕೆ ಕರೆ ನೀಡಿದರು: "ವೇದಗಳಿಗೆ ಹಿಂತಿರುಗಿ." ಇಂತಹ ಮಹತ್ವದ ಕರೆ ನೀಡಿದ ವ್ಯಕ್ತಿ ಬೇರೆ ಯಾರೂ ಅಲ್ಲ, ದಾರ್ಶನಿಕರಾದ ಸ್ವಾಮಿ ದಯಾನಂದರು. ಆ ಅವಧಿಯಲ್ಲಿ ಗುಲಾಮಗಿರಿಯಿಂದ ತುಳಿತಕ್ಕೊಳಗಾದ ರಾಷ್ಟ್ರದ ಪ್ರಜ್ಞೆಯನ್ನು ಅವರು ಮತ್ತೆ ಜಾಗೃತಗೊಳಿಸಿದರು. ಅವರು ಜಾತಿವಾದ, ಅಸ್ಪೃಶ್ಯತೆ ಮತ್ತು ತಾರತಮ್ಯವನ್ನು ಸಹ ಖಂಡಿಸಿದರು. ಅವರು ಅನಕ್ಷರತೆಯ ವಿರುದ್ಧ ಅಭಿಯಾನವನ್ನು ಪ್ರಾರಂಭಿಸಿದರು ಹಾಗೂ ವೇದಗಳು ಮತ್ತು ಧರ್ಮಗ್ರಂಥಗಳನ್ನು ತಪ್ಪಾಗಿ ಅರ್ಥೈಸುವ ಮತ್ತು ಸುಳ್ಳು ಪ್ರಚಾರ ಮಾಡುವವರರಿಗೆ ಸವಾಲೆಸೆದರು. ಅವರು ವಿದೇಶಿ ಕಲ್ಪನೆಗಳನ್ನು ಸಹ ಪ್ರಶ್ನಿಸಿದರು ಮತ್ತು ಚರ್ಚೆಯ ಪ್ರಾಚೀನ ಸಂಪ್ರದಾಯದ ಮೂಲಕ ಸತ್ಯವನ್ನು ಸ್ಥಾಪಿಸಿದರು. ಇಷ್ಟೇ ಅಲ್ಲ, ಮಹಿಳೆಯರನ್ನು ಮನೆಯ ಮಿತಿಗಳಿಗೆ ಸೀಮಿತಗೊಳಿಸುವ ಚಿಂತನೆಯನ್ನು ಸಹ ಪ್ರಶ್ನಿಸುತ್ತಾ ಅವರು, ಆರ್ಯ ಸಮಾಜದ ಶಾಲೆಗಳಲ್ಲಿ ಬಾಲಕಿಯರಿಗೆ ಶಿಕ್ಷಣ ನೀಡಲು ಅಭಿಯಾನ ಪ್ರಾರಂಭಿಸಿದರು.

### ಆರ್ಯ ಸಮಾಜ: ಸಮಾಜ ಸುಧಾರಣೆ ಮತ್ತು ರಾಷ್ಟ್ರ ನಿರ್ಮಾಣದಲ್ಲೊಬ್ಬ ನಾಯಕ

- ಆರ್ಯ ಸಮಾಜವು ಸುಧಾರಣಾವಾದಿಗಳ ಮಹಾನ್ ಪರಂಪರೆಯನ್ನು ದೃಢವಾಗಿ ಮುಂದುವರೆಸಿದೆ. ಇದು ಸ್ವಾತಂತ್ರ್ಯ ಹೋರಾಟಗಾರರಿಗೆ ಸೈದ್ಧಾಂತಿಕ ಶಕ್ತಿಯನ್ನು ಸಹ ಒದಗಿಸಿದೆ.
- ಆರ್ಯ ಸಮಾಜದಿಂದ ಪ್ರೇರಿತರಾದ ಲಾಲಾ ಲಜಪತ್ ರಾಯ್ ಮತ್ತು ರಾಮಪ್ರಸಾದ್ ಬಿಸ್ಮಿಲ್ ಅವರಂತಹ ಅನೇಕ ಕ್ರಾಂತಿಕಾರಿಗಳು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು.
- ಯಾವುದೇ ಭಾರತ ವಿರೋಧಿ ಚಿಂತನೆ, ಅದು ವಿದೇಶಿ ಸಿದ್ಧಾಂತಗಳನ್ನು ಹೇರುವುದಾಗಲಿ, ವಿಭಜಕ ಮನಸ್ಥಿತಿಯಾಗಲಿ ಅಥವಾ ಸಂಸ್ಕೃತಿಯನ್ನು ಅಡ್ಡಿಪಡಿಸುವ ದುಷ್ಟ ಪ್ರಯತ್ನಗಳಾಗಲಿ, ಆರ್ಯ ಸಮಾಜವು ಅವುಗಳನ್ನು ಸದಾ ಪ್ರಶ್ನಿಸಿದೆ.
- ಸ್ವಾಮಿ ಶ್ರದ್ಧಾನಂದರಂತಹ ಆರ್ಯ ಸಮಾಜದ ಅನೇಕ ವಿದ್ವಾಂಸರು ಧಾರ್ಮಿಕ ಜಾಗೃತಿಯ ಮೂಲಕ ಇತಿಹಾಸದ ಹಾದಿಗೆ ಹೊಸ ದಿಕ್ಕನ್ನು ನೀಡಿದರು.
- ಗುರುಕುಲ ಕಾಂಗ್ರಿ, ಗುರುಕುಲ ಕುರುಕ್ಷೇತ್ರ, ಡಿಎವಿ ಸಂಸ್ಥೆ ಮತ್ತು ಇತರ ಶಿಕ್ಷಣ ಸಂಸ್ಥೆಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಶ್ರದ್ಧೆಯಿಂದ ಕೆಲಸ ಮಾಡುತ್ತಿವೆ.

**“ಇಂದು, ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ದೇಶವು ಶಿಕ್ಷಣವನ್ನು ಮೌಲ್ಯಗಳು ಮತ್ತು ಚಾರಿತ್ರ್ಯ ನಿರ್ಮಾಣದೊಂದಿಗೆ ಮರುಸಂಪರ್ಕಿಸುತ್ತಿರುವಾಗ, ಭಾರತದ ಪವಿತ್ರ ಜ್ಞಾನ ಪರಂಪರೆಯನ್ನು ಸಂರಕ್ಷಿಸಿದ ಆರ್ಯ ಸಮಾಜಕ್ಕೆ ನನ್ನ ಕೃತಜ್ಞತೆಗಳು.**

**ನರೇಂದ್ರ ಮೋದಿ,**
**ಪ್ರಧಾನಮಂತ್ರಿ**



ಕರೆಯನ್ನು ರಾಷ್ಟ್ರದ ಕರೆಯಾಗಿಯೂ ಪರಿಗಣಿಸುತ್ತಾ, ದೇಶದ ನಿರ್ಣಯಗಳನ್ನು ನಮ್ಮದೇ ಆದ ನಿರ್ಣಯಗಳನ್ನಾಗಿ ಮಾಡಿಕೊಳ್ಳಬೇಕು ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಸಾರ್ವಜನಿಕ ಭಾಗವಹಿಸುವಿಕೆಯ ಮನೋಭಾವದೊಂದಿಗೆ ನಾವು ಸಾಮೂಹಿಕ ಪ್ರಯತ್ನಗಳನ್ನು ಮುನ್ನಡೆಸಬೇಕು. ಈ 150 ವರ್ಷಗಳಲ್ಲಿ, ಆರ್ಯ ಸಮಾಜವು ಇದೇ ಮನೋಭಾವದೊಂದಿಗೆ ಕಾರ್ಯನಿರ್ವಹಿಸಿದ್ದು, ಅದನ್ನು ನಾವು ನಿರಂತರವಾಗಿ ಬಲಪಡಿಸಬೇಕು. ಮಹರ್ಷಿ ದಯಾನಂದ ಸರಸ್ವತಿಯವರ ವಿಚಾರಗಳು ಮಾನವಕುಲದ ಕಲ್ಯಾಣಕ್ಕೆ ದಾರಿ ಮಾಡಿಕೊಡುವುದನ್ನು ಮುಂದುವರಿಸಲಿವೆ ಎಂದು ಪ್ರಧಾನಮಂತ್ರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

### ಭಾರತ ಮತ್ತು ವಿದೇಶಗಳ ಆರ್ಯ ಸಮಾಜದ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆ

ಮಹರ್ಷಿ ದಯಾನಂದ ಸರಸ್ವತಿ ಅವರ 200ನೇ ಜನ್ಮ ದಿನಾಚರಣೆ ಮತ್ತು ಆರ್ಯ ಸಮಾಜದ 150 ವರ್ಷಗಳ ಸಮಾಜ ಸೇವೆಯ ಸ್ಮರಣಾರ್ಥ ಆಯೋಜಿಸಲಾದ ಜ್ಞಾನ ಜ್ಯೋತಿ ಮಹೋತ್ಸವದಲ್ಲಿ ಅಂತಾರಾಷ್ಟ್ರೀಯ ಆರ್ಯ ಮಹಾಸಮ್ಮೇಳನ 2025 ಪ್ರಮುಖ ಭಾಗವಾಗಿತ್ತು. ಈ ಶೃಂಗಸಭೆಯು ಭಾರತ ಮತ್ತು ವಿದೇಶಗಳಲ್ಲಿನ ಆರ್ಯ ಸಮಾಜ ಘಟಕಗಳ ಪ್ರತಿನಿಧಿಗಳನ್ನು ಒಟ್ಟುಗೂಡಿಸುತ್ತಾ, ಮಹರ್ಷಿ ದಯಾನಂದರ ಸುಧಾರಣಾವಾದಿ ಆದರ್ಶಗಳ ಸಾರ್ವತ್ರಿಕ ಪ್ರಸ್ತುತತೆ ಮತ್ತು ಸಂಸ್ಥೆಯ ಜಾಗತಿಕ ವ್ಯಾಪ್ತಿಯನ್ನು ಪ್ರದರ್ಶಿಸಿತು. "ಸೇವೆಯ 150 ಸುವರ್ಣ ವರ್ಷಗಳು" ಎಂಬ ಶೀರ್ಷಿಕೆಯ ಪ್ರದರ್ಶನವನ್ನು ಸಹ ಆಯೋಜಿಸಲಾಗಿತ್ತು. ಇದು ಶಿಕ್ಷಣ, ಸಾಮಾಜಿಕ ಸುಧಾರಣೆ ಮತ್ತು ಆಧ್ಯಾತ್ಮಿಕ ಉನ್ನತಿಗೆ ಆರ್ಯ ಸಮಾಜದ ಕೊಡುಗೆಗಳನ್ನು ಪ್ರದರ್ಶಿಸಿದೆ.

ಮಹರ್ಷಿ ದಯಾನಂದ ಸರಸ್ವತಿಯವರ ಸುಧಾರಣಾವಾದಿತ್ವ ಮತ್ತು ಶೈಕ್ಷಣಿಕ ಪರಂಪರೆಯನ್ನು ಗೌರವಿಸುವುದು, ಆರ್ಯ ಸಮಾಜದ ಸಾಮಾಜಿಕ ಸುಧಾರಣೆ ಮತ್ತು ರಾಷ್ಟ್ರ ನಿರ್ಮಾಣದ 150 ವರ್ಷಗಳ ಸೇವೆಯನ್ನು ಸಂಭ್ರಮಿಸುವುದು ಹಾಗೂ 2047ರ ವಿಕಸಿತ ಭಾರತನ ದೃಷ್ಟಿಕೋನಕ್ಕೆ ಅನುಗುಣವಾಗಿ ವೈದಿಕ ತತ್ವಗಳು ಮತ್ತು ಸ್ವದೇಶಿ ಮೌಲ್ಯಗಳೆಡೆಗೆ ಜಾಗತಿಕ ಚಳುವಳಿಯನ್ನು ಪ್ರೇರೇಪಿಸುವುದು ಮಹಾಸಮ್ಮೇಳನದ ಉದ್ದೇಶವಾಗಿತ್ತು.

*ಪ್ರಧಾನಮಂತ್ರಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ*

# ಭಾರತವೀಗ ಸಂಶೋಧನೆಯನ್ನು ಸುಲಭಗೊಳಿಸುವತ್ತ ಗಮನ ಹರಿಸಿದೆ

*ಭಾರತವು ಬಾಹ್ಯಾಕಾಶ ಸಂಶೋಧನೆಯಿಂದ ಕ್ವಾಂಟಮ್ ತಂತ್ರಜ್ಞಾನದವರೆಗೆ, ಕೃತಕ ಬುದ್ಧಿಮತ್ತೆಯಿಂದ ಸೆಮಿಕಂಡಕ್ಟರ್ ಉತ್ಪಾದನೆಯವರೆಗೆ ಮತ್ತು ಸ್ವಚ್ಛ ಇಂಧನದಿಂದ ಸಂಶೋಧನೆಯವರೆಗೆ ವಿವಿಧ ಕ್ಷೇತ್ರಗಳಲ್ಲಿ ಬಲಿಷ್ಠ ನಿರ್ವಾಹಕನಾಗಿ ರೂಪಿಸಲ್ಪಟ್ಟಿದೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ನವೆಂಬರ್ 3ರಂದು ಉದಯೋನ್ಮುಖ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತಾ ಸಮಾವೇಶ-2025 ಅನ್ನು ಉದ್ಘಾಟಿಸಿದರು. 1 ಲಕ್ಷ ಕೋಟಿ ರೂ. ಮೊತ್ತದ ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತಾ ಯೋಜನೆ ನಿಧಿಯನ್ನು ಅನಾವರಣಗೊಳಿಸಿದರು...*



**ಭಾರತದಲ್ಲಿ ಆಧುನಿಕ ನಾವೀನ್ಯತೆಯ ಪರಿಸರ ವ್ಯವಸ್ಥೆಯು ಅಭಿವೃದ್ಧಿ ಪಡಿಸಲು ನಾವು ಸಂಶೋಧನೆಯನ್ನು ಸುಲಭಗೊಳಿಸುವತ್ತ ಗಮನ ಹರಿಸುತ್ತಿದ್ದೇವೆ. ಈ ದೃಷ್ಟಿಕೋನದೊಂದಿಗೆ, ನಮ್ಮ ಸರ್ಕಾರವು ಹಣಕಾಸು ನಿಯಮಗಳು ಮತ್ತು ಖರೀದಿ ನೀತಿಗಳಲ್ಲಿ ಹಲವಾರು ಸುಧಾರಣೆಗಳನ್ನು ಕೈಗೊಂಡಿದೆ. ಹೆಚ್ಚುವರಿಯಾಗಿ, ಮೂಲಮಾದರಿಗಳು ಪ್ರಯೋಗಾಲಯದಿಂದ ಮಾರುಕಟ್ಟೆಗೆ ತ್ವರಿತವಾಗಿ ಚಲಿಸುವಂತೆ ಖಚಿತಪಡಿಸಿಕೊಳ್ಳಲು ನಿಯಮಗಳು, ಪ್ರೋತ್ಸಾಹಕಗಳು ಮತ್ತು ಪೂರೈಕೆ ಸರಪಳಿಗಳಲ್ಲಿ ಸುಧಾರಣೆಗಳನ್ನು ಮಾಡಲಾಗಿದೆ.**

**ನರೇಂದ್ರ ಮೋದಿ, ಪ್ರಧಾನ ಮಂತ್ರಿ**




ಭಾರತದ ರಾಷ್ಟ್ರೀಯ ಪ್ರಗತಿಗೆ ವಿಜ್ಞಾನ ಮತ್ತು ತಂತ್ರಜ್ಞಾನವು ಬಲವಾದ ಅಡಿಪಾಯವಾಗಿದೆ. ವಿಶೇಷವಾಗಿ ಕಳೆದ 11 ವರ್ಷಗಳಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ನಾವೀನ್ಯತೆ ಅಭಿವೃದ್ಧಿಗೆ ವಿಶೇಷ ಉತ್ತೇಜನ ನೀಡಲಾಗಿದೆ. ಇದು ಸ್ವಾವಲಂಬನೆಯನ್ನು ಬಲಪಡಿಸಿದೆ ಮತ್ತು ಭಾರತದ ಪಾತ್ರಕ್ಕೆ ವ್ಯಾಪಕ ಕೊಡುಗೆ ನೀಡಿದೆ. ದೇಶವು 2047ರ ವಿಕಸಿತ ಭಾರತದ ಪರಿವರ್ತನಾ ದೃಷ್ಟಿಕೋನದತ್ತ ಸಾಗುತ್ತಿರುವಾಗ, ರಾಷ್ಟ್ರವು ಪ್ರತಿದಿನ ಹೊಸ ಎತ್ತರವನ್ನು ಸಾಧಿಸುತ್ತಿದೆ. ಭಾರತದ ಉದಯೋನ್ಮುಖ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯು ಒಟ್ಟಾಗಿ ಹೊಸ ಇತಿಹಾಸ ಸೃಷ್ಟಿಸುತ್ತಿವೆ. ಭಾರತವು ಬಲವಾದ ಜಾಗತಿಕ ಉಪಸ್ಥಿತಿಯನ್ನು ಸ್ಥಾಪಿಸುವ ಮತ್ತು ಈ ಹೊಸ ಆಯಾಮಗಳಿಗೆ ಮಾರ್ಗವನ್ನು ರೂಪಿಸುವತ್ತ ಹೆಜ್ಜೆ ಹಾಕಿದೆ. ಈ ಸರಣಿಯ ಭಾಗವಾಗಿ ನವೆಂಬರ್ 3 ರಿಂದ 5 ರವರೆಗೆ 11 ಪ್ರಮುಖ ವಲಯಗಳ ವಿಷಯಾಧಾರಿತವಾಗಿ ಉದಯೋನ್ಮುಖ ವಿಜ್ಞಾನ, ತಂತ್ರಜ್ಞಾನ ಮತ್ತು ನಾವಿನ್ಯತಾ ಸಮಾವೇಶ 2025 ಅನ್ನು ನವದೆಹಲಿಯ ಭಾರತ ಮಂಟಪದಲ್ಲಿ ಆಯೋಜಿಸಲಾಗಿತ್ತು. ನೊಬೆಲ್ ಪ್ರಶಸ್ತಿ ವಿಜೇತ ಸರ್ ಆಂಡ್ರೆ ಗೀಮ್ ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರಾಷ್ಟ್ರದ ನಾಯಕತ್ವವು ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ ಮತ್ತು ನಾವೀನ್ಯತೆಗೆ ಆದ್ಯತೆ ನೀಡಿದಾಗ, ವಿಜ್ಞಾನಿಗಳು ಮತ್ತು ಸಂಬಂಧಿತ ಸಂಸ್ಥೆಗಳ ಕಠಿಣ ಪರಿಶ್ರಮ ಮತ್ತು ಚಿಂತನೆಯು ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂಬ ಭರವಸೆ ನೀಡುತ್ತದೆ. ಪರಿಣಾಮವಾಗಿ, 11 ವರ್ಷಗಳ ಹಿಂದೆ ಪ್ರಧಾನ ಮಂತ್ರಿ ಮೋದಿ ಅವರು ದೇಶದ ನಾಯಕತ್ವ ವಹಿಸಿಕೊಂಡಾಗ ಭಾರತವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಚಾಲಿತ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ



## ಸಂಶೋಧನೆ ಮತ್ತು ಅಭಿವೃದ್ಧಿ ಪರಿಸರ ವ್ಯವಸ್ಥೆ ಉತ್ತೇಜಿಸಲು ಆರ್‌ಡಿಐ ಯೋಜನಾ ನಿಧಿ

ದೇಶದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಪರಿಸರ ವ್ಯವಸ್ಥೆಯನ್ನು ಉತ್ತೇಜಿಸಲು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು 1 ಲಕ್ಷ ಕೋಟಿ ರೂ. ಮೊತ್ತದ ಸಂಶೋಧನಾ ಅಭಿವೃದ್ಧಿ ಮತ್ತು ನಾವೀನ್ಯತೆ ಯೋಜನೆ ನಿಧಿ ಪ್ರಾರಂಭಿಸಿದರು. ವಿಜ್ಞಾನದಲ್ಲಿನ ಬದಲಾವಣೆಯ ವೇಗವು ಇನ್ನು ಮುಂದೆ ಕೇವಲ ನಿರೀಕ್ಷಿತ ಮಟ್ಟಕ್ಕೆ ಸೀಮಿತವಾಗದೆ, ಅದು ಹೆಚ್ಚಿನ ಮಟ್ಟದಲ್ಲಿ ಬದಲಾವಣೆಗೆ ಒಳಗಾಗಲಿದೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು. ಈ ದೃಷ್ಟಿಕೋನದೊಂದಿಗೆ, ಭಾರತವು ಉದಯೋನ್ಮುಖ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯ ಎಲ್ಲಾ ಅಂಶಗಳನ್ನು ಮುನ್ನಡೆಸುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹೊಸ ಅವಕಾಶಗಳನ್ನು ಬೆಳೆಸಲು ಸರ್ಕಾರ 1 ಲಕ್ಷ ಕೋಟಿ ರೂ. ಮೌಲ್ಯದ ಆರ್‌ಡಿಐ ನಿಧಿ ಪ್ರಾರಂಭಿಸಿದೆ. ಮೊದಲ ಬಾರಿಗೆ, ಹೆಚ್ಚಿನ ಅಪಾಯ ಮತ್ತು ಹೆಚ್ಚಿನ ಪರಿಣಾಮ ಬೀರುವ ಯೋಜನೆಗಳಿಗೆ ಬಂಡವಾಳ ಲಭ್ಯವಾಗುವಂತೆ ಮಾಡಲಾಗುತ್ತಿದೆ. ಸರ್ಕಾರಿ ಸಂಸ್ಥೆಗಳಲ್ಲಿ ಮಾತ್ರವಲ್ಲದೆ, ಖಾಸಗಿ ವಲಯದಲ್ಲೂ ನಾವೀನ್ಯತೆ ಉತ್ತೇಜಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಈ ನಿಟ್ಟಿನಲ್ಲಿ, ವೈಜ್ಞಾನಿಕ ಬೆಳವಣಿಗೆಯನ್ನು ಬೆಂಬಲಿಸಲು ಸರ್ಕಾರ ಈಗಾಗಲೇ ಹಣಕಾಸು ನಿಯಮಗಳು ಮತ್ತು ಖರೀದಿ ನೀತಿಗಳಿಗೆ ಈಗಾಗಲೇ ಸುಧಾರಣೆ ತಂದಿದೆ.

## ಭಾರತದಲ್ಲಿ ಮಹಿಳೆಯರು...

- ಭಾರತದ ಬಾಹ್ಯಾಕಾಶ ಕಾರ್ಯಕ್ರಮಗಳ ಬಗ್ಗೆ ಜಗತ್ತು ಚರ್ಚಿಸುತ್ತಿರುವಾಗ, ಭಾರತೀಯ ಮಹಿಳಾ ವಿಜ್ಞಾನಿಗಳ ಬಗ್ಗೆಯೇ ಹೆಚ್ಚಾಗಿ ಚರ್ಚಿಸಲಾಗುತ್ತಿದೆ.
- ಒಂದು ದಶಕದ ಹಿಂದೆ ಮಹಿಳೆಯರ ಪೇಟೆಂಟ್ ಅರ್ಜಿಗಳು 100ಕ್ಕಿಂತ ಕಡಿಮೆಯಿದ್ದವು, ಆದರೆ ಈಗ ವಾರ್ಷಿಕವಾಗಿ 5,000ಕ್ಕಿಂತ ಹೆಚ್ಚು ತಲುಪಿವೆ.

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ(STEM) ಶಿಕ್ಷಣದಲ್ಲಿ ಮಹಿಳೆಯರ ಪಾಲು ಸುಮಾರು **ಶೇ.43** ರಷ್ಟಿದೆ, ಇದು ಜಾಗತಿಕ ಸರಾಸರಿಗಿಂತ ಹೆಚ್ಚಾಗಿದೆ.

## ಮಕ್ಕಳು ಮತ್ತು ಯುವಕರು...

- ದೇಶವು ಯುವಕರನ್ನು ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯತ್ತ ಪ್ರೋತ್ಸಾಹಿಸುತ್ತಿದೆ.
- ಈ ದೃಷ್ಟಿಕೋನದೊಂದಿಗೆ 10,000 ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ರಚಿಸಲಾಗಿದೆ.
- 10 ದಶಲಕ್ಷಕ್ಕೂ ಹೆಚ್ಚು ಮಕ್ಕಳು ಕುತೂಹಲದಿಂದ ಮತ್ತು ಸೃಜನಶೀಲತೆಯಿಂದ ಇವುಗಳಲ್ಲಿ ಪ್ರಯೋಗಗಳನ್ನು ನಡೆಸುತ್ತಿದ್ದಾರೆ.

## ಉದಯೋನ್ಮುಖ ಕ್ಷೇತ್ರಗಳಲ್ಲಿ ಪ್ರಯತ್ನಗಳನ್ನು ಹೆಚ್ಚಿಸಲು ಕರೆ...

ಉದಯೋನ್ಮುಖ ಕ್ಷೇತ್ರಗಳಲ್ಲಿ ಪ್ರಯತ್ನಗಳನ್ನು ಹೆಚ್ಚಿಸುವಂತೆ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಕರೆ ನೀಡಿದರು. ವಿಕಸಿತ ಭಾರತದ ಗುರಿ ಸಾಧಿಸಲು ಇದು ನಿರ್ಣಾಯಕವಾಗಿದೆ. ಆಹಾರ ಭದ್ರತೆಯನ್ನು ದಾಟಿ ಮುಂದಿನ ಪೀಳಿಗೆಯ ಜೈವಿಕ ಬಲವರ್ಧಿತ ಬೆಳೆಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಇಡೀ ಜಗತ್ತು ಅಪೌಷ್ಟಿಕತೆಯನ್ನು ಎದುರಿಸಲು ಸಹಾಯ ಮಾಡಬೇಕು ಎಂದು ಅವರು ಒತ್ತಾಯಿಸಿದರು. ನಾವೀನ್ಯತೆಗಳ ಮೂಲಕ ರಾಸಾಯನಿಕ ಗೊಬ್ಬರಗಳಿಗೆ ಪರ್ಯಾಯವಾಗಿ ಕಡಿಮೆ ವೆಚ್ಚದ ಮಣ್ಣಿನ ಆರೋಗ್ಯ ವರ್ಧಕಗಳು ಮತ್ತು ಜೈವಿಕ ಗೊಬ್ಬರಗಳನ್ನು ಅಭಿವೃದ್ಧಿಪಡಿಸುವಂತೆಯೂ ಪ್ರಧಾನ ಮಂತ್ರಿ ಒತ್ತಾಯಿಸಿದರು. ಭಾರತದ ಜೀನೋಮಿಕ್(ಜೀವಿಯ ಆನುವಂಶಿಕ ಮಾಹಿತಿ) ವೈವಿಧ್ಯತೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಮತ್ತು ವೈಯಕ್ತಿಕಗೊಳಿಸಿದ ಔಷಧಿಗಳು ಮತ್ತು ರೋಗ ಮುನ್ಸೂಚನೆಗೆ ಹೊಸ ನಿರ್ದೇಶನ ನೀಡಬೇಕು. ವಿಶ್ವದ ಮೇಲಿನ ನಮ್ಮ ಅವಲಂಬನೆ ಕಡಿಮೆ ಮಾಡಲು ಮತ್ತು ಈ ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸಲು ಸ್ವಚ್ಛ ಇಂಧನ ಸಂಗ್ರಹಣೆಯಲ್ಲಿ ಹೊಸ ಮತ್ತು ಕೈಗೆಟುಕುವ ನಾವೀನ್ಯತೆಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಪ್ರಧಾನ ಮಂತ್ರಿ ಅವರು ದೇಶದ ಕೃಷಿ ತಜ್ಞರು, ವಿಜ್ಞಾನಿಗಳು ಮತ್ತು ಸಂಶೋಧಕರಿಗೆ ಸಲಹೆ ನೀಡಿದರು.

ಕನಸು ಈಗ ವಾಸ್ತವವಾಗುತ್ತಿದೆ. ಈ ನಂಬಿಕೆಯಿಂದಾಗಿ ಭಾರತವು ನೈತಿಕ ಮತ್ತು ಮಾನವ ಕೇಂದ್ರಿತ ಕೃತಕ ಬುದ್ಧಿಮತ್ತೆ(ಎಐ)ಗಾಗಿ ಜಾಗತಿಕ ಮಾರ್ಗಸೂಚಿಯನ್ನು ರೂಪಿಸುತ್ತಿದೆ ಎಂದು ಪ್ರಧಾನ ಮಂತ್ರಿ ಮೋದಿ ಅವರು ಹೇಳಿಕೊಳ್ಳಲು ಕಾರಣವಾಗಿದೆ. ಭಾರತ ಇನ್ನು ಮುಂದೆ ತಂತ್ರಜ್ಞಾನದ ಗ್ರಾಹಕನಾಗಿರದೆ, ತಂತ್ರಜ್ಞಾನದ ಮೂಲಕ ಪರಿವರ್ತನೆಯ ಪ್ರವರ್ತಕನಾಗಿದೆ.

ಇಂದು ಭಾರತವು ವಿಶ್ವದ ಅತ್ಯಂತ ಯಶಸ್ವಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನು ಹೊಂದಿದೆ. 2,00,000 ಗ್ರಾಮ ಪಂಚಾಯಿತಿಗಳನ್ನು ಆಪ್ಟಿಕಲ್ ಫೈಬರ್‌ನೊಂದಿಗೆ ಸಂಪರ್ಕಿಸಲಾಗಿದೆ.

*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.*




# ಭಾರತದ ಬೆಳವಣಿಗೆಯು ಜಾಗತಿಕ ಅವಕಾಶಗಳನ್ನು ಹೆಚ್ಚಿಸುತ್ತಿದೆ

*ಭಾರತ ನಿಲ್ಲುವುದು ಇಲ್ಲ ಅಥವಾ ವಿರಮಿಸುವುದು ಇಲ್ಲ, 140 ಕೋಟಿ ಭಾರತೀಯರು ಒಟ್ಟಾಗಿ ವೇಗವಾಗಿ ಮುಂದುವರಿಯುತ್ತಿದ್ದಾರೆ. ಈ ಅಕ್ಟೋಬರ್‌ನಲ್ಲಿ ನಡೆದ ಎನ್‌ಡಿಟಿವಿ ವಿಶ್ವ ಶೃಂಗಸಭೆಯಲ್ಲಿ ಪ್ರಧಾನ ಮಂತ್ರಿ ಮೋದಿ ಅವರು ನೀಡಿದ ಸಂದೇಶ ಇದಾಗಿದೆ.*

ಕಳೆದ 3 ವರ್ಷಗಳಲ್ಲಿ ಭಾರತದ ಸರಾಸರಿ ಆರ್ಥಿಕ ಬೆಳವಣಿಗೆ ದರ ಶೇ.7.8ರಷ್ಟಿದ್ದು, ಇದು ದೇಶದ ತ್ವರಿತ ಆರ್ಥಿಕ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತಿದೆ. ಕೆಲವು ದಿನಗಳ ಹಿಂದೆ, ವಾಣಿಜ್ಯ ರಫ್ತಿನ ಅಂಕಿಅಂಶಗಳನ್ನು ಬಿಡುಗಡೆ ಮಾಡಲಾಯಿತು, ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಸುಮಾರು 7% ಹೆಚ್ಚಳ ತೋರಿಸುತ್ತಿದೆ. ಕಳೆದ ವರ್ಷ ಭಾರತವು ಸುಮಾರು 4.5 ಲಕ್ಷ ಕೋಟಿ ರೂ. ಮೌಲ್ಯದ ಕೃಷಿ ರಫ್ತುಗಳನ್ನು ದಾಖಲಿಸಿದೆ. ಹಲವಾರು ದೇಶಗಳ ಆರ್ಥಿಕ ಬೆಳವಣಿಗೆಯ ಅಸ್ಥಿರ ರೇಟಿಂಗ್ ನಡುವೆಯೂ, ಜಾಗತಿಕ ರೇಟಿಂಗ್ ಏಜೆನ್ಸಿ 'ಸ್ಟ್ಯಾಂಡರ್ಡ್ & ಪೂವರ್ಸ್ ಗ್ಲೋಬಲ್(ಎಸ್ & ಪಿ)' 17 ವರ್ಷಗಳಲ್ಲೇ ಮೊದಲ ಬಾರಿಗೆ ಭಾರತದ ಕ್ರೆಡಿಟ್ ರೇಟಿಂಗ್ ಅನ್ನು ಮೇಲ್ದರ್ಜೆಗೆ ಏರಿಸಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್) ಭಾರತದ ಬೆಳವಣಿಗೆಯ ಮುನ್ನೋಟವನ್ನು ಮೇಲ್ಮುಖವಾಗಿ ಪರಿಷ್ಕರಿಸಿದೆ. ಇತ್ತೀಚೆಗೆ, ಗೂಗಲ್ ಕಂಪನಿಯು ಭಾರತದ ಕೃತಕ ಬುದ್ಧಿಮತ್ತೆ(ಎಐ) ವಲಯದಲ್ಲಿ 15 ಶತಕೋಟಿ ಡಾಲರ್‌ಗಳ ಪ್ರಮುಖ ಹೂಡಿಕೆ ಘೋಷಿಸಿದೆ. ಆದರೆ ಭಾರತ-ಐರೋಪ್ಯ ಒಕ್ಕೂಟ ಮುಕ್ತ ವ್ಯಾಪಾರ ಸಂಘಟನೆ(ಇಎಫ್‌ಟಿಎ)ಯ ವ್ಯಾಪಾರ ಒಪ್ಪಂದದ ಅಡಿ, ಐರೋಪ್ಯ ರಾಷ್ಟ್ರಗಳು ಭಾರತದಲ್ಲಿ 100 ಶತಕೋಟಿ ಡಾಲರ್ ಹೂಡಿಕೆ ಮಾಡುವ ಪ್ರತಿಜ್ಞೆ ಮಾಡಿವೆ. ಇದರ ಜೊತೆಗೆ, ಹಸಿರು ಶಕ್ತಿ ಮತ್ತು ಸೆಮಿಕಂಡಕ್ಟರ್ ಕ್ಷೇತ್ರಗಳಲ್ಲಿ ಗಮನಾರ್ಹ ಹೂಡಿಕೆಗಳನ್ನು ಮಾಡಲಾಗುತ್ತಿದೆ.

ದೆಹಲಿಯಲ್ಲಿ ನಡೆದ ಎನ್‌ಡಿಟಿವಿ ಶೃಂಗಸಭೆಯಲ್ಲಿ "ತಡೆಯಲಾಗದ ಭಾರತ" ಎಂಬ ವಸ್ತು ವಿಷಯ ಶ್ಲಾಘಿಸಿದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ, ಇಂದಿನ ಭಾರತವು ನಿಲ್ಲುವ ಅಥವಾ ವಿರಮಿಸುವ ಮನಸ್ಥಿತಿಯಲ್ಲಿಲ್ಲ ಎಂದು ಹೇಳಿದರು. ಶೃಂಗಸಭೆಯಲ್ಲಿ ಚರ್ಚೆಯ ವಸ್ತು ವಿಷಯವಾದ "ಅರಿವಿರದ ವಿಚಾರ("Edge of the Unknown")"ವು ಜಗತ್ತಿಗೆ ಅನಿಶ್ಚಯವನ್ನು ಪ್ರತಿನಿಧಿಸಬಹುದು, ಆದರೆ ಭಾರತಕ್ಕೆ ಅದು ಅವಕಾಶದ ಹೆಬ್ಬಾಗಿಲು ಎಂದು ಹೇಳಿದ ಪ್ರಧಾನ ಮಂತ್ರಿ ಮೋದಿ, ಶತಮಾನಗಳಿಂದ ಭಾರತವು ಅಪರಿಚಿತ ಹಾದಿಗಳಲ್ಲಿ ಸಾಗುವ ಧೈರ್ಯವನ್ನು ತೋರಿಸಿದೆ ಎಂದು ಹೇಳಿದರು. ನಾವಿಡುವ "ಮೊದಲ ಹೆಜ್ಜೆ" ಪರಿವರ್ತನೆಯ ಆರಂಭವನ್ನು ಸೂಚಿಸುತ್ತದೆ ಎಂದು ಸಂತರು, ವಿಜ್ಞಾನಿಗಳು ಮತ್ತು ಮಾರ್ಗದರ್ಶಕರು ನಿರಂತರವಾಗಿ ಪ್ರದರ್ಶಿಸಿದ್ದಾರೆ. 2014ರ ಹಿಂದಿನ ಸವಾಲುಗಳನ್ನು ಉಲ್ಲೇಖಿಸಿದ ಪ್ರಧಾನ ಮಂತ್ರಿ, "ಹಣದುಬ್ಬರವು ನಮ್ಮನ್ನು ತಿಂದು ಹಾಕುವ ಮಾಟಗಾತಿ("ಮೆಹಂಗೈ ದಯಾನ್ ಖಯೇ

## ನಾಗರಿಕರ ಜೀವನ ಸುಲಭವಾಗುತ್ತಿರುವುದು ಹೀಗೆ...

2014ಕ್ಕೆ ಮೊದಲು ಇದ್ದ 300 ರೂ. ದರಕ್ಕೆ ಹೋಲಿಸಿದರೆ, ಈಗ **1** ಜಿಬಿ ಡೇಟಾದ ಬೆಲೆ ಕೇವಲ 10 ರೂ.

ಆದಾಯ ತೆರಿಗೆ ಕಡಿತ ಮತ್ತು ಜಿಎಸ್‌ಟಿ ಸುಧಾರಣೆಗಳಿಂದಾಗಿ ನಾಗರಿಕರ **2.5** ಲಕ್ಷ ಕೋಟಿ ರೂಪಾಯಿ ಉಳಿಸಲಾಗಿದ.

ಆಯುಷ್ಮಾನ್ ಭಾರತ್ ಯೋಜನೆಯಿಂದ **1.25** ಲಕ್ಷ ಕೋಟಿ ರೂಪಾಯಿ ಉಳಿಸಲಾಗಿದೆ.



**50%** ವಿಶ್ವದ ನೈಜ-ಸಮಯದ ಡಿಜಿಟಲ್ ವಹಿವಾಟಿನ ಪ್ರಮಾಣ ಭಾರತದಲ್ಲೇ ನಡೆಯುತ್ತಿದೆ.



**40,000** ಕೋಟಿ ರೂಪಾಯಿಯನ್ನು ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳ ಮೂಲಕ ಉಳಿಸಲಾಗಿದೆ.

ಇ-ಸಂಜೀವಿನಿ ಅಪ್ಲಿಕೇಶನ್ ಮೂಲಕ ರೋಗಿಗಳು **42+** ಕೋಟಿ ಹೊರರೋಗಿಗಳ ವಿಭಾಗ(ಒಪಿಡಿ)ದ ಆರೋಗ್ಯ ಸಮಾಲೋಚನೆಗಳನ್ನು ಸ್ವೀಕರಿಸಿದ್ದಾರೆ.

**12,000** ಕೋಟಿ ರೂಪಾಯಿಯನ್ನು ಸ್ಟೆಂಟ್‌ಗಳ ವೆಚ್ಚ ಕಡಿತದಿಂದಾಗಿ ಉಳಿಸಲಾಗಿದೆ.

**11** ವರ್ಷಗಳ ಹಿಂದೆ ಇದ್ದ 125ಕ್ಕಿಂತ ಹೆಚ್ಚಿನ ಜಿಲ್ಲೆಗಳಿಗೆ ಹೋಲಿಸಿದರೆ ಈಗ ದೇಶದ ಕೇವಲ 11 ಜಿಲ್ಲೆಗಳು ಮಾತ್ರಮಾವೋವಾದಿಗಳಿಂದ ಪ್ರಭಾವಿತವಾಗಿವೆ.

## 10 ಕೋಟಿಗೂ ಹೆಚ್ಚು ಕುಟುಂಬಗಳು ಉಚಿತ ಅನಿಲ ಸಂಪರ್ಕಗಳನ್ನು ಪಡೆದಿವೆ



ಆರ್ಥಿಕವಾಗಿ ದುರ್ಬಲ ವರ್ಗಗಳ ಜೀವನ ಸುಲಭಗೊಳಿಸಲು ಪ್ರಸ್ತುತ ಕೇಂದ್ರ ಸರ್ಕಾರವು, 10 ಕೋಟಿಗಿಂತ ಹೆಚ್ಚಿನ ಕುಟುಂಬಗಳಿಗೆ ಉಚಿತ ಅನಿಲ ಸಂಪರ್ಕಗಳನ್ನು ಒದಗಿಸಿದೆ. ಅನಿಲ ಸಂಪರ್ಕ ಪಡೆಯಲು ಸಂಸತ್ ಸದಸ್ಯರ ಶಿಫಾರಸು ಪತ್ರದ ಅಗತ್ಯವಿದ್ದ ಕಾಲವಿತ್ತು. ಸುಮಾರು 1 ದಶಕದ ಹಿಂದೆ, ಇಂಧನ ಸಬ್ಸಿಡಿಗಳ ಹೆಚ್ಚಳ ತಪ್ಪಿಸಲು ರಾತ್ರಿ 8ರಿಂದ ಬೆಳಗ್ಗೆ 8ರ ವರೆಗೆ ಪೆಟ್ರೋಲ್ ಪಂಪ್‌ಗಳನ್ನು ಮುಚ್ಚುವ ಯೋಜನೆಗಳಿದ್ದವು. ಇದಕ್ಕೆ ವ್ಯತಿರಿಕ್ತವಾಗಿ, ಪ್ರಸ್ತುತ ಸರ್ಕಾರವು ಈಗ ಭಾರತದಲ್ಲಿ ಪರ್ಯಾಯ ಇಂಧನಗಳು ಮತ್ತು ವಿದ್ಯುತ್ ಚಲನಶೀಲತೆಯಲ್ಲಿ ಹಿಂದೆಂದೂ ಕಾಣದ ಹೂಡಿಕೆಗಳನ್ನು ಮಾಡುತ್ತಿದೆ.



> **ನಾವು ಪ್ರತಿಯೊಂದು ಅಪಾಯವನ್ನು ಸುಧಾರಣೆಯಾಗಿ, ಪ್ರತಿಯೊಂದು ಸುಧಾರಣೆಯನ್ನು ಚೇತರಿಕೆಯಾಗಿ ಮತ್ತು ಪ್ರತಿಯೊಂದು ಚೇತರಿಕೆಯನ್ನು ಕ್ರಾಂತಿಯಾಗಿ ಪರಿವರ್ತಿಸಿದ್ದೇವೆ.**
>
> ***ನರೇಂದ್ರ ಮೋದಿ, ಪ್ರಧಾನ ಮಂತ್ರಿ***

ಜಾತ್ ಹೈ") ಎಂಬ ಹಣದುಬ್ಬರದ ಬಗೆಗಿನ ವಿಷಾದದ ಹಾಡುಗಳನ್ನು ಸಾಮಾನ್ಯವಾಗಿ ಕೇಳಲಾಗುತ್ತಿತ್ತು ಎಂದು ಹೇಳಿದರು.

ಆ ಸಮಯದಲ್ಲಿ, ಬಿಕ್ಕಟ್ಟಿನ ಜಾಲದಲ್ಲಿ ಸಿಲುಕಿರುವ ಭಾರತವು ಅದರಿಂದ ಹೊರಬರಲು ಸಾಧ್ಯವಾಗುವುದಿಲ್ಲ ಎಂದು ನಾಗರಿಕರು ಮತ್ತು ಜಾಗತಿಕ ಸಮುದಾಯ ಇಬ್ಬರೂ ಭಾವಿಸಿದರು. ಆದರೆ ಕಳೆದ 11 ವರ್ಷಗಳಲ್ಲಿ ಭಾರತವು ಆ ಎಲ್ಲಾ ಸಂದೇಹಗಳನ್ನು ನಿವಾರಿಸಿದೆ, ಎಲ್ಲಾ ಸವಾಲನ್ನು ಜಯಿಸಿದೆ ಎಂದು ಪ್ರಧಾನ ಮಂತ್ರಿ ಪ್ರತಿಪಾದಿಸಿದರು. ಭಾರತವು "ದುರ್ಬಲ 5"ರ ಸ್ಥಾನದಿಂದ ವಿಶ್ವದ ಅಗ್ರ 5 ಜಾಗತಿಕ ಆರ್ಥಿಕತೆಗಳಲ್ಲಿ ಒಂದಾಗಲು ಪರಿವರ್ತನೆಗೊಂಡಿದೆ. ಹಣದುಬ್ಬರ ಪ್ರಮಾಣ ಈಗ 2%ಗಿಂತ ಕಡಿಮೆಯಿದೆ, ಆರ್ಥಿಕ ಬೆಳವಣಿಗೆ ದರ 7% ದಾಟಿದೆ. "ಸೆಮಿಕಂಡಕ್ಟರ್ ಚಿಪ್‌ಗಳಿಂದ ಹಿಡಿದು ಹಡಗುಗಳ ನಿರ್ಮಾಣದವರೆಗೆ, ಆತ್ಮನಿರ್ಭರ ಭಾರತದ ವಿಶ್ವಾಸವು ಎಲ್ಲಾ ಕ್ಷೇತ್ರಗಳಲ್ಲೂ ಸ್ಪಷ್ಟವಾಗಿದೆ. ಜಿ-7 ದೇಶಗಳೊಂದಿಗೆ ಭಾರತದ ವ್ಯಾಪಾರವು 60%ಗಿಂತ ಹೆಚ್ಚಾಗಿದೆ." ಜಗತ್ತು ಈಗ ಭಾರತವನ್ನು ವಿಶ್ವಾಸಾರ್ಹ, ಜವಾಬ್ದಾರಿಯುತ ಮತ್ತು ಹೊಂದಾಣಿಕೆಯ ಪಾಲುದಾರನಾಗಿ ನೋಡುತ್ತಿದೆ. ಎಲೆಕ್ಟ್ರಾನಿಕ್ಸ್‌ನಿಂದ ಹಿಡಿದು ಔಷಧಗಳವರೆಗೆ ಮತ್ತು ಆಟೋಮೊಬೈಲ್‌ಗಳಿಂದ ಹಿಡಿದು ಮೊಬೈಲ್ ಉತ್ಪಾದನೆಯ ತನಕ, ಹೂಡಿಕೆಯ ಅಲೆಯೇ ಭಾರತಕ್ಕೆ ಹರಿಯುತ್ತಿದೆ. ಈ ಹೂಡಿಕೆಗಳು ಭಾರತವನ್ನು ಜಾಗತಿಕ ಪೂರೈಕೆ ಸರಪಳಿಯ ಪ್ರಮುಖ ಕೇಂದ್ರವಾಗಿಸಲು ಸಹಾಯ ಮಾಡುತ್ತಿವೆ ಎಂದು ಅವರು ಹೇಳಿದರು.

1960ರ ದಶಕದಲ್ಲಿ ಅಂದಿನ ಪ್ರಧಾನ ಮಂತ್ರಿಯವರು ಬಡವರು, ರೈತರು ಮತ್ತು ಕಾರ್ಮಿಕರಿಗೆ ಬ್ಯಾಂಕಿಂಗ್ ಸೇವೆಗಳನ್ನು ವಿಸ್ತರಿಸುವುದಾಗಿ ಹೇಳಿ, ಬ್ಯಾಂಕ್‌ಗಳ ರಾಷ್ಟ್ರೀಕರಣ ಸಮರ್ಥಿಸಿಕೊಂಡಿದ್ದರು ಎಂದು ಪ್ರಧಾನ ಮಂತ್ರಿ ಮೋದಿ ನೆನಪಿಸಿಕೊಂಡರು. ಆದಾಗ್ಯೂ ವಾಸ್ತವದಲ್ಲಿ, ಆಗಿನ ಆಡಳಿತ ಪಕ್ಷವು ಬ್ಯಾಂಕುಗಳನ್ನು ಜನರಿಂದ ದೂರವಿಟ್ಟಿತು, ಬಡವರು ಬ್ಯಾಂಕ್ ಬಾಗಿಲುಗಳ ಬಳಿ ಬರಲು ಸಹ ಹೆದರುತ್ತಿದ್ದರು. ಆದರೆ, 2014ರಲ್ಲಿ ಭಾರತದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಜನರಿಗೆ ಬ್ಯಾಂಕ್ ಖಾತೆ ಇರಲಿಲ್ಲ, ಪ್ರಸ್ತುತ ಕೇಂದ್ರ ಸರ್ಕಾರವು ಕಾರ್ಯಾಚರಣೆ ಮಾದರಿಯಲ್ಲಿ 50 ಕೋಟಿಗೂ ಹೆಚ್ಚು ಜನ ಧನ್ ಖಾತೆಗಳನ್ನು ತೆರೆಯಿತು. ಇಂದು ಭಾರತದ ಪ್ರತಿಯೊಂದು ಹಳ್ಳಿಯೂ ಕನಿಷ್ಠ ಒಂದು ಬ್ಯಾಂಕಿಂಗ್ ಟಚ್‌ಪಾಯಿಂಟ್ ಹೊಂದಿದೆ. ಇದರ ಪರಿಣಾಮವಾಗಿ, ಕಳೆದ 11 ವರ್ಷಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು, ಸಣ್ಣ ರೈತರು, ಹೈನುಗಾರರು, ಮೀನುಗಾರರು, ಬೀದಿ ಬದಿ ವ್ಯಾಪಾರಿಗಳು ಮತ್ತು ವಿಶ್ವಕರ್ಮ ಕಸುಬುದಾರರಿಗೆ ಬ್ಯಾಂಕ್ ಗ್ಯಾರಂಟಿ ಇಲ್ಲದೆ ಲಕ್ಷಾಂತರ ಕೋಟಿ ರಾಪಾಯಿ ಸಾಲ ನೀಡಲಾಗಿದೆ ಎಂದರು.

*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.*



**ರಾಷ್ಟ್ರ, ಜನರು ಮತ್ತು ಪರಿಸರಕ್ಕೆ ಸೇವೆ ಸಲ್ಲಿಸಲು ಎಲ್ಲವುಗಳ ಸಮರ್ಪಣೆ**

# ಪ್ರಧಾನಮಂತ್ರಿ ಮೋದಿ ಅವರ ಉಡುಗೊರೆಗಳು

## ಸಮರ್ಪಣೆಯ ಹೊಸ ನೋಟ

*ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಮ್ಮ ವೇತನದಿಂದ ಉಳಿತಾಯ ಮಾಡಿದ ಹಣ, ಪ್ರಶಸ್ತಿಗಳು ಮತ್ತು ಸ್ಮರಣಿಕೆಗಳ ಹರಾಜಿನ ಮೂಲಕ ಸಂಗ್ರಹಿಸಿದ ಹಣವನ್ನು ಸಾರ್ವಜನಿಕ ಸೇವೆ ಮತ್ತು ಪರಿಸರ ಉದ್ದೇಶಗಳಿಗಾಗಿ ಸಮರ್ಪಿಸುತ್ತಾರೆ. ಅವರ ಉಡುಗೊರೆಗಳು ಮತ್ತು ಸ್ಮರಣಿಕೆಗಳ 7ನೇ ಹರಾಜಿನ ಮೂಲಕ ನಮಾಮಿ ಗಂಗೆ ಯೋಜನೆಗೆ ಹಣ ಸಂಗ್ರಹಿಸಲಾಯಿತು.*

**"ನನ್ನ ಜೀವನದ ಪ್ರತಿ ಕ್ಷಣ ಮತ್ತು ನನ್ನ ದೇಹದ ಪ್ರತಿ ಕಣವನ್ನು ರಾಷ್ಟ್ರ ಮತ್ತು ನಾಗರಿಕರ ಸೇವೆಗೆ ಸಮರ್ಪಿಸುವುದಾಗಿ ನಾನು ಸಂಕಲ್ಪ ತೊಡುತ್ತೇನೆ."** ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಈ ಹೇಳಿಕೆಯನ್ನು ಹಲವು ಸಂದರ್ಭಗಳಲ್ಲಿ ಪುನರಾವರ್ತಿಸಿದ್ದಾರೆ. ಜತೆಗೆ, ಈ ಮನೋಭಾವವನ್ನು ಜೀವಂತವಾಗಿಸುತ್ತಿದ್ದಾರೆ. ಇಲ್ಲಿಯವರೆಗೆ ಪ್ರಧಾನ ಮಂತ್ರಿ ಮೋದಿ ತಮ್ಮ ವೇತನದ ಉಳಿತಾಯ, ಉಡುಗೊರೆಗಳ ಆದಾಯ ಮತ್ತು ಹರಾಜಿನ ಮೂಲಕ ಸಂಗ್ರಹಿಸಿದ ಸ್ಮರಣಿಕೆಗಳು ಮತ್ತು ಸಾರ್ವಜನಿಕ ಕಲ್ಯಾಣಕ್ಕಾಗಿ ಪಡೆದ ಬಹುಮಾನಗಳಿಂದ 100 ಕೋಟಿ ರೂ.ಗಿಂತ ಹೆಚ್ಚಿನ ಹಣವನ್ನು ದಾನ ಮಾಡುವ ಮೂಲಕ ಸಾರ್ವಜನಿಕ ಕಲ್ಯಾಣ ಮತ್ತು ಸಮರ್ಪಣೆಯ ಹೊಸ ಚಿತ್ರಣವನ್ನು ಪ್ರಸ್ತುತಪಡಿಸಿದ್ದಾರೆ. ತಮ್ಮ 25 ವರ್ಷಗಳ ಅಧಿಕಾರದಲ್ಲಿ ಪ್ರಧಾನ ಮಂತ್ರಿ ಮೋದಿ ಅವರು ರಾಷ್ಟ್ರ ಸೇವೆಗೆ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ ಮಾತ್ರವಲ್ಲದೆ, ತಮ್ಮ ಸಂಕಲ್ಪಕ್ಕೆ ಅನುಗುಣವಾಗಿ, ತಮ್ಮ ಜೀವನದ ಪ್ರತಿ ಕ್ಷಣ ಮತ್ತು ಪ್ರತಿ ಕಣವನ್ನು ಗಂಗಾ ಮಾತೆಯ ಸೇವೆಗೆ ಸಮರ್ಪಿಸಿದ್ದಾರೆ. ಈ ಸಂದರ್ಭದಲ್ಲಿ, ಸಂಸ್ಕೃತಿ ಸಚಿವಾಲಯವು ಪ್ರಧಾನ ಮಂತ್ರಿ ಮೋದಿ ಸ್ಮರಣಿಕೆಗಳ ಹರಾಜಿನ 7ನೇ ಆವೃತ್ತಿ ಪ್ರಾರಂಭಿಸಿತು, ಇದರಲ್ಲಿ 1,300ಕ್ಕೂ ಹೆಚ್ಚು ಉಡುಗೊರೆಗಳನ್ನು ಮಾರಾಟಕ್ಕೆ ಇಡಲಾಗಿತ್ತು.

ಸೆಪ್ಟೆಂಬರ್ 17ರಿಂದ ಅಕ್ಟೋಬರ್ 31ರ ವರೆಗೆ, ಈ ಸ್ಮರಣಿಕೆಗಳು ಮತ್ತು ಬಹುಮಾನಗಳ ಖರೀದಿಗಾಗಿ ಆನ್‌ಲೈನ್ ಹರಾಜುದಾರರು ಸಹ ಸೇರಿದ್ದರು. ತಿರುಪತಿ ಬಾಲಾಜಿ ದೇವರ ಕಲಾಕೃತಿಗೆ 179 ಬಿಡ್ಡರ್‌ಗಳು ಅತಿ ಹೆಚ್ಚಿನ ಹರಾಜು ನಡೆಸಿದ್ದು, ಅರ್ಧನಾರೀಶ್ವರ ಮತ್ತು ಶ್ರೀ ವೆಂಕಟೇಶ್ವರ ಬಾಲಾಜಿಯ ಲೋಹದ ಪ್ರತಿಮೆಗೆ ತಲಾ 15 ಲಕ್ಷ ರೂ. ಹರಾಜು ನಡೆಯಿತು.

## ವೆಚ್ಚ ಕಡಿತ ಮತ್ತು ಉಡುಗೊರೆ ಹರಾಜಿನಿಂದ ಬಂದ ಉಳಿತಾಯವನ್ನು ಪ್ರಧಾನ ಮಂತ್ರಿ ಮೋದಿ ದೇಣಿಗೆ ನೀಡಿದ್ದಾರೆ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 41ನೇ ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿದರು. ಅದರಲ್ಲಿ ಬಂದ 1 ಲಕ್ಷ ರೂ. ಬಹುಮಾನ ಮೊತ್ತವನ್ನು ನಮಾಮಿ ಗಂಗೆ ಯೋಜನೆಗೆ ದಾನ ಮಾಡಿದರು.

- ಗುಜರಾತ್ ಮುಖ್ಯಮಂತ್ರಿಯಾಗಿ ತಮ್ಮ ಅಧಿಕಾರಾವಧಿ ಪೂರ್ಣಗೊಳಿಸಿದ ನಂತರ, ಅವರು ರಾಜ್ಯ ಸರ್ಕಾರಿ ನೌಕರರ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ತಮ್ಮ ಉಳಿತಾಯದಿಂದ 21 ಲಕ್ಷ ರೂ. ದೇಣಿಗೆ ನೀಡಿದರು.
- ಪ್ರಧಾನ ಮಂತ್ರಿ ಮೋದಿ ಅವರು ಮುಖ್ಯಮಂತ್ರಿಯಾಗಿ ಪಡೆದ ಎಲ್ಲಾ ಉಡುಗೊರೆಗಳನ್ನು ಹರಾಜು ಹಾಕಿ 89.96 ಕೋಟಿ ರೂ. ಸಂಗ್ರಹಿಸಿ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ವೆಚ್ಚ ಮಾಡುವ ಕನ್ಯಾ ಕೆಲವಾಣಿ ನಿಧಿಗೆ ದೇಣಿಗೆ ನೀಡಿದರು.
- ಪ್ರಧಾನ ಮಂತ್ರಿ ಮೋದಿ ಅವರು ಆರಂಭಿಕ ಅವಧಿಯಲ್ಲಿ ಪಡೆದ ಸ್ಮರಣಿಕೆಗಳ ಹರಾಜಿನಲ್ಲಿ 3.4 ಕೋಟಿ ರೂ. ಸಂಗ್ರಹಿಸಿ ನಮಾಮಿ ಗಂಗೆ ಮಿಷನ್‌ಗೆ ದೇಣಿಗೆ ನೀಡಿದರು.
- 2015ರಲ್ಲಿ ಪ್ರಧಾನ ಮಂತ್ರಿ ಮೋದಿ ಅವರು ಆ ಸಮಯದಲ್ಲಿ ಪಡೆದ ಉಡುಗೊರೆಗಳಿಗಾಗಿ ಸೂರತ್‌ನಲ್ಲಿ ಹರಾಜು ಆಯೋಜಿಸಿದ್ದರು. ಆ ಹರಾಜಿನಿಂದ ಸಂಗ್ರಹಿಸಿದ 8.33 ಕೋಟಿ ರೂ. ಹಣವನ್ನು ನಮಾಮಿ ಗಂಗೆ ಮಿಷನ್‌ಗೆ ದೇಣಿಗೆ ನೀಡಿದರು.
- ಪ್ರಧಾನ ಮಂತ್ರಿ ಮೋದಿ ಅವರು ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ತಮ್ಮ ಖರ್ಚು ವೆಚ್ಚ ಕಡಿತಗೊಳಿಸುವ ಮೂಲಕ ಸಂಗ್ರಹಿಸಿದ 2.25 ಲಕ್ಷ ರೂ. ಹಣವನ್ನು ದೇಣಿಗೆ ನೀಡಿದರು.
- ಸಿಯೋಲ್ ಶಾಂತಿ ಪ್ರಶಸ್ತಿಯಿಂದ ಬಂದ 1.3 ಕೋಟಿ ರೂ.ವನ್ನು ನಮಾಮಿ ಗಂಗೆ ಮಿಷನ್‌ಗೆ ದೇಣಿಗೆ ನೀಡಿದರು.
- ಕುಂಭಮೇಳದಲ್ಲಿ ನೈರ್ಮಲ್ಯ ಕಾರ್ಮಿಕರ ಕಲ್ಯಾಣ ನಿಧಿಗೆ ಅವರು ತಮ್ಮ ವೈಯಕ್ತಿಕ ಉಳಿತಾಯದಿಂದ 21 ಲಕ್ಷ ರೂ. ದೇಣಿಗೆ ನೀಡಿದರು.

## ಹರಾಜಿನಲ್ಲಿ ಅತಿ ಹೆಚ್ಚಿನ ಹಣ ಪಡೆದ ಉಡುಗೊರೆ



ಮಾನವ ಮತ್ತು ದೈವಿಕ ಸ್ವರೂಪ ಹೊಂದಿರುವ ಸೊಗಸಾದ ಕರಕುಶಲತೆಯ ಸಂಕೇತವಾದ ಅರ್ಧನಾರೀಶ್ವರನ ಸುಂದರವಾದ ಲೋಹದ ಪ್ರತಿಮೆಯು ಭಗವಾನ್ ಶಿವ ಮತ್ತು ಅವನ ಪತ್ನಿ ಪಾರ್ವತಿಯ ಸಂಯೋಜಿತ ರೂಪವನ್ನು ಪ್ರತಿನಿಧಿಸುತ್ತದೆ. ಈ ಉಡುಗೊರೆಗೆ ಕನಿಷ್ಠ ಹರಾಜು ಮೊತ್ತ 1.10 ಲಕ್ಷ ರೂ. ನಿಗದಿಯಾಗಿತ್ತು, 31 ಹರಾಜುಗಳ ನಂತರ ಅದು 15 ಲಕ್ಷ ರೂ.ಗೆ ಮಾರಾಟವಾಯಿತು.



ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪ್ರದಾನ ಮಾಡಲಾದ ಶ್ರೀ ವೆಂಕಟೇಶ್ವರ ಬಾಲಾಜಿಯ ಸುಂದರ ಪ್ರತಿಮೆ 2ನೇ ಅತಿ ಹೆಚ್ಚಿನ ಹರಾಜಿಗೆ ಒಳಗಾಯಿತು. ಹರಾಜು 1.10 ಲಕ್ಷ ರೂ.ನಿಂದ ಪ್ರಾರಂಭವಾಗಿ, 36ನೇ ಹರಾಜಿನ ನಂತರ 15 ಲಕ್ಷ ರೂ.ಗೆ ಮಾರಾಟವಾಯಿತು.

### ಅತ್ಯಂತ ಬೇಡಿಕೆಯ ಉಡುಗೊರೆಗಳು

**ತಿರುಪತಿ ಬಾಲಾಜಿ ಸ್ಮರಣಿಕೆ:** ತಿರುಪತಿ ಬಾಲಾಜಿಯ ಬೆಳ್ಳಿ ಬಣ್ಣದ ಸ್ಮರಣಿಕೆಗೆ ನಡೆದ ಹರಾಜಿನಲ್ಲಿ ಅತಿ ಹೆಚ್ಚು 179 ಜನರು ಭಾಗವಹಿಸಿದ್ದರು, ಕಲಾತ್ಮಕ ಕೌಶಲ್ಯ ಮತ್ತು ಕರಕುಶಲತೆಯಿಂದ ಕೂಡಿದ್ದ ಈ ಸ್ಮರಣಿಕೆಗೆ ಆರಂಭಿಕ ಹರಾಜು ಬೆಲೆ 27,500 ರೂ. ನಿಗದಿಯಾಗಿ, ಅಂತಿಮ ಹರಾಜಿನಲ್ಲಿ 1,26,100 ರೂ.ಗೆ ಮಾರಾಟವಾಯಿತು.

**ರಾಮ ದರ್ಬಾರ್:** ಪ್ರಧಾನ ಮಂತ್ರಿ ಮೋದಿ ಅವರಿಗೆ ಉಡುಗೊರೆಯಾಗಿ ಬಂದಿದ್ದ ರಾಮ ದರ್ಬಾರ್‌ನ ಬೆಳ್ಳಿಯ ವಿಗ್ರಹ ಖರೀದಿಸಲು 176 ಜನರು ಇಚ್ಛೆ ವ್ಯಕ್ತಪಡಿಸಿದರು. ಇದರ ಮೂಲ ಬೆಲೆ 22 ಸಾವಿರ ರೂ. ನಿಗದಿ ಮಾಡಲಾಗಿತ್ತು, ಇದು 176ನೇ ಹರಾಜು ಸುತ್ತಿನಲ್ಲಿ 1,05,100 ರೂ.ಗೆ ಮಾರಾಟವಾಯಿತು.

**ಕಣಿ ಪಶ್ಮಿನಾ ಶಾಲು 2.20 ಲಕ್ಷ ರೂ.ಗೆ ಮಾರಾಟ:** ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಉಡುಗೊರೆಯಾಗಿ ಬಂದಿದ್ದ ಕಣಿ ಪಶ್ಮಿನಾ ಶಾಲು ಕಾಶ್ಮೀರಿ ನೇಯ್ಗೆ ಕಲೆಯ ವಿಶಿಷ್ಟ ಉದಾಹರಣೆಯಾಗಿದೆ. ಇದನ್ನು ಕೈಮಗ್ಗದಲ್ಲಿ ಪಶ್ಮಿನಾ ಉಣ್ಣೆಯಿಂದ ನೇಯಲಾಗುತ್ತದೆ. ಈ ಶಾಲಿನ ಇ-ಹರಾಜು 3,300 ರೂ.ನಿಂದ ಪ್ರಾರಂಭವಾಯಿತು. ಅಭಿಮಾನಿಗಳು ಎಷ್ಟು ಹರಾಜು ಕೂಗಿದರು ಎಂದರೆ 69ನೇ ಸುತ್ತಿನ ಹರಾಜಿನಲ್ಲಿ 2.20 ಲಕ್ಷ ರೂ.ಗೆ ಮಾರಾಟವಾಯಿತು.







ಮೊದಲ ಹರಾಜು 2019 ಜನವರಿಲ್ಲಿ ನಡೆದಿತ್ತು. ಅಂದಿನಿಂದ ಹಿಂದಿನ ವರೆಗಿನ 6 ಆವೃತ್ತಿಗಳಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಬಂದಿದ್ದ ಸುಮಾರು 9,000 ಉಡುಗೊರೆಗಳನ್ನು ಹರಾಜಿಗೆ ಇಡಲಾಗಿತ್ತು. ನಮಾಮಿ ಗಂಗೆ ಯೋಜನೆಗೆ ಬೆಂಬಲವಾಗಿ ಈ ಹರಾಜುಗಳಿಂದ 50 ಕೋಟಿ ರೂ.ಗಿಂತ ಹೆಚ್ಚಿನ ಹಣ ಸಂಗ್ರಹವಾಗಿದೆ. ಈ ಉದಾತ್ತ ಉದ್ದೇಶಕ್ಕಾಗಿ ಎಲ್ಲಾ ಸ್ಮರಣಿಕೆಗಳನ್ನು ಸಮರ್ಪಿಸಿದ ಮೊದಲ ಪ್ರಧಾನ ಮಂತ್ರಿ ಮೋದಿ ಅವರಾಗಿದ್ದಾರೆ.

ಐತಿಹಾಸಿಕ ಸಾಧನೆ

# ಇಂಧನ ಉತ್ಪದನಾ ಸಾಮರ್ಥ್ಯ 500 ಗಿಗಾವ್ಯಾಟ್ ದಾಟಿದೆ

*ಭಾರತದಲ್ಲಿ ಪರಮಾಣು ಶಕ್ತಿಯು ಸ್ವಚ್ಛ ಮತ್ತು ಕೈಗೆಟುಕುವ ವಿದ್ಯುತ್ ಮೂಲವಾಗಿ ಮಾತ್ರವಲ್ಲದೆ, ಇಂಧನ ಕ್ಷೇತ್ರದ ಸ್ವಾವಲಂಬನೆಯತ್ತ ಒಂದು ಪ್ರಮುಖ ಹೆಜ್ಜೆಯಾಗಿ ಹೊರಹೊಮ್ಮುತ್ತಿದೆ. ದೇಶದ ಬೆಳೆಯುತ್ತಿರುವ ಇಂಧನ ಅಗತ್ಯಗಳನ್ನು ಪೂರೈಸುವಾಗ, ಪರಮಾಣು ಶಕ್ತಿಯು ಭವಿಷ್ಯದ ಅಭಿವೃದ್ಧಿಗೆ ಹೊಸ ಸಾಧ್ಯತೆಗಳನ್ನು ತೆರೆಯುತ್ತಿದೆ.*

ಭಾರತವು ಇತ್ತೀಚೆಗೆ ಇಂಧನ ವಲಯದಲ್ಲಿ ಎರಡು ಐತಿಹಾಸಿಕ ಮೈಲಿಗಲ್ಲುಗಳನ್ನು ಸಾಧಿಸಿದೆ, ಇದು ಸ್ವಚ್ಛ, ಸುರಕ್ಷಿತ ಮತ್ತು ಸ್ವಾವಲಂಬಿ ಇಂಧನದತ್ತ ದೇಶದ ನಿರಂತರ ಪ್ರಗತಿಯನ್ನು ಪ್ರದರ್ಶಿಸುತ್ತದೆ. ದೇಶದ ಒಟ್ಟು ಸ್ಥಾಪಿತ ವಿದ್ಯುತ್ ಸಾಮರ್ಥ್ಯವು 500 ಗಿಗಾವ್ಯಾಟ್ ದಾಟಿದ್ದು, 2025 ಸೆಪ್ಟೆಂಬರ್ 30ರ ವೇಳೆಗೆ 500.89 ಗಿಗಾವ್ಯಾಟ್ ಉತ್ಪಾದನಾ ಸಾಮರ್ಥ್ಯ ತಲುಪಿದೆ. ಈ ಸಾಧನೆಯು ಕೇಂದ್ರ ಸರ್ಕಾರದ ಅನೇಕ ವರ್ಷಗಳ ಬಲವಾದ ನೀತಿ ನಿರ್ಧಾರಗಳು, ನಿರಂತರ ಹೂಡಿಕೆಗಳು ಮತ್ತು ಇಂಧನ ವಲಯದಲ್ಲಿ ಅಚಲವಾದ ದೃಢಸಂಕಲ್ಪದ ಫಲಿತಾಂಶವಾಗಿದೆ.

### ಹೆಚ್ಚುತ್ತಿರುವ ಪರಮಾಣು ಸಾಮರ್ಥ್ಯ

- ಕಳೆದ 10 ವರ್ಷಗಳಲ್ಲಿ ಭಾರತದ ಪರಮಾಣು ವಿದ್ಯುತ್ ಸಾಮರ್ಥ್ಯವು ಶೇಕಡ 70ರಷ್ಟು ಹೆಚ್ಚಾಗಿದೆ.
- ಪ್ರಸ್ತುತ, ದೇಶದಲ್ಲಿ ಉತ್ಪಾದಿಸುವ ಒಟ್ಟು ವಿದ್ಯುತ್‌ಗೆ ಪರಮಾಣು ವಿದ್ಯುತ್ ಸರಿಸುಮಾರು ಶೇಕಡ 3ರಷ್ಟು ಕೊಡುಗೆ ನೀಡುತ್ತಿದೆ.
- 2047ರ ವೇಳೆಗೆ 100 ಗಿಗಾವ್ಯಾಟ್ ಪರಮಾಣು ಇಂಧನ ಉತ್ಪಾದನಾ ಸಾಮರ್ಥ್ಯದ ಗುರಿಯೊಂದಿಗೆ ದೇಶವು ಮುಂದುವರಿಯುತ್ತಿದೆ.
- 2024-25 ರಲ್ಲಿ ಪರಮಾಣು ವಿದ್ಯುತ್ ಸ್ಥಾವರಗಳು 56,681 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಿವೆ.

### ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಒಂದು ಮಹತ್ವದ ದಿನ

2025 ಜುಲೈ 29ರಂದು ಭಾರತವು ಇಂಧನ ಉತ್ಪಾದನೆಯಲ್ಲಿ ಇದುವರೆಗಿನ ಅತ್ಯಧಿಕ ಪ್ರಮಾಣದ ನವೀಕರಿಸಬಹುದಾದ ಇಂಧನ ಉತ್ಪಾದನೆ ಮಾಡಿದೆ. ಈ ದಿನದಂದು, ದೇಶದ ಒಟ್ಟು ವಿದ್ಯುತ್ ಬೇಡಿಕೆಯಾದ 203 ಗಿಗಾವ್ಯಾಟ್ ಪೈಕಿ 51.5%ರಷ್ಟು ಪ್ರಮಾಣವನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಪೂರೈಸಿದೆ. ಮೊದಲ ಬಾರಿಗೆ, ಭಾರತದ ಅರ್ಧಕ್ಕಿಂತ ಹೆಚ್ಚಿನ ವಿದ್ಯುತ್ ಒಂದೇ ದಿನದಲ್ಲಿ ಹಸಿರು ಮೂಲಗಳಿಂದ ಬಂದಿದೆ.

### 2031-32ರ ವೇಳೆಗೆ 22,000 ಮೆಗಾವ್ಯಾಟ್‌ಗಿಂತ ಹೆಚ್ಚಿನ ಪರಮಾಣು ವಿದ್ಯುತ್ ಉತ್ಪಾದನೆ ಗುರಿ

ಕೇಂದ್ರ ಸರ್ಕಾರವು ಮಹತ್ವಾಕಾಂಕ್ಷೆಯ ಪರಮಾಣು ಶಕ್ತಿ ಮಿಷನ್ ಘೋಷಿಸಿದೆ, ಇದು 2047ರ ವೇಳೆಗೆ 100 ಗಿಗಾವ್ಯಾಟ್ ಪರಮಾಣು ವಿದ್ಯುತ್ ಉತ್ಪಾದನೆ ಸಾಮರ್ಥ್ಯ ತಲುಪುವ ಗುರಿ ಹೊಂದಿದೆ. ಪರಮಾಣು ಶಕ್ತಿಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ವಲಯದ ಭಾಗವಹಿಸುವಿಕೆ ವಿಸ್ತರಿಸಲು ಸರ್ಕಾರವು ಅಗತ್ಯವಾದ ಪ್ರಕ್ರಿಯೆ ಪ್ರಾರಂಭಿಸಿದೆ. ಪ್ರಸ್ತುತ, ದೇಶದ ಸ್ಥಾಪಿತ ಪರಮಾಣು ವಿದ್ಯುತ್ ಸಾಮರ್ಥ್ಯವು ಒಟ್ಟು 8,780 ಮೆಗಾವ್ಯಾಟ್ ಸಾಮರ್ಥ್ಯದ 24 ರಿಯಾಕ್ಟರ್‌ಗಳನ್ನು ಒಳಗೊಂಡಿದೆ(ಆರ್ ಎಪಿಎಸ್1-100 ಮೆಗಾವ್ಯಾಟ್) ವಿಸ್ತೃತಗೊಳಿಸಿರುವ ಸ್ಥಗಿತ ಹೊರತುಪಡಿಸಿ). ಅವುಗಳು ಕ್ರಮೇಣ ಪೂರ್ಣಗೊಂಡ ನಂತರ, 2031-32ರ ವೇಳೆಗೆ ಪರಮಾಣು ವಿದ್ಯುತ್ ಸಾಮರ್ಥ್ಯವು 22,380 ಮೆಗಾವ್ಯಾಟ್ ತಲುಪುವ ನಿರೀಕ್ಷೆಯಿದೆ.

### ನವೀಕರಿಸಬಹುದಾದ ಇಂಧನ ಮೂಲಗಳ ಪಾಲು

**127.33** ಗಿಗಾ ವ್ಯಾಟ್ ಸೌರಶಕ್ತಿ

**53.12** ಗಿಗಾ ವ್ಯಾಟ್ ಪವನಶಕ್ತಿ

**100** ಗಿಗಾ ವ್ಯಾಟ್ 2047ರ ವೇಳೆಗೆ ಸಾಧಿಸಬೇಕಾದ ಪರಮಾಣು ವಿದ್ಯುತ್ ಸಾಮರ್ಥ್ಯ ಗುರಿ

### ಸ್ವಚ್ಛ ಇಂಧನ ಉತ್ಪಾದನೆ ಪಾಲು ವೇಗವಾಗಿ ಬೆಳೆಯುತ್ತಿದೆ

2025-26ರ ಹಣಕಾಸು ವರ್ಷದಲ್ಲಿ(ಏಪ್ರಿಲ್-ಸೆಪ್ಟೆಂಬರ್ 2025), ಭಾರತವು 28 ಗಿಗಾ ವ್ಯಾಟ್ ಉರವಲುಯೇತರ ಇಂಧನ ಸಾಮರ್ಥ್ಯವನ್ನು ಮತ್ತು 5.1 ಗಿಗಾ ವ್ಯಾಟ್ ಉರವಲು ಇಂಧನ ಉತ್ಪಾದನೆ ಮಾಡಿದೆ. ಈ ಉತ್ಪಾದನಾ ಸಾಮರ್ಥ್ಯವು ಸ್ವಚ್ಛ ಇಂಧನ ಉತ್ಪಾದನೆಯ ಪಾಲು ಎಷ್ಟು ವೇಗವಾಗಿ ಹೆಚ್ಚುತ್ತಿದೆ ಎಂಬುದನ್ನು ತೋರಿಸುತ್ತಿದೆ.



“ ನಮ್ಮ ಸರ್ಕಾರವು ಸ್ವಚ್ಛ ಇಂಧನ ಅಭಿಯಾನವನ್ನು ಸಾಮೂಹಿಕ ಆಂದೋಲನವನ್ನಾಗಿ ರೂಪಿಸಲು ಕೆಲಸ ಮಾಡುತ್ತಿದೆ.

**ನರೇಂದ್ರ ಮೋದಿ, ಪ್ರಧಾನ ಮಂತ್ರಿ**



Narendra Modi
@narendramodi

हम देशभर के अपने किसान भाई-बहनों के कल्याण के लिए प्रतिबद्ध हैं। इसी दिशा में हमारी सरकार ने एक बड़ा कदम उठाते हुए 2025-26 के रबी सीजन के लिए फॉस्फोरस और पोटाश उर्वरकों पर सब्सिडी को मंजूरी दी है। इससे जहां अन्नदाताओं को किफायती दर पर उर्वरक उपलब्ध हो सकेंगे, वहीं उनकी कमाई भी बढ़ेगी।



रक्षा मंत्री कार्यालय/ RMO India
@DefenceMinIndia

हम सबने देखा, कि कैसे आकाश missile system, ब्रह्मोस, AkashTeer Air defence control System और अन्य कई प्रकार के indigenous equipment, platforms ने Operation Sindoor के दौरान अपना पराक्रम दिखाया। हमारे indigenous platforms की सफलता ने, न केवल regional बल्कि international level पर भी, भारत की साख को बढ़ाया है: रक्षा मंत्री श्री @rajnathsingh



Amit Shah
@AmitShah

आजाद हिन्द फौज के स्थापना दिवस पर नेताजी सुभाष चंद्र बोस जी और INA के वीर सेनानियों को नमन।

आजाद हिन्द फौज के माध्यम से नेताजी सुभाष चंद्र बोस जी ने क्रांतिकारियों के मन में यह विश्वास प्रबल किया कि अपनी सेना और सैन्य अभियानों के बल पर देशवासी स्वाधीनता प्राप्त कर सकते हैं। नेताजी के नेतृत्व में वर्ष 1943 में ही अंडमान और निकोबार में तिरंगा फहराकर भारत की आजादी की घोषणा करने वाले INA के सेनानी अनंतकाल तक राष्ट्रप्रथम की प्रेरणा बने रहेंगे।



Nitin Gadkari
@nitin_gadkari

🇮🇳 भारतीय परमाणु ऊर्जा कार्यक्रम के जनक, महान वैज्ञानिक 🇮🇳 पद्मभूषण डॉ. होमी जहांगीर भाभा जी की जयंती पर उन्हें सादर नमन।🙏

#डॉ_होमी_जहांगीर_भाभा
#DrHomiJehangirBhabha



Dr Mansukh Mandaviya
@mansukhmandviya

2 Crore+ Strong and Growing !

MY Bharat is uniting Yuva-Shakti to realise PM Modi's dream of a Viksit Bharat.

Arjun Ram Meghwal
@arjunrammeghwal

मंत्रिमंडल ने 8वें केंद्रीय वेतन आयोग की संदर्भ शर्तों (Terms of Reference) को मंजूरी दी है।

आयोग अपनी सिफारिशें 18 महीनों के भीतर प्रस्तुत करेगा।

#CabinetDecisions |
#8thPayCommission|@AshwiniVaishnaw

## 'Op Sindoor, Fight Against Maoists Made Fests Vibrant'

**MANN KI BAAT**

PM hails impressive sales due to GST Bachat Utsav

Our Political Bureau

New Delhi: Prime Minister Narendra Modi asserted in his monthly 'Mann ki Baat' address on Sunday that Operation Sindoor and the successful fight against Maoist terror have made festivals more vibrant. He also hailed the impressive sales during the festivals due to GST Bachat Utsav. He wished the people, especially those from poll-bound Bihar, on the occasion of Chhath Puja. "The Mahaparva of Chhath is a reflection of the deep unity between culture, nature and society."

Mahaparva of Chhath is a reflection of deep unity, says Modi

## Indian maritime sector has seen historic progress: Modi

PM launches initiatives worth ₹2.2 lakh crore for shipping and shipbuilding sectors at Maritime Leaders' Conclave; amid global tensions, India represents autonomy and inclusive growth, he says

Vinaya Deshpande Pandit
MUMBAI

The progress in India's maritime domain has been historic and the capability of major ports has doubled, Prime Minister Narendra Modi said on Wednesday.

"Cargo movement has increased 700% in inland areas. Today, India's ports are considered among the best in the developing world," he added.

Mr. Modi was speaking at the Maritime Leaders' Conclave held at the NESCO Ground to mark 'India Maritime Week'.

"When the global seas are rough, the world looks for a steady lighthouse. India can play that role very strongly. Amid global tensions, India represents autonomy and inclusive growth," Mr. Modi said, hinting at the prevailing global trade headwinds.

During the event, Mr. Modi launched initiatives worth ₹2.2 lakh crore for the shipping and shipbuilding sectors, including acquisition of 437 vessels.



Narendra Modi at an exhibition during the Maritime Leaders' Conclave at the India Maritime Week event in Mumbai. PTI

Several memoranda of understanding (MoUs) for port-led industrialisation, sustainability, and shipbuilding, among others, were signed.

**Sign of confidence**

"In 2016, the maiden India Maritime Week was held in Mumbai. Today, it has become a global summit. Eighty-five countries participate in it today. This itself sends a very big message," Mr. Modi said.

"The MoUs signed here show the confidence of the world in India's maritime capabilities."

"This [2025] is a crucial year for the country's maritime capabilities. The Vizhinjam deep water transit hub has been operational. It is a matter of pride for every Indian. Kandla port and the Jawaharlal Nehru Port Trust (JNPT) have shown great capabilities. The JNPT's handling capability has doubled, making it India's biggest container port," he added.

Speaking about reforms undertaken by the government to improve shipping and port efficiency and safety, Mr. Modi said, "We are taking big steps. Modern and futuristic laws have been implemented and old laws scrapped. They strengthen sustainability and enhance digitisation in ports. The safety of our ports has increased and ease of business has improved."

**Logistics performance**

Praising logistics performance of Indian ports, Mr. Modi said, "In the Logistics Performance Index of the World Bank, India had performed better."

"Shipbuilding is our top priority too. India is making great strides in shipbuilding," he said, adding, "New alternatives for finance and easy credit will be offered."

"We welcome your ideas, innovation and investment. Public-Private Partnerships [PPP] have been increasing. We are giving incentives to States to attract investment," he told the attendees at the conclave.

## 'Over 600 MoUs worth ₹12 lakh crore signed at the Maritime Week'

Agreements were in diverse sectors such as port development, indigenous ship building and container manufacturing: Sonowal

The Hindu Bureau
MUMBAI

More than 600 memorandum of understanding (MoUs) worth over ₹12 lakh crore were signed at the Indian Maritime Week 2025, Union Minister of Ports, Shipping and Waterways Sarbananda Sonowal said here on Thursday.

Mr. Sonowal said the MoUs were in diverse sectors such as ship building, port development, indigenous ship building and container manufacturing.

"In the last 11 years, whatever transformative journey we could create, we did. Also, in the transformative policy programmes whatever changes we could create, we did. This will ultimately make India globally, the most desirable, favourable investment destination," he said.

Secretary in the Ministry of Ports, Shipping, and Waterways Vijay Kumar said that of the MoUs signed, 30% were for port development and port modernisation, 20% for sustainable green shipping and green ports, 20% for shipping and ship building, 20% with regard to port-led industrialisation and 10% for trade, business and skilling.

"Maritime sector projects have long gestation periods. Investment comes in, it takes time to get invested. Already 60% of the MoUs entered into at the last summit have been grounded, meaning, the money [has been committed] and has started coming in," he said.

During the event, 11 global CEOs met with the PM.

"They represented different divisions of maritime sectors including, ports, port modernisation, port operators, dredging operators and ship building. In almost all the areas, they promised and committed to invest," Mr. Kumar said.

The event witnessed the participation of about one lakh people and delegates from 85 countries.



**Taking stock:** Prime Minister Narendra Modi visits a stall during the India Maritime Week 2025, in Mumbai. PTI

## PM launches projects worth ₹1.2K-cr in Guj

HT Correspondent
letters@hindustantimes.com

AHMEDABAD: Prime Minister Narendra Modi on Thursday inaugurated and laid the foundation stones for projects worth ₹1,220 crore near the Statue of Unity at Ekta Nagar in Narmada district of Gujarat.

The PM is on a two-day visit to Gujarat during which he is attending programmes in Ekta Nagar to mark the 150th birth anniversary of Sardar Vallabhbhai Patel.

During Thursday's event, Modi laid the foundation stones of 10 projects, including the Museum of Royal Kingdoms of India (₹367.25 crore), a visitor centre (₹140.45 crore), the Veer Balak Udyan (₹90.46 crore), travelator extension (₹27.43 crore), and a sports complex (₹23.60 crore), according to a government release.

He also launched 25 e-buses worth ₹30 crore, GSEC and SSNNL Quarters built at a cost of ₹56.33 crore, Birsa Munda Bhavan worth ₹303 crore, and Hospitality District (Phase-1) developed at ₹54.65 crore.



PM Narendra Modi launches a commemorative stamp on the eve of the 150th birth anniversary of Sardar Vallabhbhai Patel. DPR PMO

**PM Modi meets Sardar Patel's family**

PM Modi, on Thursday, also met with the family of Sardar Vallabhbhai Patel in Kevadia ahead of his 150th birth anniversary celebrations.

"Met the family of Sardar Vallabhbhai Patel in Kevadia. It was a delight to interact with them and recall the monumental contribution of Sardar Patel to our nation," he said in a post on X.

On Friday, the PM will offer floral tributes at the Statue of Unity and preside over the Rashtriya Ekta Diwas parade.

## Indian coffee becoming popular globally, says PM

PRIME MINISTER NARENDRA Modi on Sunday said Indian coffee is gaining popularity globally, driven by the diverse varieties grown in states, including Karnataka, Tamil Nadu and Kerala. In his 127th edition of his monthly radio address Mann ki Baat,

## Cabinet okays ₹37.9K-cr subsidy for P&K fertilisers

TRIBUNE NEWS SERVICE

NEW DELHI, OCTOBER 28

The Union Cabinet on Tuesday approved the proposal of the Department of Fertilisers for fixing the nutrient-based subsidy (NBS) rates for rabi season 2025-26 (from October 1, 2025, to March 31, 2026) on Phosphatic and Potassic (P&K) fertilisers.

The tentative budgetary requirement for this rabi season is approximately Rs 37,952.29 crore. This is approximately Rs 736 crore more than the budgetary requirement for kharif season 2025.

The subsidy for phosphate would be increased from Rs 43.60/kg in the kharif sea-

**Rates effective from Oct 1 to March 31**

the ongoing rabi season. Similarly, the subsidy for sulphur was raised from Rs 1.77/kg to Rs 2.87/kg.

Meanwhile, the subsidy rate for nitrogen and potash were kept unchanged at Rs 43.02/kg and Rs 2.38/kg, respectively.

I&B Minister Ashwini Vaishnaw said the subsidy rate has been fixed, considering the import price and factors like nutrient requirement, subsidy burden and MRP.

The subsidy on P&K fertilisers — including DAP (Di-Ammonium Phosphate) and ... Potash and Sulphur) grades will ensure smooth availability of these fertilisers to the farmers at affordable prices.

"DAP and TSP are highly consumed fertilisers. The increase in subsidy rate will benefit farmers in the rabi season," Vaishnaw said, adding that the government was bearing the burden to ensure fertilisers' retail prices do not rise.

The NBS scheme has been in effect since April 2010 and subsidies are paid directly to fertiliser companies, enabling them to sell fertilisers to farmers at affordable prices. The government also provides freight subsidies for transport and distribu-

## Govt sets in motion 8th pay panel plans

Rajeev Jayaswal
letters@hindustantimes.com

NEW DELHI: The Union Cabinet chaired by Prime Minister Narendra Modi on Tuesday approved the terms of reference for the 8th Pay Commission, setting in motion the process for increasing the salaries and pensions of nearly 12 million central government employees and pensioners with effect from January 1, 2026.

To be sure, the panel will take time to make its recommendations — it has to do so within 18 months of its constitution — which means the increases will likely be with retrospective effect. "The specific date will be decided once the interim report comes in...But, mostly it should be January 1, 2026," I&B minister Ashwini Vaishnaw said at a press briefing on Tuesday, responding to a question on the date of implementation of the pay panel's recommendations.

The panel will be headed by retired Supreme Court judge Ranjana Prakash Desai. It will have IIM (Bangalore) Professor Pulak Ghosh as a part-time member while petroleum secretary Pankaj Jain will be the member secretary.

The 7th Pay Commission recommended an increase of 23.55% in the salaries and allowances of government employees, with the change coming into effect from January 1, 2016. It also recommended a 24% increase in pensions with a 3% annual increment.

The Pay Commission's recommendations are highly anticipated and closely tracked — also because many state governments follow it for their own employees. The 8th Pay

continued on →13

**Terms of reference set**

**THE PANEL**
HEAD: Justice Ranjana Prakash Desai, retired SC judge
PART-TIME MEMBER: Pulak Ghosh, professor, IIM (Bangalore)
MEMBER SECRETARY: Pankaj Jain, petroleum secretary

**18 Months** Timeframe for the panel to make its recommendations after it is constituted

**Jan 1, 2026** When the increased salaries are likely to come into retrospective effect

**WHAT THE PREVIOUS PANEL SUGGESTED**
The 7th Pay Commission recommended an increase of 23.55% in the salaries and allowances of government employees, with the change coming into effect from January 1, 2016. It also recommended a 24% increase in pensions with a 3% annual increment

**FERTILISER SUBSIDIES INCREASED**
The cabinet approved allocating ₹37,952 crore as subsidy for phosphatic and potassic fertilisers for the rabi season. The subsidy approved is higher by about ₹14,000 crore from the previous Rabi season. →PTI



**ನವೆಂಬರ್ 24 - 403ನೇ ಜನ್ಮ ವಾರ್ಷಿಕೋತ್ಸವ**

**ರಾಷ್ಟ್ರವು ಕೃತಜ್ಞತೆಯಿಂದ ನಮಿಸುತ್ತದೆ**

# ವೀರ್ ಲಾಚಿತ್ ಬೋರ್ಫುಕನ್
# ಭಾರತದ ಧೈರ್ಯಶಾಲಿ ಪುತ್ರ

*ಅಸ್ಸಾಂನ ಜನಾಂಗೀಯ ಗುಂಪು "ಅಹೋಮ್" ಕಮಾಂಡರ್ ವೀರ್ ಲಾಚಿತ್ ಬೋರ್ಫುಕನ್ ಅವರ ಧೈರ್ಯ, ತಂತ್ರ ಮತ್ತು ಸಮರ ಪರಾಕ್ರಮವು ಸರೈಘಾಟ್ ಕದನದ ಅಲೆಯನ್ನೇ ತಿರುಗಿಸಿತು, ಇದು ಅಸ್ಸಾಂನ ಪವಿತ್ರ ಸಂಸ್ಕೃತಿ ಮತ್ತು ಭೂಮಿಯನ್ನು ವಿದೇಶಿ ಆಕ್ರಮಣಕಾರರಿಂದ ರಕ್ಷಿಸಲು ಸಹಾಯ ಮಾಡಿತು. ಸೀಮಿತ ಸಂಪನ್ಮೂಲಗಳನ್ನು ಹೊಂದಿದ್ದರೂ, ಅವರಿಗಿದ್ದ ಶೌರ್ಯ ಮತ್ತು ದೇಶಭಕ್ತಿಯಿಂದ ಬೃಹತ್ತಾದ ಮೊಘಲ್ ಸೈನ್ಯವನ್ನು ಸೋಲಿಸುವ ಸ್ವಾವಲಂಬಿ ಸೈನ್ಯವನ್ನು ಅವರು ಸ್ಥಾಪಿಸಿದರು. ಭಾರತದ ಶ್ರೇಷ್ಠ ಕಮಾಂಡರ್ ಲಾಚಿತ್ ಬೋರ್ಫುಕನ್ ಅಸ್ಸಾಂನ ಧೈರ್ಯಶಾಲಿ ಪುತ್ರ ಮಾತ್ರವಲ್ಲದೆ, ಭಾರತದ ಹೆಮ್ಮೆಯೂ ಆಗಿದ್ದರು...*

**ಲಾಚಿತ್ ಬೋರ್ಫುಕನ್ ಪರಂಪರೆಯ ಸಂರಕ್ಷಣೆ**

- ಕೇಂದ್ರ ಸರ್ಕಾರವು ಲಾಚಿತ್ ಬೋರ್ಫುಕನ್ ಅವರ ಪರಂಪರೆಯನ್ನು ಗೌರವಿಸಿದೆ, 2022ರಲ್ಲಿ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮವಾಗಿ ಅವರ 400ನೇ ಜನ್ಮ ವಾರ್ಷಿಕೋತ್ಸವವನ್ನು ಬಹಳ ಉತ್ಸಾಹದಿಂದ ಆಚರಿಸಿತು.
- ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2024 ಮಾರ್ಚ್ 9ರಂದು ಜೋರ್ಹತ್‌ನಲ್ಲಿ ವೀರ್ ಲಾಚಿತ್ ಬೋರ್ಫುಕನ್ ಅವರ 125 ಅಡಿ ಎತ್ತರದ ಬೃಹತ್ ಕಂಚಿನ ಪ್ರತಿಮೆ ಅನಾವರಣಗೊಳಿಸಿದರು.
- ಅವರ ಜೀವನ ಚರಿತ್ರೆಯನ್ನು 23 ಭಾಷೆಗಳಲ್ಲಿ ಪ್ರಕಟಿಸಲಾಗಿದೆ.
- 2023ರ ಗಣರಾಜ್ಯೋತ್ಸವದಲ್ಲಿ ಅಸ್ಸಾಂನ ಮಹಾನ್ ಅಹೋಮ್ ಕಮಾಂಡರ್ ಲಾಚಿತ್ ಬೋರ್ಫುಕನ್ ಅವರ ಸ್ತಬ್ಧಚಿತ್ರ ಮೆರವಣಿಗೆ ಜರುಗಿತು.
- 1999ರಿಂದ ರಾಷ್ಟ್ರೀಯ ರಕ್ಷಣಾ ಅಕಾಡೆಮಿ(ಎನ್‌ಡಿಎ)ಯಲ್ಲಿ ಅತ್ಯುತ್ತಮ ಕೆಡೆಟ್‌ಗೆ ಲಾಚಿತ್ ಬೋರ್ಫುಕನ್ ಚಿನ್ನದ ಪದಕ ನೀಡಲಾಗುತ್ತಿದೆ, ಇದರಿಂದಾಗಿ ದೇಶದ ಎಲ್ಲಾ ಧೈರ್ಯಶಾಲಿ ಸೈನಿಕರು ಈ ಯೋಧನಿಂದ ಸ್ಫೂರ್ತಿ ಪಡೆಯುತ್ತಿದ್ದಾರೆ.

> **"ಧೈರ್ಯಶಾಲಿ ಕಮಾಂಡರ್ ಲಾಚಿತ್ ಬೋರ್ಫುಕನ್ ಅವರ ಜೀವನವು ದೇಶ ಎದುರಿಸುತ್ತಿರುವ ಅನೇಕ ಸವಾಲುಗಳನ್ನು ಧೈರ್ಯದಿಂದ ಎದುರಿಸಲು ನಮಗೆ ಸ್ಫೂರ್ತಿ ನೀಡುತ್ತದೆ. ಇದು ವೈಯಕ್ತಿಕ ಹಿತಾಸಕ್ತಿಗಳಿಗಿಂತ ರಾಷ್ಟ್ರೀಯ ಹಿತಾಸಕ್ತಿಗೆ ಹೆಚ್ಚಿನ ಆದ್ಯತೆ ನೀಡಲು ನಮಗೆ ಸ್ಫೂರ್ತಿ ನೀಡುತ್ತದೆ. ನಮಗೆ, ದೇಶವು ಸರ್ವೋಚ್ಚವಾಗಿರಬೇಕು, ಅದು ಸ್ವಜನಪಕ್ಷಪಾತವಾಗಿರಬಾರದು.**
>
> - ನರೇಂದ್ರ ಮೋದಿ, ಪ್ರಧಾನ ಮಂತ್ರಿ


**NEW INDIA SAMACHAR FORTNIGHTLY**

**DELKAN/2020/78828** **November 16-30, 2025**

RNI Registered No DELKAN/2020/78828, Delhi Postal License No DL(S)-1/3543/2023-25, WPP NO U(S)-91/2023-25, posting at BPC, Market Road, New Delhi-110001 on 13-17 advance Fortnightly (Publishing Date: November 04, 2025, Pages -52)

**EDITOR IN CHIEF**
**Dhirendra Ojha**
Principal Director General,
Press Information Bureau, New Delhi

**PUBLISHED & PRINTED BY:**
**Kanchan Prasad**
Director General, on behalf of
Central Bureau Of Communication

**PUBLISHED FROM:**
Room No–278, Central Bureau Of Communication, 2nd Floor, Soochna Bhawan, New Delhi -110003

**Printed at**
**Kaveri Print Process Pvt. Ltd.**
**A-104 Sector-65,**
**Noida-201301 U.P.**

Kannada
Vol.6 Issue-10